ಪ್ರಚೋದನೆ

ಲಂಕೇಶ್

19 ಆಗಸ್ಟ್ 2015 ಪುಟ 20 ರೂ. 15/-





ಎರಡು ಸಾವುಗಳು

...ಶಹಭಾಷ್ ...ಾಯ್‌ಜಾನ್




BBMP ಕಾಳಗ

ಅಶೋಕ್ v/s ರೇವಣ್ಣ

...ರ್ಗ: ಗೂಳಿ 'ಹಟ್ಟಿ'ಯಲ್ಲಿ ಕೇಶವ




ದಕ್ಷಿಣಕನ್ನಡ: ರೈತನ ಕೈ ಕತ್ತರಿಸಿದ ಭೂಮಾಲಿಕ

...ಳ್ಳಾರಿ: ಬಡವರ ಬದುಕಿಗೆ ...ಯಿಟ್ಟ ರೆಡ್ಡಿಯ ಭೂ 'ಪ್ರತಾಪ'



ಸಾಮಾನ್ಯ ಜ್ಞಾನ ಹಾಗೂ ಕನಿಷ್ಠ ತರ್ಕದ ಅಗತ

ಅಂಚಿನಿಂದ....



ಡಾ.ವಾಸು ಎಚ್.ವಿ.

ಕೆಲವೊಮ್ಮೆ ಬಹಳ ಸೋಜಿಗವೆನಿಸುತ್ತದೆ. ನೀವು ಒಂದು ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡಿರುತ್ತೀರಿ. ಆ ಕ್ಷೇತ್ರದ ಒಳಹೊರಗು ನಿಮಗೆ ಸಾಕಷ್ಟು ಗೊತ್ತಿರುತ್ತದೆ. ಆದರೆ ಅದಕ್ಕೆ ಸಂಬಂಧಿಸಿದ ಒಂದು ಸಣ್ಣ ವಿಚಾರಕ್ಕೆ 'ಹೊರಗಡೆ' ಸಮಾಜದಲ್ಲಿ ನಿಮಗಿಂತ ಸಂಪೂರ್ಣ ವ್ಯತಿರಿಕ್ತವಾದ ಒಂದು ಅಭಿಪ್ರಾಯ ಚಾಲನೆಯಲ್ಲಿರುತ್ತದೆ. ಹಲವು ಸಾರಿ ಅದು ವಿಶ್ಲೇಷಣೆಗೆ ಸಂಬಂಧಿಸಿದ ಸಂಗತಿಯೂ ಆಗಿರುವುದಿಲ್ಲ, ಕೇವಲ ವಾಸ್ತವಿಕ ಮಾಹಿತಿ ಎಂದು ಕರೆಯಬಹುದಾದ ರೀತಿಯ ಅಂಶಗಳ ಕುರಿತೂ 'ಸಾರ್ವಜನಿಕ ಅಭಿಪ್ರಾಯ' ಭಿನ್ನವಾಗಿರುತ್ತದೆ. ಈ 'ಸಾರ್ವಜನಿಕ ಅಭಿಪ್ರಾಯ' ಅಥವಾ 'ಸಾರ್ವಜನಿಕ ಸಾಮಾನ್ಯ ಜ್ಞಾನ' (Public commonsense) ಹೇಗೆ ರೂಪುಗೊಳ್ಳುತ್ತದೆ ಎಂಬುದರ ಬಗ್ಗೆ ಈಗಾಗಲೇ ಹಲವರು ಚರ್ಚಿಸಿದ್ದಾರೆ. ಆದರೂ, ಇದರ ಕುರಿತು ಇನ್ನೂ ಆಳವಾದ ಮತ್ತು ವಿವರವಾದ ಅಧ್ಯಯನ ನಡೆಯುವ ಅಗತ್ಯವಿದೆ. ನೋಮ್ ಚಾಮ್‌ಸ್ಕಿಯವರು 'ಒಪ್ಪಿಗೆಯ ಉತ್ಪಾದನೆ' (Manufacturing consent) ಬಗ್ಗೆ ಹೇಳುವಾಗ ಸಮಾಜದ ಬಲಾಢ್ಯ ಶಕ್ತಿಗಳು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಹೇಗೆ ರೂಪಿಸುತ್ತಾರೆ ಎಂಬುದನ್ನು ವಿವರಿಸುತ್ತಾರೆ.

ನಮ್ಮಲ್ಲಿ 'ಅಭಿಪ್ರಾಯದ ಉತ್ಪಾದನೆ'ಯು ವಿವಿಧ ಸ್ತರಗಳಲ್ಲಿ ನಡೆಯುತ್ತದೆ. ಇದನ್ನು ಕೆಲವರು ಕೂತು, ಯೋಚಿಸಿ, ಪ್ರತಿನಿತ್ಯ ಅದರ ಸುತ್ತ ವ್ಯವಸ್ಥಿತವಾಗಿ ಸುದ್ದಿಗಳನ್ನು ಹರಡಿ ಮಾಡುವುದಿಲ್ಲ. ಆದರೆ, ಅದು ನಿಜಕ್ಕೂ ವ್ಯವಸ್ಥಿತ ಎಂದು ಕರೆಯಬಹುದಾದ ರೀತಿಯಲ್ಲೇ ನಡೆಯುತ್ತಿರುತ್ತದೆ. ಯಾರ ವಿರುದ್ಧ ಇಂತಹ ಅಭಿಪ್ರಾಯ ಮೂಡಿಸಲಾಗುತ್ತದೆಯೋ (ಬಹುಮಟ್ಟಿಗೆ ಅದು ಸಾಮಾನ್ಯ ಜನರ ವಿರುದ್ಧವಾಗಿ, ಅದರಲ್ಲೂ ಜನರಲ್ಲೇ ಇರುವ ದಮನಿತ ವಿಭಾಗಗಳ ಕುರಿತಾಗಿ ನಡೆಯುತ್ತಿರುತ್ತದೆ), ಅವರ ಪರವಾಗಿ ಕೆಲಸ ಮಾಡುವ ಸಂಘಟನೆಗಳೂ ಸಹ ಇಂತಹ 'ಸಾಮಾನ್ಯ ಜ್ಞಾನ'ದ ವಿರುದ್ಧ ವ್ಯವಸ್ಥಿತವಾದ ಪ್ರತಿದಾಳಿಯನ್ನು ನಡೆಸಲು ಅಷ್ಟು ಸಜ್ಜಾಗಿಲ್ಲ. ಹೀಗಾಗಿ ಹೋರಾಟದ ಮೂಲಕ ಕೆಲವೊಮ್ಮೆ ಸರ್ಕಾರವನ್ನು ಮಣಿಸಿಬಿಡಬಹುದಾದರೂ, ಸಮಾಜವನ್ನು ಬದಲಿಸುವುದು ಅಷ್ಟು ಸುಲಭದ ಕೆಲಸವಾಗಿಲ್ಲ.

ಕೆಲವು ಉದಾಹರಣೆಗಳ ಮೂಲಕ ಇದನ್ನು ಪರಿಶೀಲಿಸೋಣ. ಸಮಕಾಲೀನವಾಗಿ ಚಾಲ್ತಿಯಲ್ಲಿರುವ ಉದಾಹರಣೆಗಳನ್ನೇ ನೋಡೋಣ. 'ರೈತರ ಆತ್ಮಹತ್ಯೆಗೆ ಕುಡಿತವು ಪ್ರಧಾನ ಕಾರಣಗಳಲ್ಲಿ ಒಂದು'. ಕೆಲವರು ಅದನ್ನು ಪ್ರಧಾನ ಕಾರಣಗಳಲ್ಲಿ ಸೇರಿಸದಿರಬಹುದು. ಆದರೆ ಬಹುತೇಕರು ಅದೂ ಸಹ ಮುಖ್ಯವಾದುದೇ ಎಂದು ಭಾವಿಸುತ್ತಾರೆ. ಇದನ್ನು ಸಮರ್ಥಿಸಲು ಯಾವುದಾದರೂ ಅಧ್ಯಯನ ಇದೆಯೇ? ಏನಾದರೂ ಅಂಕಿ-ಅಂಶಗಳು ಲಭ್ಯವಿದೆಯೇ? ಒಂದು ವೇಳೆ ಕುಡಿತವು ನಿಜವಾಗಿ ಹೆಚ್ಚಾಗಿರುವುದಾದಲ್ಲಿ ಅದಕ್ಕೆ ಕಾರಣವೇನು? ಪರಿಹಾರವೇನು? ಇವ್ಯಾವುದಕ್ಕೂ ಸಮಂಜಸವಾದ ಉತ್ತರ ಕೊಡುವುದಿಲ್ಲ, ಏಕೆಂದರೆ, ಉತ್ತರ ಅವರ ಬಳಿ ಇರುವುದಿಲ್ಲ, ಆದರೂ, 'ಮದ್ಯ ವ್ಯಸನ ಕೇಂದ್ರಗಳನ್ನು ಹೆಚ್ಚು ಮಾಡುವುದರ ಮೂಲಕ ಆತ್ಮಹತ್ಯೆಗಳನ್ನು ಒಂದಷ್ಟು ಪ್ರಮಾಣಕ್ಕಾದರೂ ಕಡಿಮೆ ಮಾಡಬಹುದು' ಎಂದು ಅಧಿಕಾರಿಗಳು ಹೇಳುತ್ತಾರೆ. ರೈತ ಸಮುದಾಯದ ಮೇಲೆ ಈ ಆರೋಪವನ್ನು ಸತತವಾಗಿ ಕೇಳಬಹುದು. ಬೇರೆ ಯಾರೋ ಇದನ್ನು ಮಾಡುವುದಲ್ಲ; ಸ್ವತಃ ರೈತರೂ ಈ ರೀತಿ ಹೇಳುವುದನ್ನು ಕೇಳಬಹುದು.

ವಾಸ್ತವವೇನು? 2003ರಲ್ಲಿ ರೈತರ ಆತ್ಮಹತ್ಯೆಗಳ ಕುರಿತ ಅಧ್ಯಯನ ನಡೆಸಿದ ಜಿ.ಕೆ.ವೀರೇಶ್ ಸಮಿತಿಯು ಒಟ್ಟು ಆತ್ಮಹತ್ಯೆಗಳಲ್ಲಿ ಶೇ.15ರಷ್ಟು ಕುಡಿತದ ಕಾರಣದಿಂದ ಆಗಿದೆ ಎಂದು ಹೇಳಿದೆ. ಈ ಅಂಶಕ್ಕೆ ಸಾಕಷ್ಟು ವಿರೋಧ ಬಂತಾದರೂ, ಸದರಿ ಸಮಿತಿಯೂ ಹೇಳಿದ್ದು, ಶೇ.85ರಷ್ಟು ಸಾವುಗಳು ಕುಡಿತದಿಂದ ಅಲ್ಲ ಎಂದು ತಾನೇ? ಒಂದು ವೇಳೆ, ಕುಡಿತದಿಂದಲೂ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ ಎನ್ನುವುದಾದಲ್ಲಿ, 'ನಾಗರಿಕ ಸರ್ಕಾರ'ವೊಂದು ಏನು ಮಾಡಬೇಕು? ಪಾನನಿಷೇಧದ ಕಡೆಗೆ ಸಾಗಬೇಕು ಅಥವಾ ಹಳ್ಳಿಗಳಲ್ಲಿ ಮದ್ಯವು ಸುಲಭಕ್ಕೆ ಲಭ್ಯವಾಗದಂತೆ ಮಾಡಬೇಕು. ಮಾಡಿದ್ದೇನು? 2003ರಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮವನ್ನು ಸ್ಥಾಪಿಸಿತು. ಅದರ ಮುಖಾಂತರ ಮದ್ಯದ ವಹಿವಾಟು ವ್ಯವಸ್ಥಿತವಾಗಿ ಆಗುವಂತೆ ನೋಡಿಕೊಂಡಿತು. ನಂತರ ಸಾರಾಯಿ ನಿಷೇಧವೂ ಆಯಿತು. ಅಂದರೆ, ಕುಡಿತದ ಪ್ರಮಾಣ ಕಡಿಮೆ ಮಾಡಲಾಯಿತೆಂದು ತಿಳಿದುಕೊಳ್ಳಬೇಡಿ. ಅಲ್ಲಿಂದ ಮುಂದಕ್ಕೆ ಪ್ರತೀ ತಿಂಗಳೂ, ಮದ್ಯ ಮಾರಾಟ ಇಂತಿಷ್ಟೇ ಮಾಡಬೇಕೆಂದು ತಾಕೀತು ಮಾಡಿ, ಮದ್ಯ ಮಾರಾಟವನ್ನು ಹೆಚ್ಚಿಸಲಾಯಿತು. ಇಷ್ಟನ್ನು ಬಾರ್ ಮತ್ತು ವೈನ್‌ಸ್ಟೋರ್‌ಗಳು ಮಾರಾಟ ಮಾಡಲು ಸಾಧ್ಯವಾಗದೇ ಹೋದದ್ದರಿಂದಾಗಿ, ಅವರುಗಳು ಹಳ್ಳಿಗಳ ಸಣ್ಣ ಪುಟ್ಟ ಅಂಗಡಿಗಳಿಗೆ ಅದನ್ನು ಮಾರಲಾರಂಭಿಸಿದರು. ಅಂದರೆ, ಹಳ್ಳಿಗಳಲ್ಲಿ ಮದ್ಯವು ಮತ್ತಷ್ಟು ಸುಲಭವಾಗಿ ಸಿಗುವಂತೆ ಆಯಿತು. ಮಂಡ್ಯ ಜಿಲ್ಲೆಯಲ್ಲಿ ಆ ಹೊತ್ತಿಗೆ ಸುಮಾರು 45 ಕೋಟಿಗಳಷ್ಟು ಇದ್ದ ವಹಿವಾಟು, ಈ 10 ವರ್ಷಗಳಲ್ಲಿ 450 ಕೋಟಿ ರೂ. ಆಗಿದೆ.

ಅಂದರೆ, ಕುಡಿತದ ಕಾರಣದಿಂದ ಇದ್ದ ಶೇ.15ರಷ್ಟು ಆತ್ಮಹತ್ಯೆಗಳನ್ನು 10 ಪಟ್ಟು ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ ಎಂಬ ಪ್ರಶ್ನೆ ಕೇಳಬೇಕಿದೆ. ವಾಸ್ತವದಲ್ಲಿ ವಿಪರೀತ ಕುಡಿತ, ಇಸ್ಪೀಟಿಗೆ ದಾಸರಾಗಿರುವವರು ಆತ್ಮಹತ್ಯೆಗೆ ಮುಂದಾಗುತ್ತಿಲ್ಲ. ನಮ್ಮ ಅಧ್ಯಯನದ ಪ್ರಕಾರ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರಲ್ಲಿ ಕುಡಿತದ ವ್ಯಸನ ಶೇ.10ಕ್ಕಿಂತ ಕಡಿಮೆ ಇದೆ. ಆದರೂ, ನೀವು ರೈತರ ಆತ್ಮಹತ್ಯೆಯ ವಿಚಾರ ಎತ್ತಿದರೆ ಸಾಕು, 'ಅವನೆಲ್ಲೋ ಕುಡಿದು ಸತ್ತಿರುತ್ತಾನೆ. ಇವರು ಅದಕ್ಕೆ ಆತ್ಮಹತ್ಯೆಯ ಬಣ್ಣ ಕಟ್ಟುತ್ತಿದ್ದಾರೆ'. ಹಳ್ಳಿಗಳಲ್ಲಿ ಕುಡಿತ ಹೆಚ್ಚಾಗಿಲ್ಲ ಎಂದರ್ಥವಲ್ಲ, ಆ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವವರು ಇಲ್ಲವೇ ಇಲ್ಲ ಎಂತಲೂ ಅಲ್ಲ, ಆದರೆ, ಶೇ.10ಕ್ಕಿಂತ ಕಡಿಮೆಯನ್ನು ಶೇ.100 ಮಾಡುತ್ತಿರು ವುದು ಹೇಗೆ, ಯಾರು ಎಂಬುದೇ ಪ್ರಶ್ನೆ. ಅದೇ ಸಂದರ್ಭದಲ್ಲಿ 10 ಪಟ್ಟು ಕುಡಿತ ಹೆಚ್ಚಿಸುವುದನ್ನು ಮಾಡಿರುವ ಸರ್ಕಾರದ ನೀತಿ (ಇದರಲ್ಲಿ ರಾಜ್ಯವಾಳಿರುವ ಮೂರೂ ಪಕ್ಷಗಳು ಪಾಲುದಾರರು)ಗಳು ಟಾರ್ಗೆಟ್ ಆಗುವುದೇ ಇಲ್ಲ.

ಹಾಗೆಯೇ 'ದುಂದುವೆಚ್ಚವೇ ಆತ್ಮಹತ್ಯೆಗೆ ಕಾರಣ'. ದುಂದುವೆಚ್ಚವೂ ನಡೆಯುತ್ತಿದೆ, ದುಬಾರಿ ಮದುವೆಗಳೂ ನಡೆಯುತ್ತಿವೆ. ಆದರೆ ಆತ್ಮಹತ್ಯೆಗೆ ಗುರಿಯಾಗಿರುವವರಲ್ಲಿ ಎಷ್ಟು ಜನರು ದುಂದುವೆಚ್ಚದ ಕಾರಣಕ್ಕಾಗಿ ಸಾಲ ಮಾಡಿಕೊಂಡು, ತೀರಿಸಲಾಗದೇ ಸತ್ತಿದ್ದಾರೆ ಎಂಬ ಬಗ್ಗೆ ಹೋಗಿ ಪರಿಶೀಲಿಸಿದವರು ಯಾರು? ಅವರು ಮಕ್ಕಳ ಶಿಕ್ಷಣ, ಕುಟುಂಬದ ಸದಸ್ಯರ ಆರೋಗ್ಯಕ್ಕಾಗಿ ಹಣ ಖರ್ಚು ಮಾಡಿದ್ದರೆ ಅದನ್ನು ದುಂದುವೆಚ್ಚ ಎನ್ನಬಹುದೇ? ಅವರ ಮಗಳ ಮದುವೆಗೆ ವರದಕ್ಷಿಣೆ ನೀಡದೇ, ದೊಡ್ಡ ಕಲ್ಯಾಣಮಂಟಪದಲ್ಲಿ ಮದುವೆ ಮಾಡಲು ಮುಂದಾಗದಿದ್ದಲ್ಲಿ, 'ಒಳ್ಳೆಯ' ಗಂಡು ಸಿಗುತ್ತಿತ್ತೇ? ಈ ಮೌಲ್ಯಗಳನ್ನು ಸೃಷ್ಟಿಸಿದ್ದು ರೈತರೇ ಅಥವಾ ಅವರುಗಳ ಕುರಿತು ಮುಂಖಾನುಮುಂಖಿವಾಗಿ ಚರ್ಚಿಸುವ ಇತರರೇ? ಇವ್ಯಾವುವೂ ಕಾಮನ್‌ಸೆನ್ಸ್‌ನ ಭಾಗವಾಗದೇ, ಬಿಡುಬೀಸು ಹೇಳಿಕೆಗಳಾಗುವುದು ಸಾಧ್ಯವಾಗುತ್ತಿರುವ ಹಿನ್ನೆಲೆಯನ್ನು ನಾವು ಕೂಲಂಕಷವಾಗಿ ಪರಿಶೀಲಿಸುವ ಅಗತ್ಯವಿದೆ.

ಶ್ರೀಮಂತರು ತೆರಿಗೆ ಕಟ್ಟುತ್ತಾರೆ, ಆ ತೆರಿಗೆಯಿಂದ ಬಡವರಿಗೆ ಪುಕ್ಕಟೆ ಸೌಲಭ್ಯಗಳನ್ನು ನೀಡಲಾಗುತ್ತಿದೆ, ಅವರ ಸಾಲಮನ್ನಾ ಮಾಡಲಾಗುತ್ತಿದೆ ಎಂಬ ಒಂದು ಅಭಿಪ್ರಾಯ 'ತೆರಿಗೆ ಕಟ್ಟುವ ಶ್ರೀಮಂತರಲ್ಲಿ' ಸಾಕಷ್ಟು ಚಾಲ್ತಿಯಲ್ಲಿದೆ. ಕೆಲವರಿಗಂತೂ ಆ ಬಗ್ಗೆ ಸಿಕ್ಕಾಪಟ್ಟೆ ಸಿಟ್ಟೇ ಇದೆ.



ರೈತರು, ದಲಿತರು, ಹಿಂದುಳಿದವರೆಲ್ಲರ ಸಾಲಮನ್ನಾದ ಪ್ರಮಾಣ ಎಷ್ಟು ಎಂಬುದನ್ನು ನೋಡೋಣ. ಕಳೆದ 60 ವರ್ಷಗಳಲ್ಲಿ ಈ ಸಮುದಾಯಗಳ ಎಲ್ಲರ ಒಟ್ಟು ಸಾಲಮನ್ನಾ ಎಷ್ಟಾಗಿರಬಹುದು? ಯುಪಿಎ ಸರ್ಕಾರ ಮಾಡಿದ 60,000 ಕೋಟಿ ರೂ.ಗಳದ್ದೇ ಅತೀ ದೊಡ್ಡ ಸಾಲಮನ್ನಾ. ಇನ್ನುಳಿದವೆಲ್ಲಾ ಕೆಲವು ಬಿಡಿ ಸಾವಿರ ಅಥವಾ ನೂರು ಕೋಟಿಗಳದ್ದು. ಅಂದರೆ, ಇಷ್ಟೂ ವರ್ಷಗಳ ಒಟ್ಟು ಸಾಲಮನ್ನಾದ ಪ್ರಮಾಣ 5 ಲಕ್ಷ ಕೋಟಿಗಳನ್ನು ದಾಟುವುದಿಲ್ಲ. ಆದರೆ, ಈ ವರ್ಷದ (2015-16) ಬಜೆಟ್‌ನಲ್ಲಿ ಕೇಂದ್ರ ವಿತ್ತ ಸಚಿವ ಅರುಣ್ ಜೇಟ್ಲಿ ನೀಡಿದ ಒಂದು ಮಾಹಿತಿ ನಮ್ಮನ್ನು ದಂಗುಬಡಿಸುತ್ತದೆ. ಹಿಂದಿನ ಸಾಲಿನಲ್ಲಿ ಸರ್ಕಾರವು ಕೈಬಿಟ್ಟ ಆದಾಯ (income forgone) ದ ಪ್ರಮಾಣ 5.89 ಲಕ್ಷ ಕೋಟಿ ರೂ.ಗಳು. ಅದರಲ್ಲಿ 40 ಸಾವಿರ ಕೋಟಿಗಳು ತೆರಿಗೆ ಕಟ್ಟುವ ದೊಡ್ಡ ಸಂಖ್ಯೆಯ ಮೇಲ್ಮಧ್ಯಮ ವರ್ಗದ್ದಾದರೆ, ಕಾರ್ಪೊರೇಟ್ ಕಂಪೆನಿಗಳಿಗೆ ಸರ್ಕಾರ ನೀಡಿದ ರಿಯಾಯಿತಿ 5.49 ಲಕ್ಷ ಕೋಟಿ ರೂ.ಗಳು. ಇವಿಷ್ಟೂ ಒಂದೇ ವರ್ಷದಲ್ಲಿ! ಆದ್ದರಿಂದಲೇ ಸರ್ಕಾರದಿಂದ ಯಾರು ಉಪಕೃತರು ಅಥವಾ ಯಾರ್‍ಯಾರು ಎಷ್ಟೆಷ್ಟು ಉಪಕೃತರು ಎಂಬುದನ್ನು ಸೂಕ್ತವಾಗಿ ಪರಿಶೀಲಿಸುವ ಅಗತ್ಯವಿದೆ.

ಈಚೆಗೆ ರೈತರ ಸಮಸ್ಯೆಗಳ ಪರಿಹಾರದ ವಿಚಾರ ಹಿಡಿದುಕೊಂಡು ಹಳ್ಳಿಗಳಿಗೆ ಹೋದಾಗ ಜನಸಾಮಾನ್ಯರ 'ಕಾಮನ್‌ಸೆನ್ಸ್'ನಲ್ಲಿ ಗಟ್ಟಿಯಾಗಿ ಕುಳಿತಿರುವ ಕೆಲವು ಸಂಗತಿಗಳನ್ನು ನೋಡಿ ಗಾಬರಿಯಾಯಿತು. ರೈತರ ಇವತ್ತಿನ ಸಮಸ್ಯೆಗಳಲ್ಲಿ ಇವತ್ತಿನ ಮತ್ತು ಈ ಹಿಂದಿನ ಕೇಂದ್ರ ಸರ್ಕಾರದ್ದು ಪ್ರಧಾನ ಪಾಲು ಇದೆಯಾದರೂ, ಅದರಲ್ಲಿ ಸಿದ್ದರಾಮಯ್ಯನವರ ಸರ್ಕಾರದ ಪಾಲೂ ಇರುವುದು ನಿಜ. ಆದರೆ, ಬಲಾಢ್ಯ ಜಾತಿಗಳ ರೈತರ ಏಕೈಕ ಟಾರ್ಗೆಟ್ ಸಿದ್ದರಾಮಯ್ಯನವರು. ಏಕೆಂದರೆ, ಅವರ ಪ್ರಕಾರ ತಮ್ಮ ಒಂದು ಮುಖ್ಯ ಸಮಸ್ಯೆ-ಕೂಲಿಯಾಳುಗಳ ಕೂಲಿ ಹೆಚ್ಚಾಗಿರುವುದು ಮತ್ತು ಅದಕ್ಕೆ ಕಾರಣ ಅನ್ನಭಾಗ್ಯ ಯೋಜನೆ. ವಾಸ್ತವದಲ್ಲಿ ಕಳೆದ 15ಕ್ಕೂ ಹೆಚ್ಚು ವರ್ಷಗಳಿಂದ ನಗರ ಪ್ರದೇಶಗಳಿಗೆ ಕೂಲಿಕಾರರ ವಲಸೆ ತೀವ್ರವಾಗಿ ಹೆಚ್ಚುತ್ತಿದೆ. 4-5 ವರ್ಷಗಳ ಹಿಂದೆ ಕೂಲಿಯವರಿ[...] ಸಮಸ್ಯೆ ಸಾಕಷ್ಟು ಹೆಚ್ಚಿತ್ತು, ಅದಕ್ಕೂ ಸಿದ್ದರಾಮಯ್ಯನವರ ಅನ್ನಭಾಗ್ಯಕ್ಕೂ ಅಂತಹ ಸಂಬಂಧವೇನಿಲ್ಲ, ಅನ್ನಭಾಗ್ಯದ ಆರಂಭದ ಒಂದೂ[...] ವರ್ಷ ಕೊಡುತ್ತಿದ್ದ ಆಹಾರ ಧಾನ್ಯದ ಪ್ರಮಾಣವನ್ನು ಇದೀಗ 5 ಕೆ.ಜಿ.ಗಳಿಗೆ ಇಳಿಸಲಾಗಿದೆ. ಇದನ್ನು ಹಿಂದಿನ ಸರ್ಕಾರವೂ ಕೊಡುತ್ತಿತ್ತು, 3.20 ರೂ.ಗಳ[...] ಅದನ್ನು ಉಚಿತವಾಗಿಸಿರುವ ಸಿದ್ದರಾಮಯ್ಯನವರು ಬಡವರಿಗೆ ಹೆಚ್ಚಾಗಿ ಉಳಿಸುತ್ತಿರುವುದು 16 ರೂ.ಗಳಷ್ಟೇ. ಆದರೆ, ಅಹಿಂದ ಸಮುದಾಯವು ಈ[...] ಸರ್ಕಾರದಿಂದ ಸಿಕ್ಕಾಪಟ್ಟೆ ಉಪಕೃತವಾಗಿರುವುದೇ ತಮ್ಮ ಸಮಸ್ಯೆಗಳಿಗೆ ಕಾರಣ ಎಂದು ಇತರರು ಅಷ[...] ಬಲವಾಗಿ ಏಕೆ ಭಾವಿಸುತ್ತಿದ್ದಾರೆ?


ಈ ಥರದ ಕಾಮನ್‌ಸೆನ್ಸ್ ಇನ್ನೂ ಹತ್ತು[...] ಹಲವು ರೀತಿಗಳಲ್ಲಿ ಹರಡಿಕೊಂಡಿದೆ. ದೇಶದ[...] ಕೈಗಾರಿಕೆ ಬೆಳೆಯದಿರುವುದಕ್ಕೆ ಕಾರ್ಮಿಕ ಸಂಘಟನೆಗಳು ಮುಷ್ಕರ ನಡೆಸೀ, ನಡೆಸೀ ಕೈಗಾರಿಕೆಗಳನ್ನು ಮತ್ತು ಸಾರ್ವಜನಿಕ ವಲಯ[...] ಉದ್ದಿಮೆಗಳನ್ನು ಹಾಳುಗೆಡವಿರುವುದೇ ಕಾರಣ[...] ಹಾಗಾಗಿ ಎಲ್ಲವೂ ಖಾಸಗಿಯವರ ಕೈಗೆ ಹೋಗಬೇಕು ಮತ್ತು ಕಾರ್ಮಿಕರು ಗುತ್ತಿಗೆ ಪದ್ಧತಿಯಲ್ಲಿ ಇದ್ದರೆ, ಸರಿಯಾಗಿ ಕೆಲಸ ಮಾಡುತ್ತಾರೆ. ಸರ್ಕಾರೀ ವಲಯದಲ್ಲಿನ ಭ್ರಷ್ಟಾಚಾರ ನೋಡಿ ಹೀಗೆ ಹೇಳುತ್ತಿದ್ದಾರೆ ಎಂದು ಭಾವಿಸುವಂತೆಯೂ ಇಲ್ಲ. ಏಕೆಂದರೆ, ಖಾಸಗಿ ವಲಯದಲ್ಲಿನ ಭ್ರಷ್ಟಾಚಾರ ಅವರಿಗೆ ಭ್ರಷ್ಟಾಚಾರದಂತೆ ಕಾಣಿಸುವುದೇ ಇಲ್ಲ.

ಆದರೆ, ಈ ರೀತಿಯ ಸಾರ್ವಜನಿಕ ಕಾಮನ್‌ಸೆನ್ಸ್ ಜನಸಾಮಾನ್ಯರ ವಿರುದ್ಧವೇ ಇರುವುದು ಮತ್ತು ಅದೇ ಜನಸಾಮಾನ್ಯರ[...] ಇಂತಹ ಕಾಮನ್‌ಸೆನ್ಸ್ ಹೊಂದಿರುವುದ[...] ವಿಪರ್ಯಾಸದ ಸಂಗತಿಯಾಗಿದೆ. ದಲಿತ[...] ಕುರಿತಾಗಿ, ಮಹಿಳೆಯರ ಕುರಿತಾಗಿ ಹ[...] ಹಲವಾರು ಪೂರ್ವಗ್ರಹಪೀಡಿತ ತಪ್ಪು ಅಭಿಪ್ರಾಯಗಳು ಸಾಕಷ್ಟು ಚಲಾವಣೆಯಲ್ಲಿವೆ. ಇನ್ನು ಮುಸ್ಲಿಮರ ಕುರಿತಾಗಿ ಇರುವ ತಪ್ಪು ಗ್ರಹಿಕೆಗಳಿಗಂತೂ ಲೆಕ್ಕವೇ ಇಲ್ಲ. ಕೆಲವೊಮ್ಮೆ ಇಂತ[...] ಜನವಿಭಾಗಗಳಲ್ಲಿನ ಜನರು, ತಮ್ಮ ಬಗ್ಗೆ ಇರುವ ಪೂರ್ವಗ್ರಹಗಳ ಬಗ್ಗೆ ಮಾತ್ರ ಸಿಟ್ಟನ್ನು ಹೊಂದಿರುತ್ತಾರೆ. ತಮ್ಮಂತೆಯೇ ದಮನಿತರಾದ ಇನ್ನೊಂದು ಜನವಿಭಾಗದ ಕುರಿತು ಅವರು ಅದೇ ರೀತಿಯ ಪೂರ್ವಗ್ರಹಗಳನ್ನು ಹೊಂದಿರುತ್ತಾರೆ.

ನಾವು ಮಾಹಿತಿಯನ್ನು ಸರಿಯಾಗಿ ಸಂಗ್ರಹಿಸುವುದರಿಂದ ಈ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಬಹುದೇ ಅಥವಾ ಮಾಹಿತಿಯನ್ನು ಪರಿಣಾಮಕಾರಿಯಾಗಿ ಎಲ್ಲೆಡೆ ತಲುಪಿಸುವುದರಿಂದ ಇವನ್ನು ಹೋಗಲಾಡಿಸಬಹುದೇ? ಇತರರ ಮಾತು ಹಾಗಿರಲಿ, ಪತ್ರಿಕೆಗಳಿಗೆ ಬರೆಯುವ, ಅಲ್ಲಿ ಇಲ್ಲಿ ಸಾಕಷ್ಟು ಭಾಷಣ ಮಾಡುವ, ಇತರರಿಗೆ ಬೋಧನೆ ಮಾಡುವ ನಾವಾದರೂ ಒಂದು ಕನಿಷ್ಠ ತರ್ಕವನ್ನು ಎಲ್ಲಾ ಕಡೆಯಲ್ಲೂ ಅನ್ವಯಿಸುವ ಅಗತ್ಯವಿದೆ. ಇಲ್ಲದಿದ್ದರೆ ಸಲೀಸಾಗಿ ಇನ್ನೊಂದು ಬಗೆಯ ಮೌಢ್ಯ[...] ಗುರಿಯಾಗುವ ಮತ್ತು ತಪ್ಪು ಗ್ರಹಿಕೆಗಳಿಗೆ ಬಂದು ಬಿಡುವ ಸಾಧ್ಯತೆಯಿದೆ. ಸಾರ್ವಜನಿಕ ಜೀವನದಲ್ಲಿ ತಾರ್ಕಿಕ ಚಿಂತನೆ, ಕನಿಷ್ಠ ವಾಸ್ತವಿಕ ಅಂಶಗಳು, ಅದಕ್ಕಾಗಿ ಅಧ್ಯಯನ ಹಾಗೂ ಸತ್ಯ ಸಂಗತಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಪರಿಣಾಮಕಾರಿಯಾಗಿ ಎಲ್ಲೆಡೆ ಹರಡುವ ಅಗತ್ಯ ಇಂದು ಹಿಂದೆಂದಿಗಿಂತಲೂ ಹೆಚ್ಚಿದೆ. ಏಕೆಂದರೆ, ಇದುವರೆಗೆ ಮುಖ್ಯವಾಹಿನಿ ಮಾಧ್ಯಮಗಳು ಮಾತ್ರ ಉಳ್ಳವರ ಪ್ರಚಾರ ಯಂತ್ರಾಂಗದ ವಿಸ್ತರಿತ ಭಾಗಗಳಂತೆ ಕೆಲಸ ಮಾಡುತ್ತಿದ್ದವು. ಇದೀಗ ಸಾಮಾಜಿಕ ಜಾಲತಾಣಗಳು ಅದನ್ನು ಮತ್ತೂ ವ್ಯವಸ್ಥಿತವಾಗಿ ಮಾಡುತ್ತಿವೆ ಹಾಗೂ ನಾವೂ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅದರ ಭಾಗವಾಗಿರುತ್ತೇವೆ.

ಎಲ್ಲರೂ ನೋಡಲೇಬೇಕಾದ 'ಭಜರಂಗಿ ಭಾಯ್‌ಜಾನ್'

ನಾನು ಸಲ್ಮಾನ್ ಖಾನ್ ನಟಿಸಿರುವ ಸಿನಿಮಾ ...ದಿ ಅದೆಷ್ಟೋ ವರ್ಷಗಳೇ ಆಗಿದ್ದವು. ಆತ ...ವುಡ್‌ನ ಸೂಪರ್ ಸ್ಟಾರ್ ಆಗಿದ್ದರೂ, ಹಲವಾರು ಚಿತ್ರಗಳನ್ನು ನೀಡಿದ್ದರೂ ಯಾವತ್ತು ಆತ ...ದ ಅಮಲಿನಲ್ಲಿ ಕಾರ್ ಓಡಿಸಿ ಒಬ್ಬ ...ಯಕನ ಸಾವಿಗೆ ಕಾರಣ ಆದನೋ ಅಂದಿನಿಂದ ಆತನ ಸಿನಿಮಾಗಳಿಂದ ದೂರ ಉಳಿದಿದ್ದೆ. ಆದರೆ ಮೂರು ವಾರಗಳ ಹಿಂದೆ ...ಗಡೆಯಾದ 'ಭಜರಂಗಿ ಭಾಯ್‌ಜಾನ್' ಸಿನಿಮಾ ...ಮು ಸೌಹಾರ್ದ ಕುರಿತದ್ದು ಮತ್ತು ತುಂಬಾ



...ಗಿದೆ ಎಂಬ ಸುದ್ದಿ ಎಲ್ಲೆಡೆ ...ಡಲಾರಂಭಿಸಿದಾಗ ಸಲ್ಮಾನ್ ಖಾನ್ ವಿರುದ್ಧ ...ೇ ಹಾಕಿಕೊಂಡಿದ್ದ ಬಹಿಷ್ಕಾರಕ್ಕೆ ತಾತ್ಕಾಲಿಕ ...ಮ ನೀಡಿ ನಮ್ಮ ಬಿ.ಚಂದ್ರೇಗೌಡ ಮತ್ತು ಅವರ ...ಯ ಶಿವು ಜೊತೆ ಆ ಸಿನಿಮಾ ನೋಡಲು ...ಿದೆ.

...ಪಕ್ಕಾ ಕಮರ್ಷಿಯಲ್ ಸಿನಿಮಾ ಆದರೂ ...ರಂಗಿ ಭಾಯ್‌ಜಾನ್' ನಿಜವಾಗಲೂ ಉತ್ತಮ ...ದೇಶವನ್ನು ಸಾರುವ ಸಿನಿಮಾ. ಧರ್ಮಕ್ಕಿಂತ ...ನವೀಯತೆ ಮುಖ್ಯ, ಪ್ರೀತಿಗೆ ಮತ್ತು ಮನುಷ್ಯ ...ಬಂಧಗಳಿಗೆ ಯಾವ ಗಡಿಯ ಹಂಗೂ ಇಲ್ಲ ...ದು ನವಿರಾಗಿ ತೋರಿಸುವ ಸಿನಿಮಾ ಅದು.

...ಭಜರಂಗಿ ಎಂದಕೂಡಲೇ ನಮಗೆ ...ಪಾಗುವುದು ಮಂಗಳೂರಿನ ಹೋಮ್ ಸ್ಟೇ ...ಲೆ ದಾಳಿ ಮಾಡಿದ ಪಾತಕಿಗಳು; ಪಬ್ ...ದರಲ್ಲಿದ್ದ ಯುವತಿಯರನ್ನು ಥಳಿಸಿದ ಕಿರಾತಕರು; ...ಡಕಂಡಲ್ಲಿ ಅನೈತಿಕ ರೌಡಿಗಿರಿ ಮಾಡುವ ಪುಂಡರು. ...ದರೆ ಈ ಸಿನಿಮಾದಲ್ಲಿ ಭಜರಂಗಿ ಆಗಿರುವ ...ಮಾನ್‌ನ ಪಾತ್ರ ಅಂಥದ್ದಲ್ಲ. ಪವನ್ ಎಂಬಾತ ...ನುಮಂತನ ಪಕ್ಕಾ ಅಭಿಮಾನಿಯಾದ್ದರಿಂದ ಜನ ...ತನನ್ನು ಭಜರಂಗಿ ಎಂದು ಕರೆಯುತ್ತಿರುತ್ತಾರೆ. ಆತನ ...ದೆ ಆರೆಸ್ಸೆಸ್ ಸದಸ್ಯನಾಗಿದ್ದರೂ ಪವನ್ ವಿಭಿನ್ನ ...ತ್ವದವನು. ಹಿಂದೂ ಧರ್ಮಶಾಸ್ತ್ರಗಳಲ್ಲಿ ...ಸ್ವನಿಗಿರುವ ಪಾಂಡಿತ್ಯ ಮಗನ ಹತ್ತಿರವೂ ...ಯುವುದಿಲ್ಲ. ಹೋಗಲಿ ಅಪ್ಪನಂತೆ ಕುಸ್ತಿ ಪಟು ...ು ಎಂದರೆ ಅದೂ ಅವನಿಂದ ಸಾಧ್ಯವಿಲ್ಲ ...ಕೆಂದರೆ ಆತನನ್ನು ಮುಟ್ಟಿದರೆ ಸಾಕು ಕಚಗುಳಿಯಾಗಿ ನಗಲಾರಂಭಿಸುತ್ತಾನೆ. ಹತ್ತನೆ ಕ್ಲಾಸನ್ನು ಹತ್ತು ಬಾರಿ ಫೇಲ್ ಆಗುವ ಪವನ್ ಜೀವನದಲ್ಲಿ ಉದ್ಧಾರವಾಗುವುದಿಲ್ಲ ಎಂದೇ ತಂದೆ ನಂಬಿರುತ್ತಾನೆ. ಆಗ ಪವನ್ ಅಪ್ಪನಿಗೆ ಅದೆಂತಹ ಶಾಕ್ ಕೊಡುತ್ತಾನೆ ಎಂಬುದನ್ನು ತೆರೆಯ ಮೇಲೆ ನೋಡಿ ನಗಬೇಕು.

ದೆಹಲಿಗೆ ಪವನ್ ಹೋದರೆ ಜೀವನೋಪಾಯಕ್ಕೆ ಏನನ್ನಾದರೂ ಮಾಡಬಹುದು ಎಂದು ತಂದೆ ಹೇಳಿರುತ್ತಾನೆ. ಹಾಗೆ ಪವನ್ ಹೋಗುತ್ತಾನೆ. 'ನಮಸ್ಕಾರ' ಬದಲು ನಡುಬಗ್ಗಿಸಿ ಎಲ್ಲರಿಗೂ- ಕೋತಿಗಳು ಸೇರಿದಂತೆ - 'ಜೈ ಶ್ರೀ ರಾಮ್' ಎಂದು ಹೇಳುವ ಪವನ್ "ನಾನು ಭಜರಂಗಿ, ನಾನು ಎಂದೂ ಸುಳ್ಳು ಹೇಳಕೂಡದು" ಎಂದೇ ಅಚಲವಾಗಿ ನಂಬಿರುತ್ತಾನೆ. ಇದು ಕಮರ್ಷಿಯಲ್ ಸಿನಿಮಾವಾದ್ದರಿಂದ ಹೀರೋಯಿನ್ ಇರಬೇಕು, ಒಂದು ಲವ್ ಸಾಂಗ್ ಇರಬೇಕು ಎಂಬ ಕಾರಣಕ್ಕೆ ಕರಿಷ್ಮಾ ಕಪೂರ್‌ಳ ರಸಿಕ ಪಾತ್ರವಿದೆ. ಅವರಿಬ್ಬರೂ ಮದುವೆ ಆಗುವುದಾಗಿ ನಿರ್ಧರಿಸಿದ ಮೇಲೆ ಹೀರೋಯಿನ್‌ಗೆ ಹೆಚ್ಚು ಪ್ರಾಮುಖ್ಯತೆ ಇಲ್ಲ. ಅಂದಹಾಗೆ ಚಿತ್ರದಲ್ಲಿ ಬರುವ ಎಲ್ಲಾ ಹಿಂದೂ ಪಾತ್ರಗಳೂ ಬ್ರಾಹ್ಮಣರದ್ದು.


ವಾಸ್ತವವಾಗಿ ಈ ಚಿತ್ರದ ನಿಜವಾದ ಹೀರೋಯಿನ್ ಆರು ವರ್ಷದ ಬಾಲಕಿ ಶಾಹಿದಾ (ಹರ್ಷಿಕಾ ಮಲ್ಹೋತ್ರ). ಪಾಕಿಸ್ತಾನದ ಕಾಶ್ಮೀರದ ಒಂದು ಹಳ್ಳಿಯಲ್ಲಿ ವಾಸಿಸುವ ಶಾಹಿದಾಳ ತಾಯಿ ಪಾಕಿಸ್ತಾನದ ಜನಪ್ರಿಯ ಕ್ರಿಕೆಟ್ ಆಟಗಾರ ಶಾಹಿದ್ ಅಫ್ರಿದಿಯ ಅಭಿಮಾನಿ. ಆ ಕಾರಣಕ್ಕೇ ತನ್ನ ಮಗಳಿಗೆ ಶಾಹಿದಾ ಎಂದು ಹೆಸರಿಟ್ಟಿರುತ್ತಾಳೆ. ಆದರೆ ಶಾಹಿದಾ ಮೂಕಿ. ಆಕೆ ಮಾತನಾಡುವಂತಾಗಲಿ ಎಂದು ಹರಕೆ ಹೊತ್ತಿರುವ ಶಾಹಿದಾಳ ತಾಯಿ ಮಗಳೊಂದಿಗೆ ದೆಹಲಿಯಲ್ಲಿರುವ ನಿಜಾಮುದ್ದೀನ್ ದರ್ಗಾಕ್ಕೆ ಬರುತ್ತಾಳೆ. ಪಾಕಿಸ್ತಾನಕ್ಕೆ ವಾಪಸ್ ಹೋಗುವಾಗ ಬಾಲಕಿಯ ಪುಟ್ಟ ತಪ್ಪಿನಿಂದಾಗಿ ಆಕೆ ಭಾರತದಲ್ಲೇ ಉಳಿಯುತ್ತಾಳೆ, ತಾಯಿ ಪಾಕಿಸ್ತಾನಕ್ಕೆ ಹೋಗುತ್ತಾಳೆ. ಶಾಹಿದಾ ಅದು ಹೇಗೋ ಕುರುಕ್ಷೇತ್ರವನ್ನು ತಲುಪುತ್ತಾಳೆ. ಅಲ್ಲಿ ಹನುಮಂತನ ಪ್ರತಿಮೆಯ ಮುಂದೆ ಆತನ ಪರಮ ಭಕ್ತ ಪವನ್ ಇತರರೊಂದಿಗೆ ಕುಣಿದು ಕುಪ್ಪಳಿಸುತ್ತಿರುತ್ತಾನೆ. ಮುಗ್ಧ ಶಾಹಿದಾ ಆತನನ್ನು ಹಚ್ಚಿಕೊಂಡು ಅವನನ್ನು ಹಿಂಬಾಲಿಸಲಾರಂಭಿಸುತ್ತಾಳೆ. ಪವನ್ ಆಕೆಯಿಂದ ತಪ್ಪಿಸಿಕೊಳ್ಳಲು ನೋಡಿದಷ್ಟೂ ಆಕೆ ಅವನನ್ನೇ ಅವಲಂಬಿಸುತ್ತಾಳೆ. ವಿಧಿ ಇಲ್ಲದೆ ಆಕೆಯನ್ನು ಪವನ್ ಕರಿಷ್ಮಾಳ ಮನೆಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಕರಿಷ್ಮಾಳ ತಂದೆ "ಈ ಹುಡುಗಿ ಯಾವ ಜಾತಿಯದ್ದೋ" ಎಂದು ಅನುಮಾನ ವ್ಯಕ್ತಪಡಿಸಿದಾಗ ಪವನ್ "ಹಾಲಿನಷ್ಟು ಬೆಳ್ಳಗಿದ್ದಾಳೆ, ಬ್ರಾಹ್ಮಣಳೇ ಇರಬೇಕು" ಎನ್ನುತ್ತಾನೆ. ಒಮ್ಮೆ ಶಾಹಿದಾ ಅಕ್ಕ ಪಕ್ಕದವರ ಮನೆಗೆ ಹೋಗಿ ಚಿಕನ್ ತಿನ್ನುತ್ತಿರುವುದನ್ನು ನೋಡಿ "ಓಹೋ, ಈಕೆ ಕ್ಷತ್ರಿಯಳೇ ಇರಬೇಕು. ಅವರು ಬೆಳ್ಳಗೂ ಇರುತ್ತಾರೆ, ಮಾಂಸವನ್ನೂ ತಿನ್ನುತ್ತಾರೆ" ಎಂದು ತರ್ಕಿಸುತ್ತಾನೆ.

ಒಂದು ದಿನ ಶಾಹಿದಾ ಮಸೀದಿಯೊಳಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸುತ್ತಿರುವಾಗ ಆಕೆ ಮುಸಲ್ಮಾನ್ ಎಂದು ಪವನ್‌ಗೆ ಗೊತ್ತಾಗುತ್ತದೆ. ಆಮೇಲೆ ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಮ್ಯಾಚೊಂದರ ಕೃಪೆಯಿಂದಾಗಿ ಆಕೆ ಪಾಕಿಸ್ತಾನದವಳು ಎಂದೂ ಗೊತ್ತಾಗುತ್ತದೆ. ಪವನ್ ಒಬ್ಬ ಸಾಮಾನ್ಯ ಮನುಷ್ಯ. ಆತ ಶ್ರೀಮಂತನಲ್ಲ, ಹೆಚ್ಚು ಓದಿಲ್ಲ, ಪಾಸ್‌ಪೋರ್ಟ್ ಹೊಂದಿಲ್ಲ. ಆದರೆ ಆತ ಮಾನವೀಯ ವ್ಯಕ್ತಿ. ಹೇಗಾದರು ಮಾಡಿ ಶಾಹಿದಾಳನ್ನು ಆಕೆಯ ಅಮ್ಮನಿಗೆ ಒಪ್ಪಿಸಬೇಕೆಂದು ಹೊರಡುತ್ತಾನೆ. ಅದನ್ನು ಹೇಗೆ ಸಾಧಿಸುತ್ತಾನೆ ಎಂಬುದೇ ಚಿತ್ರದ ಮುಖ್ಯ ಭಾಗ.

ಆ ಪಯಣದಲ್ಲಿ ಅವನೊಂದಿಗೆ ಕೈಜೋಡಿಸುವವನು ಪಾಕಿಸ್ತಾನದ ಟಿವಿ ವರದಿಗಾರ ಚಾಂದ್ ನವಾಬ್. ಈ ಪಾತ್ರವನ್ನು ನಿರ್ವಹಿಸಿರುವುದು ನಿಜಾಮುದ್ದೀನ್ ಸಿದ್ದಿಕಿ ಎಂಬ ಅದ್ಭುತ ನಟ. ಸಿದ್ದಿಕಿ ಸಿನಿಮಾಗೆ ಹೊಸ ಆಯಾಮವನ್ನೇ ನೀಡುತ್ತಾನೆ. ಪಾಕಿಸ್ತಾನದ ಜನರೂ ನಮ್ಮಂತೆ ಮನುಷ್ಯತ್ವವನ್ನು ಹೊಂದಿರುವವರು ಎಂದು ತೋರಿಸುವ ಚಿತ್ರ 'ಭಜರಂಗಿ ಭಾಯ್‌ಜಾನ್.'

ಪಾಕಿಸ್ತಾನದ ಜನರಿಗೆ ಬಾಲಿವುಡ್ ಸಿನಿಮಾಗಳೆಂದರೆ ಇಷ್ಟ. ಆದರೆ ಹಲವು ಹಿಂದಿ ಸಿನಿಮಾಗಳಲ್ಲಿ ಪಾಕಿಸ್ತಾನದ ಜನರನ್ನು ವಿಲನ್‌ಗಳಂತೆ ತೋರಿಸುವುದು ಅವರಿಗೆ ಇಷ್ಟವಿಲ್ಲ. ಈ ಕಾರಣಕ್ಕೇ ಇತ್ತೀಚೆಗೆ 'ಏಕ್ ಥಾ ಟೈಗರ್' ಮತ್ತು 'ಹೈದರ್' ತರಹದ ಸಿನಿಮಾಗಳ ಬಿಡುಗಡೆಗೆ ಅಲ್ಲಿನ ಸರ್ಕಾರ ಅನುಮತಿ ನೀಡಲಿಲ್ಲ. ಆದರೆ ಪಾಕಿಸ್ತಾನದ ಸೆನ್ಸಾರ್ ಅಧಿಕಾರಿಗಳಿಗೆ ಈ ಚಿತ್ರ ಅದೆಷ್ಟು ಇಷ್ಟವಾಗಿದೆ ಎಂದರೆ ಅದಕ್ಕೆ ಭಾರತದಲ್ಲಿ 'ಯು/ಎ' ಸರ್ಟಿಫಿಕೇಟ್ ಕೊಟ್ಟಿದ್ದರೆ ಪಾಕಿಸ್ತಾನದಲ್ಲಿ ಸಿಕ್ಕಿರುವುದು 'ಯು' ಸರ್ಟಿಫಿಕೇಟ್!

ಈ ಚಿತ್ರವನ್ನು ಪಾಕಿಸ್ತಾನದ ಜನರು ಮುಗಿಬಿದ್ದು ನೋಡುತ್ತಿದ್ದಾರೆ. ಎಷ್ಟರ ಮಟ್ಟಿಗೆಂದರೆ ಇದರ ಜೊತೆಗೆ ಪಾಕಿಸ್ತಾನದ ಇಬ್ಬರು ಸೂಪರ್‌ಸ್ಟಾರ್‌ಗಳ ಸಿನಿಮಾಗಳು ಬಿಡುಗಡೆಗೊಂಡಿದ್ದರೂ ಅವು ಬಾಕ್ಸ್‌ಆಫೀಸಿನಲ್ಲಿ ಗಳಿಸಿದ್ದು 20-25 ಕೋಟಿ ರೂಪಾಯಿಗಳು. ಆದರೆ 'ಭಾಯ್‌ಜಾನ್' ಮೊದಲ ಮೂರು ದಿನಗಳಲ್ಲೇ ಬಾಚಿಕೊಂಡಿದ್ದು 45 ಕೋಟಿ ರೂಪಾಯಿಗಳನ್ನು!



• ಗೌರಿ ಲಂಕೇಶ್
editorlankesh@gmail.com


ಈ ಚಿತ್ರದ ವಿಶೇಷತೆ ಏನೆಂದರೆ ಇಲ್ಲಿ ಸಲ್ಮಾನ್‌ನ ಹೀರೋಗಿರಿ ಇಲ್ಲ. ಆತ ದೈಹಿಕವಾಗಿ ಕಟ್ಟುಮಸ್ತಾಗಿದ್ದರೂ ಡಿಶುಂ ಡಿಶುಂ ಅಂತ ಪಾಕಿಸ್ತಾನಿ ಸೈನಿಕರನ್ನಾಗಲಿ, ಪ್ರಜೆಗಳನ್ನಾಗಲಿ ಸದೆ ಬಡಿಯುವುದಿಲ್ಲ. ಆತನ ಎಲ್ಲಾ ಸ್ಟಾರ್‌ಗಿರಿಯನ್ನು ಬದಿಗಿಟ್ಟು ಮಾನವೀಯ ಮನುಷ್ಯನಂತೆ ಬಿಂಬಿಸಲಾಗಿದೆ.

ಇನ್ನು ಶಾಹಿದಾ ಪಾತ್ರದಲ್ಲಿರುವ ಹರ್ಷಿಕಾ ಎಷ್ಟು ಮುದ್ದಾಗಿದ್ದಾಳೆಂದರೆ ಅವಳನ್ನು ತಬ್ಬಿಕೊಂಡು ಮುತ್ತಿಡಬೇಕೆನಿಸುತ್ತದೆ. ಆಕೆ ತನ್ನ ಅಮ್ಮನನ್ನು ನೆನೆಸಿಕೊಂಡು ಅತ್ತಾಗ ನಮ್ಮ ಕಣ್ಣುಗಳೂ ತೇವಗೊಳ್ಳುತ್ತವೆ. ಇಷ್ಟು ಚಿಕ್ಕ ವಯಸ್ಸಿಗೇ ಆಕೆ ಎಷ್ಟು ಚೆಂದವಾಗಿ ನಟಿಸಿದ್ದಾಳೆ ಎಂಬುದನ್ನು ಅರಿಯಲಾದರೂ ಈ ಚಿತ್ರವನ್ನು ಒಮ್ಮೆಯಾದರೂ ನೋಡಲೇಬೇಕು. ಸಿನಿಮಾದ ಪೋಸ್ಟರ್‌ಗಳಲ್ಲಿ ಸಲ್ಮಾನ್ ಈ ಹುಡುಗಿಯನ್ನು ಎತ್ತಿಕೊಂಡಿದ್ದಾನೆ. ಆದರೆ ಇಡೀ ಚಿತ್ರವನ್ನು ಎತ್ತಿ ಹಿಡಿದಿರುವುದೇ ಈ ಪುಟ್ಟ ಬಾಲಕಿ.

ಈ ಚಿತ್ರದಲ್ಲಿ ಒಮ್ಮೆ ನವಾಜುದ್ದೀನ್ "ದ್ವೇಷ ಸುಲಭವಾಗಿ ಮಾರಾಟವಾಗುತ್ತೆ, ಸ್ನೇಹವಲ್ಲ" ಎನ್ನುತ್ತಾನೆ. ಅದು ನಿಜ ಕೂಡ. 'ಹಿಂದೂ' ಭಾರತ ಮತ್ತು ಮುಸ್ಲಿಮ್ ಪಾಕಿಸ್ತಾನದ ನಡುವೆ ದ್ವೇಷ ಬಿತ್ತುವ ಕೆಲಸ ಕಳೆದ ಅರವತ್ತು ವರ್ಷಗಳಿಂದ ನಡೆಯುತ್ತಾ ಬಂದಿದೆ. ಆದರೆ ಈ ಚಿತ್ರ ಅಂತಹ ಪ್ರಕ್ರಿಯೆಗೆ ಒಂದು ಪುಟ್ಟ ಬ್ರೇಕ್ ಹಾಕಿ "ನಮ್ಮ ಮಕ್ಕಳ ಭವಿಷ್ಯಕ್ಕಾದರೂ ಎರಡೂ ದೇಶಗಳು ಸ್ನೇಹ ಮತ್ತು ಶಾಂತಿಯನ್ನು ಸ್ಥಾಪಿಸಬೇಕು" ಎಂಬ ಸಂದೇಶವನ್ನು ಸಾರುತ್ತದೆ.

ಅದಕ್ಕಾಗಿಯಾದರೂ ಎಲ್ಲರೂ ಈ ಚಿತ್ರವನ್ನು ನೋಡಲೇ ಬೇಕು. ■

ಯೋಗ ತೋರುಂಬ ಲಾಭವೇ? ಇರಬಹುದು



ಪತ್ರಿಕೆಯ ಆಗಸ್ಟ್ 5, 2015ರ ಸಂಚಿಕೆಯಲ್ಲಿ 'ಯೋಗ್ಯಕ್ಕೆ ತತ್ವದ ...ಣ ಇದೆಯೇ?' ಎಂಬ ವಿಡಂಬಾರಿ ಲೇಖನ ನೋಡಿದ ಮೇಲೆ 'ಯೋಗ ತೋರುಂಬ ಲಾಭವೇ? ಇರಬಹುದು' ಎಂಬ ನನ್ನ ಅನ್ನಿಸಿಕೆ ಸರಿ ಎನಿಸಿತು. ಇತ್ತೀಚೆಗೆ ಯೋಗಕ್ಕೆ ಅಂತಾರಾಷ್ಟ್ರೀಯ ಮಟ್ಟದ ಮಾನ್ಯತೆ ದೊರಕಿದೆ. ಕಳೆದ ...ಗಳಷ್ಟೇ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ದೇಶವಿದೇಶಗಳಲ್ಲಿ ಯೋಗ ಕೇಂದ್ರಗಳು ಹುಟ್ಟಿಕೊಳ್ಳುತ್ತಾ ಅಷ್ಟಿಷ್ಟು ಯೋಗಾಭ್ಯಾಸ ಮಾಡಿದ ...ರತೀಯ ಪಟುಗಳಿಗೆ ಜೀವನೋಪಾಯ ಕೂಡ ನಡೆಯುತ್ತಿದೆ. ...ತ್ಮಾನುಸಂಧಾನ ಇಲ್ಲದ ಯೋಗ, ಭಕ್ತಿ ಇಲ್ಲದ ಜಂಗಮರನ್ನು ಕುರಿತು ...ಸವಣ್ಣನು ಹೇಳಿದಂತೆ 'ತೋರುಂಬ ಲಾಭ'ವಾಗುತ್ತದೆ. ಆ ಮಾತಂತಿರಲಿ.


ಯೋಗ ಎಲ್ಲರಿಗೂ ಸಾಧ್ಯವೇ? ಎಂಬುದು ನನ್ನ ಪ್ರಶ್ನೆ. ಯಾಕೆಂದರೆ ...ಲಗದ್ದೆ ತೋಟ ಕುಡಿಕೆಗಳಲ್ಲಿ ದುಡಿವ ಕೃಷಿಕ; ಕಾರ್ಖಾನೆಗಳಲ್ಲಿ ದುಡಿವ ...ರ್ಮಿಕ, ಕಮ್ಮಾರ, ಚಮ್ಮಾರ, ಕುಂಬಾರ, ನೇಕಾರ ಮುಂತಾದ ಕೈ ಕಸುಬುದಾರರು ...ನದಲ್ಲಿ ಮುಂಜಾನೆಯಿಂದ ಸಂಜೆವರೆಗೆ ಮೈಬಗ್ಗಿಸಿ ದುಡಿದರೂ ಹೊಟ್ಟೆ ...ಟ್ಟೆಗೆ ತತ್ವಾರ, ಇನ್ನು ಯೋಗಕ್ಕೆ ಸಮಯವೆಲ್ಲಿ? ಏಕನಿಷ್ಠೆಯಿಂದ ಮಾಡುವ ...ಯಕವೇ ಯೋಗ ಎಂದರು ಶರಣರು. ಎಲ್ಲೋ ಕಚೇರಿಗಳಲ್ಲಿ ಕುಳಿತು ...ಸ ಮಾಡುವ ಜನರಿಗೆ ಯೋಗ ಅಥವಾ ವ್ಯಾಯಾಮ ಬೇಕು. ಬ್ರಿಟಿಷ್ ...ರ ಪದ್ಧತಿ ಶಿಕ್ಷಣದಲ್ಲಿ ಡ್ರಿಲ್ ಕಡ್ಡಾಯ ಇರುತ್ತಿತ್ತು, ನಾಲ್ಕಾರು ಗಂಟೆ ಕ್ಲಾಸ್‌ನಲ್ಲಿ ಕುಳಿತ ಮಕ್ಕಳಿಗೆ ರಕ್ತಚಲನೆಗಾಗಿ ಡ್ರಿಲ್ ಇದ್ದೇ ಇರುತ್ತಿತ್ತು. ಈಗ ಶಾಲೆಗಳಿಗೆ ಮೈದಾನವೂ ಇಲ್ಲ, ಡ್ರಿಲ್ಲೂ ಇಲ್ಲ, ಸಮಯವೂ ಇಲ್ಲ. ಇನ್ನು ಟಿವಿ ನೋಡುವ ನಗರವಾಸಿಗಳಂತೂ ಮೈಬೆಳೆಸಿಕೊಂಡು ಜಿಮ್‌ಗಳಿಗೆ ಹೋಗಿ ಕರಗಿಸಿಕೊಳ್ಳುವುದೇ ಆಗಿದೆ.

ಸಂಘ ಪರಿವಾರ ಸರ್ಕಾರ ಯೋಗಕ್ಕೆ ಇಷ್ಟೊಂದು ಪ್ರಚಾರ ಕೊಡುವ ಹಿನ್ನೆಲೆ ನೋಡಿದರೆ ಬೇರೆ ಏನೋ ಅಜೆಂಡಾ ಇದ್ದಂತೆ ತೋರುತ್ತದೆ. ಮುಸಲ್ಮಾನರು ಮೂರು ಹೊತ್ತು ಒಟ್ಟಾಗಿ ನಮಾಜು ಮಾಡುವ ಮೂಲಕ ತಮ್ಮ ಧಾರ್ಮಿಕ ಒಗ್ಗೊಳ್ಳುವಿಕೆಯನ್ನು ಪ್ರದರ್ಶಿಸುತ್ತಾರಲ್ಲವೇ? ಹಾಗೆ ನಮಾಜಿಗೆ ಪರ್ಯಾಯ ಹಿಂದೂ ಸಾಲಿಡಾರಿಟಿ ಪ್ರದರ್ಶನಕ್ಕೆ ನಮ್ಮ ಯೋಗ ಪದ್ಧತಿ ಸೂಕ್ತ ಎಂದು ಅವರು ಭಾವಿಸಿರಬಹುದು. ಎಂದರೆ ಯೋಗಾಭ್ಯಾಸ ಕೇಂದ್ರಗಳನ್ನು ತೆರೆಯುವುದರಿಂದ ಯೋಗ ಕಲಿತ ನಿರುದ್ಯೋಗಿಗಳಿಗೆ ಧನ ಯೋಗವೂ ಆಯಿತು; ಹಾಗೇ ಹಿಂದೂತ್ವವನ್ನು ಪ್ರಚುರಪಡಿಸಿದಂತೆಯೂ ಆಯಿತು.

ವಿಡಂಬಾರಿ ಹೇಳಿರುವಂತೆ 'ಮನುಷ್ಯನ ವ್ಯಾಪಾರಿಕತೆಯನ್ನೇ ಮೊಸಳೆ ಹಾಕಿ' ಹಾದಿ ತಪ್ಪಿಸಲು ರಾಜಮಾರ್ಗದಲ್ಲಿ ತೋಡಿಟ್ಟ ಖೆಡ್ಡಾದ ಸಾಲುಸಾಲುಗಳಲ್ಲಿ ಈ ಯೋಗಶಿಸ್ತು (ನಮಾಜು) ಎಂಬುದು ಕೂಡ ಒಂದಾಗಿದೆ. ಮನಸ್ಸನ್ನು ಅಚಲಗೊಳಿಸುವುದು ಮತ್ತು ವಿಚಾರ ನಾಶ ಮಾಡುವುದು ವಿಕಾಸವಾದದ ಏಣಿಯನ್ನು ಏರುವುದಾಗಿರದೆ ಹಲವಾರು ಕಾಲುಗಳನ್ನು ಇಳಿಯುವುದೆ ಆಗಿದೆ. ಆದ್ದರಿಂದ ಯೋಗದ ಬಗ್ಗೆ ನಾವೀಗ ಪುನರ್ ವ್ಯಾಖ್ಯಾನ ಮಾಡಬೇಕಾಗಿದೆ.

- ಪ್ರೊ. ಶಿವಬಸಯ್ಯ, ಬೆಂಗಳೂರು

ದಕ್ಷಿಣ ಕನ್ನಡ: ರೈತನ ಕೈ ಕತ್ತರಿಸಿದ ಭೂಮಾಲಿ


ಕೈ ಕತ್ತರಿಸಿದ ಭೂ ಮಾಲಿಕ ಗೋಪಾಲ ಗೌಡ

ಪಶ್ಚಿಮ ಘಟ್ಟದಲ್ಲಿನ ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮ ಒಂದು ಕಾಲದಲ್ಲಿ ಮೂಲನಿವಾಸಿಗಳ ವಾಸತಾಣವಾಗಿತ್ತು. ಆದರೆ ಅದ್ಯಾವಾಗ ಈ ದಟ್ಟ ಅರಣ್ಯ ಸಂಪತ್ತು ಮತ್ತು ಜಮೀನಿನ ಮೇಲೆ ಬ್ರಿಟಿಷರ ಕಣ್ಣು ಬಿತ್ತೋ ಆಗ ಸ್ಥಳೀಯ ಮೂಲನಿವಾಸಿಗಳ ಮೇಲೆ ಅವರ ಅಟ್ಟಹಾಸ ಪ್ರಾರಂಭವಾಯಿತು. ಅದು ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಮೂಲನಿವಾಸಿಗಳ ಮೇಲಿನ ದೌರ್ಜನ್ಯಕ್ಕೆ ಇತ್ತೀಚೆಗೆ ಬಲಿಯಾಗಿರುವುದು ಸುಂದರ ಮಲೆಕುಡಿಯ. ತನ್ನ ಜಮೀನನ್ನು ಬಿಟ್ಟುಕೊಡಲು ನಿರಾಕರಿಸಿದ ಮಲೆಕುಡಿಯನ ಕೈ ಕತ್ತರಿಸಿದ ಅಮಾನವೀಯ ಕೃತ್ಯ ಬುದ್ಧಿವಂತರ ಜಿಲ್ಲೆಯೆಂದು ಹೇಳಿಕೊಳ್ಳುವ ದಕ್ಷಿಣ ಕನ್ನಡದಲ್ಲಿ ನಡೆದಿದೆ. ಆತನ ಕೈ ಕಡಿದದ್ದು ಬಿಜೆಪಿ ಮುಖಂಡನೂ, ಭೂಮಾಲಿಕನೂ ಆದ ಗೋಪಾಲ ಗೌಡ ಎಂಬ ಪಾಪಿ. ಗೋಪಾಲ ಗೌಡ ಕೃಷಿಕನ ಕೈ ಕತ್ತರಿಸಿದ್ದರೂ ಜಿಲ್ಲೆಯ ಪೊಲೀಸರಿಗೆ ಆತನನ್ನು ಬಂಧಿಸಲು ಈಗಲೂ ಸಾಧ್ಯವಾಗಿಲ್ಲ ಎಂದರೆ ಇಲ್ಲಿ ಆದಿವಾಸಿಗಳಿಗೆ ಎಷ್ಟು ರಕ್ಷಣೆ ಇದೆ ಎಂಬುದನ್ನು ಅಂದಾಜಿಸಬಹುದು.

ನೆರಿಯದಲ್ಲಿ ಎಸ್ಟೇಟ್‌ಗಳ ಮಾಲಿಕರದ್ದೇ ಕಾರುಬಾರು. ಇಡೀ ಗ್ರಾಮವೇ ಅವರ ನಿಯಂತ್ರಣದಲ್ಲಿದೆ. ಇಲ್ಲಿನ ಹೆಬ್ಬಾರ ಕುಟುಂಬ ಹೊಂದಿರುವುದು ಸುಮಾರು ಒಂಬತ್ತು ಸಾವಿರ ಎಕರೆ. ಇನ್ನು ಪಿನಮೋಯ ಗ್ರೂಪಿನವರದ್ದು ಆರು ಸಾವಿರಕ್ಕೂ ಹೆಚ್ಚು ಎಕರೆಗಳಿವೆ. ಸುಮಾರು 500 ರಿಂದ 1000 ಎಕರೆಗಳನ್ನು ಸಣ್ಣ ಎಸ್ಟೇಟ್‌ಗಳೂ ಹಲವಾರಿವೆ. ಅವರಿಗೆ ಹೋಲಿಸಿದರೆ ಗೋಪಾಲ ಗೌಡ ದೊಡ್ಡ ಭೂಮಾಲಿಕನೇನಲ್ಲ.

ನೆರಿಯ ಗ್ರಾಮದ ಕೇಂದ್ರವಿರುವುದು ಅಣಿಯೂರಿನಲ್ಲಿ. ಅಲ್ಲಿಂದ ಹಲವು ದಿಕ್ಕುಗಳೆಡೆಗೆ ಕವಲೊಡೆದ ಕಚ್ಚಾ ಹಾದಿಗಳಿವೆ. ಈ ಹಾದಿಗಳು ಸರಸರನೇ ಹರಿದುಹೋಗಿ ಬಿಡುವಂತಹುದಲ್ಲ, ಕಲ್ಲು ಮುಳ್ಳು ಕೊರಕಲು ಕೆಸರು ತುಂಬಿ ಹೆಜ್ಜೆ ಹಾಕುವವರಿಗೆ ಸವಾಲು ಹಾಕುವಂತಹವು.

ಇಂತಹ ಅಣಿಯೂರಿನಿಂದ ಪರ್ಲಳಕ್ಕೆ 5 ಕಿ.ಮಿ ದಾರಿಯೂ ಇದೆ. ಹಾಗೇ ಬಾನಡ್ಕ ದಾಟಿದರೆ ಕಾಟಾಜೆ ಪ್ರದೇಶ. ಇಲ್ಲಿರುವ 25 ಕುಟುಂಬಗಳು ಮಲೆಕುಡಿಯ ಆದಿವಾಸಿಗಳದ್ದು. ಜೊತೆಗೆ 40 ರಷ್ಟು ಇತರೆ ಸಮುದಾಯದವರೂ ಇಲ್ಲಿ ನೆಲೆಸಿದ್ದಾರೆ. ಇವರೆಲ್ಲರೂ ದಶಕಗಳಿಂದ ಇಲ್ಲಿಯೆ ಬದುಕುತ್ತಿದ್ದಾರೆ. ಆದರೆ ಈವರೆಗೂ ಆ ನೆಲದ ಹಕ್ಕು ಅವರದೆಂದು ಸರಕಾರ ದಾಖಲೆಗಳನ್ನು ನೀಡಿಲ್ಲ, ಅಣಿಯೂರಿನಲ್ಲಿ ಮನೆ ಮಾಡಿಕೊಂಡಿರುವ ಗೋಪಾಲಗೌಡ ಪರ್ಲಳದವರೆಗೆ ಇರುವ ಭೂಮಿಯೆಲ್ಲಾ ತನ್ನದು ಎಂದು ಹೇಳುತ್ತಾನೆ. ಮಾತ್ರವಲ್ಲ, ಅಲ್ಲಿರುವ ಆದಿವಾಸಿಗಳನ್ನು ಹೆದರಿಸಿ ಅವರ ಜಮೀನನ್ನು ಕಿತ್ತುಕೊಂಡು ತೋಟ ಮಾಡಿಕೊಂಡು ಬಲಿತ ಕುಳವಾಗಿದ್ದಾನೆ. ಈತನ ಭೂದಾಹಕ್ಕೆ ಮಾಡದ ಕೃತ್ಯಗಳಿಲ್ಲ. ಇದಕ್ಕೆಂದೇ ಬಂಧುಬಳಗವನ್ನು ಬಳಸಿಕೊಳ್ಳುವ ಈತ ಕ್ರಿಮಿನಲ್ ಗ್ಯಾಂಗ್‌ನ್ನು ಹೊಂದಿದ್ದಾನೆ. ಎದುರು ಮಾತನಾಡಿದವರ ಹೆಣಗಳು ಇಲ್ಲಿ ಹರಿಯುವ ಹೊಳೆಯಲ್ಲಿ ತೇಲಿವೆ.

ಇದೀಗ ಕೈಕತ್ತರಿಸಲ್ಪಟ್ಟಿರುವ ಸುಂದರ ಮಲೆಕುಡಿಯನ ತಂದೆ ಅಣ್ಣಪ್ಪ ಮಲೆಕುಡಿಯ ಅತ್ಯಂತ ನಿಗೂಢವಾಗಿ ಸಾವನ್ನು ಅಪ್ಪಿದ್ದರು. ಈ ಬಗ್ಗೆ ಪ್ರತಿಭಟಿಸುವ ಶಕ್ತಿಯಿಲ್ಲದ ಅವರ ಕುಟುಂಬವನ್ನು ಸುಲಭವಾಗಿಯೆ ಅಲ್ಲಿಂದ ಓಡಿಸಲಾಗಿತ್ತು, ಆದರೆ ಯಾವಾಗ ಸುಂದರ ಮಲೆಕುಡಿಯ ವಾಪಸ್ ಬಂದು ತನ್ನ ಭೂಮಿಯಲ್ಲಿ ಮನೆ ಕಟ್ಟಿ ವಾಸ ಮಾಡಲಾರಂಭಿಸಿದರೋ ಆಗ ಗೋಪಾಲ ಗೌಡ ದಾಳಿಯಾರಂಭಿಸಿದ.

ಈ ಗೋಪಾಲ ಗೌಡ ಸಾವಿರಾರು ಎಕರೆಗಳನ್ನು ಹೊಂದಿರುವ ದೊಡ್ಡ ಜಮೀನ್ದಾರನೇನಲ್ಲ, ಆತನದ್ದೇ ಆದ 9 ಎಕರೆ ಜಮೀನು ಇರಬಹುದು. ಆದರೆ ಅಕ್ರಮವಾಗಿ ನೂರಾರು ಎಕರೆ ಜಮೀನನ್ನು ಸಾಗುವಳಿ ಮಾಡಿಕೊಂಡು ತನ್ನ ಕಬ್ಜಾದಲ್ಲಿ ಇಟ್ಟುಕೊಂಡಿದ್ದಾನೆ.

ಬೆಳ್ತಂಗಡಿಯ ಮಾಜಿ ಸಚಿವ ಸ್ವಜಾತಿ ನಾಯಕ ಗಂಗಾಧರ ಗೌಡರ ಶಿಷ್ಯನಾಗಿರುವ ಈತ ಅವರೊಂದಿಗೆ ಎಲ್ಲ ಪಕ್ಷಗಳಿಗೂ ಅಲೆದಿದ್ದಾನೆ. ಹಿಂದೆ ಗೌಡರು ಕಾಂಗ್ರೆಸ್‌ನಲ್ಲಿದ್ದಾಗ ಕಾಂಗ್ರೆಸ್ ಮುಖಂಡನಾಗಿ, ತಾಲೂಕು ಪಂಚಾಯತ್ ಸದಸ್ಯನಾಗಿ, ಮಂಡಲ ಪಂಚಾಯತ್ ಅಧ್ಯಕ್ಷನಾಗಿ, ಭೂ ನ್ಯಾಯಮಂಡಳಿ ಸದಸ್ಯನಾಗಿ ಪ್ರಭಾವಿಯಾಗಿ ಬೆಳೆದಿದ್ದ ಗೋಪಾಲ ಗೌಡ. ಇದೀಗ ಗೌಡರೊಂದಿಗೆ ಬಿಜೆಪಿಗೆ ಬಂದು ಅಲ್ಲಿ ಮುಖಂಡನಾಗಿ, ಬಹುಮುಖಿ 'ಸೇವೆಗಳಿಂದ' ಗಟ್ಟಿ ಕುಳವಾಗಿದ್ದಾನೆ. ಈತನ ರಕ್ಷಣೆಗೆ ಗಂಗಾಧರ ಗೌಡರ ರಾಜಕೀಯ ಪ್ರಭಾವ ಬಳಕೆಯಾಗುತ್ತಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ.

ಕಣ್ಣಿಗೆ ಕಾಣುವಷ್ಟು ಜಮೀನನ್ನು ವಶಪಡಿಸಿಕೊಂಡಿದ್ದರೂ ಈತನ ಭೂದಾಹ ನಿಂತಿಲ್ಲ, ನಿಲ್ಲುವುದಿಲ್ಲ, ಇದೇ 2015ರ ಜುಲೈ 26 ರಂದು ಸಂಜೆ 5.30ರ ಸುಮಾರಿಗೆ ಸುಂದರನನ್ನು ಮುಗಿಸುವ ಸಂಚೊಂದನ್ನು ಈತ ಹಾಕಿದ್ದ. ಬದಿಯ ಕಸಗಿಡಗಳನ್ನು ಕತ್ತರಿಸುವ ನಾಟಕ ಮಾಡುತ್ತಾ ಆತ ತನ್ನ ಗುಂಪಿನೊಂದಿಗೆ ಮಶೀನು ಹಿಡಿದು ಬಂದಿದ್ದ. ಆತ ಸುಂದರರ ಜಮೀನಿಗೆ ನುಗ್ಗಿದಾಗ ಸುಂದರ ಆಕ್ಷೇಪಿಸಿದ್ದಾರೆ. ಕೂಡಲೇ ಗೋಪಾಲ ಗೌಡ ಸುಂದರ ಮಲೆಕುಡಿಯರನ್ನು ಅವಾಚ್ಯವಾಗಿ ಬಯ್ಯುತ್ತಾ ಕಳೆ ಕೊಚ್ಚುವ ಯಂತ್ರದಿಂದ ಕುತ್ತಿಗೆಯನ್ನು ಕತ್ತರಿಸಲು ದಾಳಿ ಮಾಡಿದ್ದಾನೆ. ಇದರಿಂದ ತಪ್ಪಿಸಿಕೊಳ್ಳಲು ಸುಂದರರು ಕೈ ಮುಂದೆ ಮಾಡಿದಾಗ ಅವರ ಬಲಗೈ ಬೆರಳು ತುಂಡಾಗಿ ನೆಲಕ್ಕೆ ಬಿದ್ದಿದೆ. ಎಡಗೈ ತೋಳು ಪೂರ್ಣವಾಗಿ ಕತ್ತರಿಸಲ್ಪಟ್ಟು ನೇತಾಡುತ್ತಾ ರಕ್ತ ಸುರಿಸಿದೆ.

ಆ ಸಂದರ್ಭದಲ್ಲಿ ಅವರ ರಕ್ಷಣೆಗೆ ಧಾವಿಸಿದ ಅವರ ಮಗ ಪೂರ್ಣೇಶ ಹಾಗೂ ಹೆಂಡತಿ ರೇವತಿ ಮೇಲೂ ಗೋಪಾಲ ಗೌಡನ ಗುಂಪು ಮೆಣಸಿನ ಹುಡಿ ಎರಚಿದೆ. ಅವರೆಲ್ಲರೂ ಕೂಗಾಡಲು ಪ್ರಾರಂಭಿಸಿದ್ದಾರೆ. ಜನ ಬರುವಷ್ಟರಲ್ಲಿ ಗೋಪಾಲ ಗೌಡ ಮತ್ತು ಆತನ ಗುಂಪು ಓಡಿಹೋಗಿದೆ.

ತೀವ್ರ ರಕ್ತಸ್ರಾವದಿಂದ ಕುಸಿದಿದ್ದ ಸುಂದರ ಮಲೆಕುಡಿಯರನ್ನು ಅಲ್ಲಿಯ ಜನ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ವಿಷಯ ತಿಳಿದ ಬಳಿಕ ಎ.ಎಸ್.ಪಿ. ರಾಹುಲ್ ಕುಮಾರ್ ಸ್ಥಳಕ್ಕೆ ಬಂದು ಕಾರ್ಯಾಚರಣೆ ಆರಂಭಿಸಿದರಾದರೂ ಅಷ್ಟರೊಳಗೆ ಕ್ರಿಮಿನಲ್‌ಗಳೆಲ್ಲಾ ತಲೆಮರೆಸಿಕೊಂಡಿದ್ದಾರೆ. ಪೊಲೀಸರು ಬೀಸಿದ ಬಲೆಗೆ ಅವರ್‍ಯಾರೂ ಬಿದ್ದಿಲ್ಲ!


ಆದರೆ ಗೋಪಾಲ ಗೌಡನ ಹೆಂಡತಿಯನ್ನು ಪೊಲೀಸರು ಬಂಧಿಸಿದ್ದಾರೆ. 1999ರಲ್ಲಿ ಇದೇ ಗೋಪಾಲ ಗೌಡನ ಗ್ಯಾಂಗ್ ಸುಂದರ ಮಲೆಕುಡಿಯರ ಮನೆ ಮೇಲೆ ದಾಳಿ ಮಾಡಿತ್ತು, ಆಗ ಮನೆಯಲ್ಲಿದ್ದದ್ದು ಅವರ ಪತ್ನಿ ರೇವತಿ ಮತ್ತು ಎಳೆಯ ಮಗು ಪೂರ್ಣೇಶ. ತೊಟ್ಟಿಲಲ್ಲಿ ಮಲಗಿದ್ದ ಮಗುವಿಗೆ ಮಚ್ಚು (ಕತ್ತಿ) ನಿಂದ ಹೊಡೆಯಲು ಹೋದಾಗ ತೊಟ್ಟಿಲಿನ ಹಗ್ಗ ಕತ್ತರಿಸಿಹೋಯ್ತು, ಮಗುವನ್ನು ರಕ್ಷಿಸಲು ತಾಯಿ ರೇವತಿ ಹೋದಾಗ ಆಕೆಯ ಮೇಲೆ ಮಚ್ಚಿನೇಟು ಬಿದ್ದು ಅವರ ಕೈ ಬೆರಳು ಕತ್ತರಿಸಿಹೋಗಿತ್ತು.

ಹೀಗೆ ಗೋಪಾಲ ಗೌಡ 16 ವರ್ಷಗಳಿಂದ ಈ ಕುಟುಂಬದ ಜಾಗ ಕಬಳಿಸಲು ನಿರಂತರವಾಗಿ ಪ್ರಯತ್ನಿಸುತ್ತಲೇ ಬಂದಿದ್ದಾನೆ. ಆತನ ವಾದವೆಂದರೆ ಈ ಜಮೀನು ತನ್ನ ಕುಮ್ಕಿ ಜಾಗವಾಗಿರುವುದರಿಂದ ಮಲೆಕುಡಿಯರು ಅದನ್ನು ಬಿಟ್ಟು ಬಿಡಬೇಕೆಂಬುದಾಗಿದೆ. ವಿಚಿತ್ರವೆಂದರೆ ಕುಮ್ಕಿ ಜಮೀನು ಕೃಷಿ ಮಾಡಲ್ಪಡುವ ಭೂಮಿಗೆ ಸಹಾಯಕವಾಗಿ ಪಕ್ಕದ್ದೇ ಆಗಿರುತ್ತದೆ. ಆದರೆ ಈತನ ಮನೆ ಮತ್ತು ಜಮೀನಿಗೂ, ಇಲ್ಲಿಗೂ ಸುಮಾರು 3 ಕಿ.ಮಿ ಅಂತರವಿದೆ. ಆದರೂ ಆತನದ್ದು ಮೊಂಡುವಾದ.

ಕಳೆಗಿಡ ಕತ್ತರಿಸಲು ಬಂದದ್ದೂ ಕೂಡ ಸುಂದರ ಮಲೆಕುಡಿಯ ಮತ್ತು ಕುಟುಂಬವನ್ನು ಕೊಲೆಗೈಯ್ಯುವ ವ್ಯವಸ್ಥಿತ ಪ್ರಯತ್ನವೆಂಬುದು ಸ್ಪಷ್ಟ. ಹಿಂದೆಲ್ಲಾ ತನ್ನ






ಆಸ್ಪತ್ರೆಯಲ್ಲಿ ಸುಂದರ ಮಲೆಕುಡಿ

ಸಂಬಂಧಿಕರನ್ನೋ ಅಥವಾ ತನ್ನ ಗ್ಯಾಂಗನ್ನೋ
ಕೃತ್ಯಗಳನ್ನು ನಡೆಸಿ ತಪ್ಪಿಸಿಕೊಳ್ಳುತ್ತಿದ್ದ ಈ ಗ
ಉದಾಹರಣೆಗೆ 1999 ರ ಘಟನೆಯಲ್ಲಿ
ಸಹೋದರರೂ ಇದ್ದ ಗ್ಯಾಂಗಿಗೆ ನ್ಯಾಯಾಲಯವು ಶಿಕ್ಷೆ
ನೀಡಿತ್ತು. ಈ ಬಾರಿ ತನ್ನ ಪತ್ನಿ ಹಾ
ಸಹೋದರಿಯೊಂದಿಗೆ ಬಂದಿದ್ದಾನೆ. ಈಗಲೂ
ಘಟನೆಯಲ್ಲಿ ನೇರವಾಗಿ ಭಾಗವಹಿಸಿರುವ ಈತ ನಿರಿ
ಜಾಮೀನಿಗೆ ಪರದಾಡುತ್ತಿರುವ ಸುದ್ದಿ ಇದೆ.

ಇಂತಹ ಘಟನೆಗಳು ನಡೆದಾಗ ಔಪಚಾರಿಕ
ಒಂದಿಷ್ಟು ಸಪ್ಪಳ ಮಾಡುವುದನ್ನು ಬಿಟ್ಟರೆ ಸರಕಾರ
ಆಡಳಿತ ಯಂತ್ರ ನಿಷ್ಕ್ರಿಯವಾಗಿರುತ್ತದೆ. ಯಾಕೆಂದರೆ
ಭೂಗಳ್ಳರ ಪರವಾಗಿರುವುದು ನಿಚ್ಚಳವಾಗಿದೆ. ಈ ಪ್ರದ
ಮಲೆಕುಡಿಯರು, ಕೆಲ ಅರಣ್ಯವಾಸಿಗಳು ಮತ್ತು
ಸಮುದಾಯಗಳು ತಾವು ಕೃಷಿ ಮಾಡಿಕೊಂಡಿ
ಜಮೀನಿಗೆ ಹಕ್ಕುಪತ್ರ ಕೊಡಬೇಕೆಂದು ನಿರಂತರ
ಸರಕಾರನ್ನು ಒತ್ತಾಯಿಸುತ್ತಾ ಬಂದಿದ್ದಾರೆ. 1991
ಅಕ್ರಮ ಸಕ್ರಮ ನೀತಿಯನ್ನು ಸರಕಾರ ಪ್ರಕಟಿಸಿದಾಗ
ಭಾಗದ ಜನರು ಆಸೆಯಿಂದ ಅರ್ಜಿ ಹಾಕಿ ಕಾ
ಆದರೆ ಅವರಿಗೆ ಭೂಮಿಯ ಹಕ್ಕುಪತ್ರ ಸಿಗ
ಯಾಕೆಂದರೆ ಇದು ಅರಣ್ಯ ಭೂಮಿ ಎಂದು ಆಕ್ಷೇ
ಎತ್ತಿ ಅವರ ಹಕ್ಕನ್ನು ನಿರಾಕರಿಸಲಾಗಿತ್ತು. 2006ರ ಕ
ಅರಣ್ಯ ಹಕ್ಕು ಕಾಯ್ದೆಯಂತೆ ಹಕ್ಕುಪತ್ರ ಕೇಳಿ ಕ್ಲೈ
ಅರ್ಜಿಯನ್ನು ಹಾಕಿ ಮತ್ತೂ ಕಾದರು. ಗ್ರಾಮ ಪಂಚಾ
ಇವರಿಗೆ ಭೂಮಿ ಕೊಡಬೇಕೆಂಬ ಅಭಿಪ್ರಾಯಕ್ಕೆ ಬ
ಆಗಸ್ಟ್ 15, 2008 ರಂದು ಕೊಡುವುದಾಗಿ ಹೇ
ಆದರೆ ಅದು ಜಾರಿಯಾಗಲಿಲ್ಲ; ಆಗಲೂ ಸರಕಾರ
ಕೋರಿಕೆಯನ್ನು ತಿರಸ್ಕರಿಸಿತು. ಕಾರಣ ಈ ಭೂಮಿ
ಇಲಾಖೆಗೆ ಸೇರಿಲ್ಲ, ಇದು ಬಫರ್‌ಜೋನ್‌ನ ಭೂ
ಎಂದು ಹೇಳಲಾಯಿತು. ಹೀಗೆ ಏನೋ ಒಂದು
ಹೇಳುತ್ತಲೇ ಭೂಮಿಯ ಮೇಲಿನ ಅರಣ್ಯವಾಸಿಗಳ ಹ
ನಿರಾಕರಿಸುತ್ತಲೇ ಬರಲಾಗಿದೆ. ಇಂತಹ ಪರಿಸ್ಥಿತಿ
ಪ್ರಬಲವಾಗಿರುವ ಗೋಪಾಲ ಗೌಡನಂತಹ ಭೂಮಾ
ದೌರ್ಜನ್ಯವನ್ನೂ ಸ್ಥಳೀಯರು ಸಹಿಸಬೇಕಿದೆ.


ಈತನ ಅಟ್ಟಹಾಸ ಇಲ್ಲಿಗೆ ಮುಗಿಯುವುದಿಲ್ಲ
ಪ್ರದೇಶಕ್ಕೆ ರಸ್ತೆಯೇ ಇಲ್ಲ, ಇರುವ ಕಚ್ಚಾ ರಸ್ತೆ
ರಿಪೇರಿ ಮಾಡಲು ಈತ ಬಿಡುವುದಿಲ್ಲ, ಇದೀಗ ಸರಕ
ವತಿಯಿಂದ ಕರೆಂಟು ಕಂಬಗಳನ್ನು ನೆಡಲಾಗಿದೆ.
ಪ್ರದೇಶದುದ್ದಕ್ಕೂ ಒಂದು ಹೊಳೆ ಹರಿಯುತ್ತದೆ.
ನೀರನ್ನೂ ಕುಡಿಯಲು ಮತ್ತು ಅಗತ್ಯಗಳಿಗೆ ಬಳ
ಹೋದಾಗ ಅದಕ್ಕೂ ನಿರ್ಬಂಧ ಹಾಕುವ ದು
ಆತನದು.

ಈಗ ಸುಂದರ ಮಲೆಕುಡಿಯ ಆಸ್ಪತ್ರೆ
ದಾಖಲಾಗಿದ್ದಾರೆ. ವೈದ್ಯರು ತುಂಡಾದ ಎಡಗೈ ಜೋಡಿ
ಪ್ರಯತ್ನ ಮಾಡಿದರಾದರೂ ಅದು ಫಲಿಸದಿರುವ ಸಂಭ
ಹೆಚ್ಚು ಎಂದೂ ಸೂಚನೆ ನೀಡಿದ್ದಾರೆ. ಸಿಹಿ ಮ
ರೋಗ ಮತ್ತು ಕ್ಯಾನ್ಸರ್‌ನಿಂದ ನರಳುತ್ತಿರುವ ಅ
ಉನ್ನತ ಮಟ್ಟದ ಚಿಕಿತ್ಸೆ ಬೇಕು. ಅದಕ್ಕೆ ಹಣದ ಕೊ
ಇದೆಲ್ಲವನ್ನೂ ನಿಭಾಯಿಸುವ ಶಕ್ತಿ ಅವರ
ಪೂರ್ಣೇಶನಿಗಿಲ್ಲ, ಯಾರದೋ ಸಹಾಯದಿಂದ
ಕಾರ್ಯಗಳು ನಡೆಯುತ್ತಿದೆಯಷ್ಟೇ. ಮುಂದೇನು ಮಾಡ
ಎಂಬ ಅರಿವೇ ಆತನಿಗಿಲ್ಲ.

▶▶| 0

ಲಿಂಗಪ್ಪ ಪೂಜಾರಿಯೆಂಬ ನಾಲಾಯಕ್ ಇನ್ಸ್‌ಪೆಕ್ಟರ್

ಬೆಳ್ತಂಗಡಿಯಲ್ಲೊಬ್ಬ ನಾಲಾಯಕ್ ಪೊಲೀಸ್ ಅಧಿಕಾರಿಯಿದ್ದಾನೆ. ಈತನ ಹೊಣೆಗೇಡಿತನದಿಂದಾಗಿಯೇ ಆರೋಪಿಗಳು ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ. ಪೊಲೀಸ್ ಠಾಣೆಯನ್ನು ಪಂಚಾಯತಿಯ ಕಟ್ಟೆ ಮಾಡಿರುವ ಹಿರಿಮೆ ಈತನದು. ಸುಂದರ ಮಲೆಕುಡಿಯರ ಕೈ ಕತ್ತರಿಸಿದ ಬಗ್ಗೆ ಬೆಳ್ತಂಗಡಿ ಪೊಲೀಸರಿಗೆ ಮಾಹಿತಿ ನೀಡಿದಾಗ ಇಲ್ಲಿನ ಅಧಿಕಾರಿಗಳು ಇಬ್ಬರು ಪೊಲೀಸರನ್ನು ಬಸ್‌ನಲ್ಲಿ ಅಲ್ಲಿಗೆ ಕಳುಹಿಸಿದ್ದಾರೆ. ಇವರ ಕಣ್ಣ ಮುಂದೆಯೆ ಗೋಪಾಲ ಗೌಡ ಕೃತ್ಯವೆಸಗಿದ ವಾಹನದಲ್ಲಿಯೆ ಸುಲಭವಾಗಿ ಪರಾರಿಯಾಗಿದ್ದಾನೆ. ಆಗಲೇ ಪೊಲೀಸರು ಎಚ್ಚರ ವಹಿಸಿದ್ದರೆ ಆತನನ್ನು ಸುಲಭವಾಗಿಯೆ ಬಂಧಿಸಬಹುದಾಗಿತ್ತು, ಕೊನೆಗೂ ಎಎಸ್ಪಿ ರಾಹುಲ್ ಕುಮಾರ್ ಅವರು ತಡರಾತ್ರಿ ಸ್ಥಳಕ್ಕೆ ಆಗಮಿಸಿದ ಬಳಿಕವೇ ಬೆಳ್ತಂಗಡಿ ಪೊಲೀಸರು ಎಚ್ಚೆತ್ತುಕೊಂಡದ್ದು. ಆದರೆ ಅಷ್ಟು ಹೊತ್ತಿಗೆ ಕಾಲ ಮಿಂಚಿತ್ತು.




...ಮ್ಮ ಜಮೀನಿನಲ್ಲಿ ಪೂರ್ವಿಕರ ಸಮಾಧಿಯೊಂದಿಗೆ ರೈತರು



ಜಮೀನಿನಲ್ಲೆ ಬಾವಿ ತೋಡಿಕೊಂಡ ಕುಲಕಸುಬು ನಡೆಸುತ್ತಿರುವ ಅಗಸ ರೈತಾಪಿ ಕುಟುಂಬ

ಬಳ್ಳಾರಿ

ಬಡವರ ಬದುಕಿಗೆ ಬಾಯಿಟ್ಟ ರೆಡ್ಡಿಯ ಭೂ 'ಪ್ರತಾಪ'



...ತಾಪ್ ರೆಡ್ಡಿ

ಬಳ್ಳಾರಿಯ ಗಣಿ ಧೂಳು ಈಗಷ್ಟೆ ತಿಳಿಯಾಗುತ್ತಿದೆ. ...ಕ್ಕದ ಮದದಲ್ಲಿ ಮೆರೆದಾಡಿದವರೆಲ್ಲ ಒಬ್ಬೊಬ್ಬರಾಗಿ ...ಲಕೋಣೆಯತ್ತ ಸರಿಯುತ್ತಿದ್ದಾರೆ. 'ಬಳ್ಳಾರಿ ರಿಪಬ್ಲಿಕ್' ...ನ್ನುವ ಕಳಂಕದ ಪಟ್ಟಿಯಿಂದ ಜಿಲ್ಲೆ ಇಂಚಿಂಚೇ ...ದರವಾಗುತ್ತಿದೆ ಅಂತ ಇಲ್ಲಿನ ಜನ ನಿಟ್ಟುಸಿರುಬಿಡುತ್ತಿದ್ದಾರೆ. ...ದರೂ ಕೆಲ ಫ್ಯೂಡಲಿಸ್ಟ್ ಪಳೆಯುಳಿಕೆಗಳ ಅಬ್ಬರ ...ಲ್ಲೆಯಲ್ಲಿ ಸಂಪೂರ್ಣವಾಗಿ ತಗ್ಗಿಲ್ಲ. ಧಿಮಾಕಿನಿಂದ ...ಮೆರೆದಾಡಿದರೆ ಕೊನೆಗೆ ಏನಾಗುತ್ತೆ ಎಂಬ ಪಾಠಗಳು ...ಣ್ಮುಂದೆ ಓಡಾಡಿಕೊಂಡಿದ್ದರೂ ಬಡವರ ಬದುಕುಗಳ ...ಜೊತೆ ಚೆಲ್ಲಾಟವಾಡುವುದು ಮುಂದುವರೆದೇ ಇದೆ. ...ಅಂತವರಿಗೆ ಕಾಯ್ದೆ ಕಾನೂನುಗಳು ಲೆಕ್ಕಕ್ಕೇ ಇಲ್ಲ. ಏಕೆಂದರೆ ...ಇಡೀ ಆಡಳಿತಯಂತ್ರವನ್ನೇ ತಮ್ಮ ಕೈಯಲ್ಲಿಟ್ಟುಕೊಂಡು ...ಬೇಕಾದ ಬೋಗಸ್ ದಾಖಲೆಗಳನ್ನು ಸೃಷ್ಟಿಸಿ, ...ನ್ಯಾಯಾಲಯವನ್ನೇ ವಂಚಿಸುವುದು ಅವರಿಗೆ ನೀರು ...ಕುಡಿದಷ್ಟು ಸುಲಭವಾಗಿದೆ. ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದ ...ಮಾಜಿ ಅಧ್ಯಕ್ಷ ಪ್ರತಾಪ್ ರೆಡ್ಡಿ ಮಾಡಹೊರಟಿರುವುದು ...ಕೂಡಾ ಇದನ್ನೇ. ಬಳ್ಳಾರಿಯ ಬಂಡಿಹಟ್ಟಿ ಗ್ರಾಮದ ...ಬಗರ್‌ದಸ್ತ್ ಜಮೀನುಗಳ ಮೇಲೆ ಕಣ್ಣಿಟ್ಟಿರುವ ಈ ...ಪ್ರತಾಪ್ ರೆಡ್ಡಿ ಹತ್ತಾರು ವರ್ಷಗಳಿಂದ ಆ ಜಮೀನುಗಳನ್ನೇ ...ನಂಬಿಕೊಂಡು ಉಳುಮೆ ಮಾಡುತ್ತಿರುವ ನೂರಾರು ...ರೈತರನ್ನು ಒಂದೇ ಏಟಿಗೆ ಗುಳೇ ಎಬ್ಬಿಸಲು ...ಸನ್ನದ್ಧನಾಗಿದ್ದಾನೆ. ಇದು ಕೇವಲ ವಂಚನೆ ಮಾತ್ರವಲ್ಲ; ...ಹಗಲನ್ನು ಕತ್ತಲೆಂದು, ಕತ್ತಲನ್ನು ಹಗಲೆಂದು ...ನ್ಯಾಯಾಲಯದಲ್ಲಿ ಸಾಬೀತುಮಾಡಲು ಹೊರಟಿರುವ ...ಷಡ್ಯಂತ್ರ. ಇದಕ್ಕೆ ಜಿಲ್ಲಾಧಿಕಾರಿಯು ಒಳಗೊಂಡಂತೆ ...ಆಡಳಿತವೇ ಆತನಿಗೆ ಸಾಥ್ ನೀಡುತ್ತಿರೋದು ...ದುರ್ದೈವದ ಸಂಗತಿ.

ಏನಿದು ಪ್ರಕರಣ?

...ಐದಾರು ದಶಕಗಳ ಹಿಂದೆ ಬಳ್ಳಾರಿ ನಗರದ ...ಹೊರವಲಯದ ಬಂಡೀಹಟ್ಟಿಯ ಸರ್ವೇ ನಂಬರ್ 715ಎ ...ರಲ್ಲಿನ 1080.34 ಎಕರೆಯು ಬ್ರಹ್ಮಶಾಸ್ತ್ರಿ ಎಂಬುವವರಿಗೆ ...ದಾನ ರೀತಿಯಲ್ಲಿ ದೊರಕಿತ್ತು. ಇದೇ ಭೂಮಿಯಲ್ಲಿಯೇ ...ನೂರಾರು ಕುಟುಂಬಗಳು ಗೇಣಿದಾರರಾಗಿ ಉಳುಮೆ ...ಮಾಡಿಕೊಂಡಿದ್ದರು. ಅವರೆಲ್ಲ ಮಾದಿಗರು, ಕುರುಬರು, ...ಅಗಸರು ಹಾಗು ಮುಸ್ಲಿಮರಲ್ಲದೆ ಇನ್ನಿತರ ...ಹಿಂದುಳಿದ ಜನಾಂಗದವರೇ ಆಗಿದ್ದಾರೆ. ಮಾಜಿ ...ಪ್ರಧಾನಿ ಇಂದಿರಾ ಗಾಂಧಿಯವರ ಉಳುವವನೇ ಭೂಮಿಯ ...ಒಡೆಯ ಎನ್ನುವ ಕಾಯ್ದೆ ಜಾರಿಗೆ ಬಂದಾಗ ಇದೇ ...ಗೇಣಿದಾರರು ತಾವು ಉಳುಮೆ ಮಾಡುತ್ತಿದ್ದ ಜಮೀನಿನ ...ಹಕ್ಕಿಗಾಗಿ ತಹಸೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದರು. ಆಗ ...ಬ್ರಹ್ಮಶಾಸ್ತ್ರಿಯ ವಂಶಸ್ಥರಾದ ವೆಂಕಟರಮಣ ಶಾಸ್ತ್ರಿ ಮತ್ತು ...ಕೃಷ್ಣಶಾಸ್ತ್ರಿಯವರ ಸಮ್ಮುಖದಲ್ಲೇ ಭೂ ನ್ಯಾಯಮಂಡಳಿಯು ...ಸರ್ವೆ ನಂ..., ದಾಖಲಾತಿಗಳ ಸಹಿತ ಭೂಹೀನ ರೈತರಿಗೆ 1975-76 ರಲ್ಲಿ ಸರ್ವೆ ನಂ.715ಎ ರಲ್ಲಿನ 1080.34 ಎಕರೆ ಜಮೀನಿನ ಫಾರಂ ನಂ.10, ಪಹಣಿ, ಚೆಕ್‌ಬಂದಿಯನ್ನು ಅಧಿಕೃತವಾಗಿ ನೀಡಿತ್ತು. ಎಲ್ಲರೂ ಅವರವರ ಹೆಸರಲ್ಲಿ ಮ್ಯುಟೇಷನ್ ಮಾಡಿಸಿಕೊಂಡು ಈ ಆಧಾರದ ಮೇಲೆಯೇ ಇಲ್ಲಿಯವರೆಗೂ ಉಳುಮೆ ಮಾಡಿಕೊಂಡು ಬಂದಿದ್ದಾರೆ.

ಈ ಜಮೀನಿನ ಹತ್ತಿರದಲ್ಲೇ ಎಚ್.ಎಲ್.ಸಿ. ಕಾಲುವೆ ಹೋಗಿದ್ದು ನೀರಿನ ಅಂತರ್ಜಲ ಮೇಲ್ಮಟ್ಟದಲ್ಲಿರುವುದರಿಂದ ಕೃಷಿಯ ಜೊತೆಜೊತೆಗೆ ಅಗಸ ಜನಾಂಗದವರು ತಮ್ಮ ಭಾಗದ ಜಮೀನುಗಳಲ್ಲಿ ಚಿಕ್ಕಚಿಕ್ಕ ಬಾವಿಗಳನ್ನು ತೋಡಿ ಬಟ್ಟೆ ತೊಳೆಯಲು ಅನುಕೂಲವಾಗುವಂತೆ ಕಟ್ಟೆಗಳನ್ನು ನಿರ್ಮಿಸಿಕೊಂಡಿದ್ದಾರೆ. ರೈತಾಪಿ ಜನಕ್ಕೆ ಆ ಜಮೀನು ಎಷ್ಟು ಹಾಸುಹೊಕ್ಕಾಗಿದೆಯೆಂದರೆ ಅವರ ತಾತ-ಮುತ್ತಾಂದಿರ ಸಮಾಧಿಗಳು ಇದೇ ಜಮೀನುಗಳಲ್ಲಿವೆ. ಒಂದಷ್ಟು ಮಂದಿ ಬೋರ್‌ವೆಲ್ ಪಂಪ್‌ಸೆಟ್ ಹಾಕಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಇವೆಲ್ಲವೂ ಜಮೀನಿನೊಂದಿಗೆ ರೈತರಿಗಿರುವ ಸಕ್ರಿಯ ಒಡನಾಟದ ಕುರುಹುಗಳಾಗಿವೆ. ಇಂತಹ ನೆಮ್ಮದಿಯ ಬದುಕುಗಳಿಗೆ ದಿಢೀರ್ ಕಂಟಕವಾಗಿ ವಕ್ಕರಿಸಿದವನೇ ಪ್ರತಾಪ್ ರೆಡ್ಡಿ!

ರೆಡ್ಡಿಯ 'ಭೂಪ್ರತಾಪ'

ಪ್ರತಾಪ್ ರೆಡ್ಡಿ ಬಳ್ಳಾರಿ ಜನತೆಗೆ ಬಹಳ ಪರಿಚಿತವಾದ ಹೆಸರು. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 1995ರಿಂದ 1999ರವರೆಗೆ ಅಧ್ಯಕ್ಷನಾಗಿದ್ದಂತವನು. ಅದಕ್ಕಿಂತಲೂ ಹೆಚ್ಚಾಗಿ ಕುರುಗೋಡು ಮಾಜಿ ಶಾಸಕ ಎಸ್. ಸೂರ್ಯನಾರಾಯಣ ರೆಡ್ಡಿಯ ತಮ್ಮ. ಇವನ ಮೂಲ ಕಸುಬೇ ಅಸಹಾಯಕರ ಜಮೀನುಗಳಿಗೆ ಬೇಲಿ ಸುತ್ತಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಲಪಟಾಯಿಸುವುದು. ಇಂತಹ ಸುಮಾರಷ್ಟು ಕೇಸುಗಳು ಇನ್ನೂ ಕೋರ್ಟ್‌ನಲ್ಲಿ ಇತ್ಯರ್ಥವಾಗದೆ ಉಳಿದಿವೆ.

ಸಮಯಸಾಧಕ ರಾಜಕಾರಣದ ಈ ಪ್ರತಾಪ್ ರೆಡ್ಡಿ 2000ನೇ ಇಸವಿಯಲ್ಲಿ ಶ್ರೀನಿವಾಸ್ ನಾಯ್ಡು ಎಂಬಾತನಿಂದ ಇದೇ ಬಂಡಿಹಟ್ಟಿ ವ್ಯಾಪ್ತಿಯ ಸರ್ವೇ ನಂಬರ್ 1092/4ರಲ್ಲಿದ್ದ 1 ಎಕರೆ 70 ಸೆಂಟ್ಸ್ ಜಮೀನನ್ನು ಒಟ್ಟು 2,04,000 ರೂಪಾಯಿಗೆ ಖರೀದಿಸಿ ರಿಜಿಸ್ಟರ್ ಮಾಡಿಸಿಕೊಂಡಿದ್ದ. ಈ ಜಮೀನು ಮೂಲತಃ ಭೂ ನ್ಯಾಯಮಂಡಳಿಯಿಂದ 1975-76ರಲ್ಲಿ ಗೇಣಿದಾರ ಮುಕುಂದ ಎಂಬ ರೈತನಿಗೆ ಮಂಜೂರಾಗಿತ್ತು. ಆತ ಅದನ್ನು 1999ರಲ್ಲಿ ಶ್ರೀನಿವಾಸ್ ನಾಯ್ಡುಗೆ ಒಂದು ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದ ಎನ್ನಲಾಗುತ್ತದೆ.

ಈ ಜಮೀನು ಖರೀದಿಸುವ ವೇಳೆಯಲ್ಲಿ ದಾಖಲೆ ತಿರುವುತ್ತಿದ್ದ ಸಂದರ್ಭದಲ್ಲಿ ಪಕ್ಕದಲ್ಲೇ ಇದ್ದ ಸರ್ವೇ ನಂಬರ್ 715ಎ ರಲ್ಲಿನ ಜಮೀನುಗಳ ವೃತ್ತಾಂತ ಕಣ್ಣಿಗೆ ಬಿದ್ದಿದೆ. ಬಳ್ಳಾರಿ ನಗರ ಬೆಳೆದಂತೆ, ಹಿಂದೊಮ್ಮೆ ಯಾರಿಗೂ ಬೇಡವಾದ ನಿರ್ಜನ ಪ್ರದೇಶವಾಗಿದ್ದ ಇದೇ ಜಮೀನುಗಳು ಇಂದು ಬಳ್ಳಾರಿಗೆ ಆತುಕೊಂಡಂತೆ ಇರುವುದನ್ನು ಮನಗಂಡ ರೆಡ್ಡಿ ಅವುಗಳನ್ನು ಲಪಟಾಯಿಸಲು ಸ್ಕೆಚ್ ಹಾಕಿದ್ದಾನೆ.

ಕೂಡಲೇ ಆತ ಜಮೀನುಗಳ ಮೂಲ ವಾರಸುದಾರರಾದ ಶಾಸ್ತ್ರಿ ವಂಶದ ಕೃಷ್ಣಶಾಸ್ತ್ರಿ ಹಾಗೂ ಅವನ ಮಕ್ಕಳನ್ನು ಸಂಪರ್ಕಿಸಿ ಅವರಿಗೆ ಹಣದ ಆಮಿಷವೊಡ್ಡಿ ತನ್ನ ಬಲೆಗೆ ಹಾಕಿಕೊಂಡಿದ್ದಾನೆ. 'ಭೂ ನ್ಯಾಯಮಂಡಳಿ ರೈತರಿಗೆ ಭೂಮಿಯನ್ನು ಹಂಚುವಾಗ ಅವು ಆರ್.ಎಸ್. ಸರ್ವೇ ನಂಬರ್‌ಗಳೇ ಆಗಿದ್ದವು. ಆದರೆ ಈಗ ಅವು ಟಿಎಸ್ (ಟೌನ್ ಸರ್ವೇ ನಂಬರ್) ನಂಬರ್‌ಗಳಾಗಿ ಬದಲಾಗಿವೆ. ಕಾನೂನು ಪ್ರಕಾರ ಕೃಷಿ ಜಮೀನನ್ನು ಹೀಗೆ ಮಂಜೂರು ಮಾಡಬಹುದೇ ವಿನಃ, ಕೃಷಿಯೇತರ (ಟಿ.ಎಸ್) ಭೂಮಿಯನ್ನಲ್ಲ; ನೀವು ಈಗ ಆ ಜಮೀನನ್ನು ರೈತರಿಂದ ಕಿತ್ತುಕೊಳ್ಳಿ. ಅವರಿಗೆ ನೀಡುವುದಕ್ಕೆ ಮೊದಲೇ ಅವು ಟಿ.ಎಸ್. ಸರ್ವೇ ನಂಬರ್ ಆಗಿದ್ದವು. ಅದನ್ನು ಪರಿಗಣಿಸದ ಭೂನ್ಯಾಯ ಮಂಡಳಿ ತಪ್ಪೆಸಗಿ, ರೈತರಿಗೆ ಭೂಮಿ ಮಂಜೂರು ಮಾಡಿಬಿಟ್ಟಿದೆ ಅಂತ ಕೋರ್ಟ್‌ನಲ್ಲಿ ಕೇಸ್ ಹಾಕಿರಿ. ಅದಕ್ಕೆ ಬೇಕಾದ ದಾಖಲೆಗಳನ್ನು ನಾನು ಸೃಷ್ಟಿಸಿ ಕೊಡ್ತೀನಿ' ಅಂತ ಅವರಿಗೆ ತಲೆ ನೀವಿದ್ದ. ಅದ್ಯಾಕೊ ಅವರು ಮನಸ್ಸು ಮಾಡಲಿಲ್ಲವೊ ಅಥವಾ ಇಲ್ಲದ ಉಸಾಬರಿ ನಮಗ್ಯಾಕೆ ಅಂತ ಸುಮ್ಮನಾದರೊ ಗೊತ್ತಿಲ್ಲ. ಕೊನೆಗೆ ತಾನೇ ಅಖಾಡಕ್ಕೆ ಇಳಿಯಲು ನಿರ್ಧರಿಸಿದ ಪ್ರತಾಪ್ ರೆಡ್ಡಿ 'ಸರಿ ನೀವಂತು ಈ ವಿಷಯದಲ್ಲಿ ನೇರವಾಗಿ ತಲೆ ಹಾಕಬೇಡಿ, ಆದರೆ ಆ ಜಮೀನನ್ನು ನನಗೆ ಮಾರಾಟ ಮಾಡಿದಂತೆ ಅಗ್ರಿಮೆಂಟ್ ಮಾಡಿಕೊಡಿ. ಮುಂದಿನದ್ದೆಲ್ಲ ನಾನು ನೋಡಿಕೊಳ್ಳುತ್ತೇನೆ' ಅಂತ ಅವರನ್ನು ಡೀಲಿಗೆ ಕುದುರಿಸಿದಂತೆ ಕಾಣುತ್ತದೆ. ಪರಿಣಾಮವಾಗಿ 23 ಜುಲೈ 2003ರಲ್ಲಿ ಬಂಡಿಹಟ್ಟಿಯ ಟಿಎಸ್ ಸರ್ವೇ ನಂಬರ್ 1071 ರಲ್ಲಿರುವ 61.23 ಎಕರೆ ಜಮೀನನ್ನು ಆತನ ಹೆಸರಿಗೂ, 1069 ಮತ್ತು 1070 ಸರ್ವೇ ನಂಬರಲ್ಲಿನ 73.77 ಎಕರೆ ಜಮೀನನ್ನು ತನ್ನ ಹೆಂಡತಿ ಶೈಲಜಾ ರೆಡ್ಡಿ ಹೆಸರಿನಲ್ಲೂ ಖರೀದಿಸಿದಂತೆ ದಾಖಲೆಗಳು ರೆಡಿಯಾಗಿದ್ದವು.

ಈ ಖರೀದಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದರ ಸತ್ಯಾಸತ್ಯತೆಯ ಅಂದಾಜು ಸಿಗುತ್ತದೆ. ಮೊದಲನೆಯದಾಗಿ, ಪ್ರತಾಪ್ ರೆಡ್ಡಿ ಹೆಸರಿನಲ್ಲಿ ಖರೀದಿಯಾದದ್ದು 61.23 ಎಕರೆ. ಕ್ರಯಪತ್ರದಲ್ಲೇ ನಮೂದಾಗಿರುವಂತೆ ಅದಕ್ಕೆ ಆತ ಪಾವತಿಸಿರುವುದು 13,50,000 ರೂಪಾಯಿ. ಇನ್ನು ಅವನ ಹೆಂಡತಿ ಶೈಲಜಾ ಹೆಸರಲ್ಲಿ ಅಕ್ಕಪಕ್ಕದ ಎರಡು ಬೇರೆಬೇರೆ ಸರ್ವೇ ನಂಬರ್‌ಗಳಿಂದ ಖರೀದಿಯಾದದ್ದು 73.77 ಎಕರೆ ಜಮೀನು. ಅದಕ್ಕೆ ಸಂಬಂಧಿಸಿದ ಕ್ರಯಪತ್ರದ ಪ್ರಕಾರ ಆ ಖರೀದಿಗೆ ಶೈಲಜಾರೆಡ್ಡಿ ಪಾವತಿಸಿರೋದು ಕೂಡಾ 13,50,000 ರೂಪಾಯಿ. ಹೆಂಡತಿ ಗಂಡನಿಗಿಂತ 12.54 ಎಕರೆ ಜಾಸ್ತಿ ಭೂಮಿಯನ್ನು ಅದೇ ದಿನ, ಅದೇ ವ್ಯಕ್ತಿಯಿಂದ, ಅದೇ ವ್ಯಾಪ್ತಿಯಲ್ಲಿ ಖರೀದಿಸಿದ್ದರೂ ಮೊತ್ತವೇನೂ ಹೆಚ್ಚಾಗಿಲ್ಲ. ಅಂದರೆ 12.54 ಎಕರೆ ಜಮೀನನ್ನು ಕೃಷ್ಣಶಾಸ್ತ್ರಿ ಬಿಟ್ಟಿಯಾಗಿ ಬಿಟ್ಟುಕೊಟ್ಟಿದ್ದಾನೆ ಎಂದರ್ಥವಲ್ಲವೇ? ಅದು ಸಂಭವಿಸುವಂತಹ ಮಾತಾ?

ಈ ಖರೀದಿಯ ಮತ್ತೊಂದು ಸೂಕ್ಷ್ಮವೇನೆಂದರೆ, ಪ್ರತಾಪ್ ರೆಡ್ಡಿ ಖರೀದಿಸಿದ್ದ 61.23 ಎಕರೆಯನ್ನೇ ಪರಿಗಣನೆಗೆ ತೆಗೆದುಕೊಳ್ಳುವುದಾದರೂ ಆತ ಪ್ರತಿ ಎಕರೆಯನ್ನು 22,048 ರೂಪಾಯಿಗೆ ಖರೀದಿಸಿದ್ದ ಎಂದಾಗುತ್ತೆ. ಇನ್ನು ಅವನ ಹೆಂಡತಿಯ 73.77 ಎಕರೆಯದ್ದು ಪ್ರತಿ ಎಕರೆಗೆ 18,300 ರೂಪಾಯಿ ಎಂದಾಗುತ್ತೆ. ಯಾರಾದರು ಟೌನ್ ಸರ್ವೇ ನಂಬರ್ ಹೊಂದಿರುವ (ಅಂದರೆ, ನಗರ ವ್ಯಾಪ್ತಿಗೆ ಒಳಪಡುವ) ಜಾಗವನ್ನು ಅಷ್ಟು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಾರೆಯೇ? ಹಾಗೊಮ್ಮೆ, 2003ರಲ್ಲಿನ್ನೂ ಬಳ್ಳಾರಿಯಲ್ಲಿ ಅಷ್ಟು ಕಡಿಮೆ ಮೌಲ್ಯದ ಜಮೀನಿಗೆ ಮಾರಾಟ ನಡೆಯುತ್ತಿದ್ದದ್ದು ಎಂದು ವಾದಕ್ಕೆ ಇಳಿಯ ಹೊರಟರೆ ಅಲ್ಲಿಯೂ ಪ್ರತಾಪ್ ರೆಡ್ಡಿ ಬಣ್ಣ ಬಯಲಾಗುತ್ತದೆ. ಅದೇನೆಂದರೆ, 2000ರಲ್ಲಿಯೇ ಆತ ಶ್ರೀನಿವಾಸ್ ನಾಯ್ಡು ಎಂಬಾತನಿಂದ ಇದೇ ವ್ಯಾಪ್ತಿಯ 1 ಎಕರೆ 70 ಸೆಂಟ್ಸ್ ಜಮೀನನ್ನು ಬರೋಬ್ಬರಿ 2,04,000 ರೂಪಾಯಿಗೆ ಖರೀದಿ ಮಾಡಿದ್ದಾನೆ. ಅಂದರೆ ಪ್ರತಿ ಎಕರೆಗೆ 1,20,000 ರೂಪಾಯಿ ತೆತ್ತಿದ್ದ ಅಂತ ನ್ಯಾಯಾಲಯದಲ್ಲಿ ಆತನೇ ಹಾಜರುಪಡಿಸಿರುವ ಕ್ರಯಪತ್ರ ಸಾರಿಸಾರಿ ಹೇಳುತ್ತೆ. 2000ರಲ್ಲಿ ಎಕರೆಗೆ 1,20,000 ಇದ್ದದ್ದು ಮೂರು ವರ್ಷಗಳ ನಂತರ ದಿಢೀರನೆ ಕೇವಲ 20,000ಕ್ಕೆ ದರ ಕುಸಿಯುತ್ತದೆಂದರೆ ಯಾರಾದರು ನಂಬಲಿಕ್ಕೆ ಸಾಧ್ಯವೇ?

ಮೂರನೆಯದಾಗಿ, 2000ರಲ್ಲಿ ಶ್ರೀನಿವಾಸ್ ರೆಡ್ಡಿಯಿಂದ ಖರೀದಿಸಿದ 1 ಎಕರೆ 70 ಸೆಂಟ್ಸ್ ಜಮೀನನ್ನು



ಪ್ರತಾಪ್ ರೆಡ್ಡಿಯ ವಿರುದ್ಧ ಶೋಷಿತ ರೈತರ ಪ್ರತಿಭಟನೆ

▶▶ 06

ರೆಡ್ಡಿಯ ಭೂ 'ಪ್ರತಾಪ'

05 ⏮

ರಿಜಿಸ್ಟರ್ ಮಾಡಿಸಿಕೊಳ್ಳುವಾಗ ಅದನ್ನು ಡ್ರೈ ಲ್ಯಾಂಡ್ ಅಂತ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಆದರೆ ಅದೇ ಬಂಡಿಹಟ್ಟಿ ವ್ಯಾಪ್ತಿಯ 135 ಎಕರೆಯನ್ನು ಕೃಷ್ಣಶಾಸ್ತ್ರಿಯಿಂದ ರಿಜಿಸ್ಟರ್ ಮಾಡಿಸಿಕೊಳ್ಳುವಾಗ ಟೌನ್ ಸರ್ವೇ ಅಂತ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಅಂದರೆ ಒಂದೇ ಭೌಗೋಳಿಕ ಪ್ರದೇಶದಲ್ಲಿ ಹರಡಿಕೊಂಡಿರುವ ಒಂದು ಜಮೀನು ಕೃಷಿ ಭೂಮಿ, ಮತ್ತೊಂದು ನಗರ ಜಮೀನು!

ಅಲ್ಲಿಗೆ 2003ರಲ್ಲಿ ಕೃಷ್ಣಶಾಸ್ತ್ರಿ ಮತ್ತು ಪ್ರತಾಪ್ ರೆಡ್ಡಿ ನಡುವೆ ನಡೆದಿದೆ ಎನ್ನಲಾದ ಇಡೀ ವ್ಯವಹಾರವೇ ಅನುಮಾನದ ಮುಸುಕೆಳೆದುಕೊಳ್ಳುತ್ತದೆ!

ಸುಳ್ಳೇ ಸತ್ಯವಂತೆ!

ಇಂತಹದ್ದೊಂದು ಕ್ರಯಪತ್ರ ತಯಾರಾಗುತ್ತಿದ್ದಂತೆಯೇ ಆ ಜಮೀನುಗಳಲ್ಲಿ ಕೃಷಿ ಮಾಡುತ್ತಿದ್ದ ರೈತರ ಮೇಲೆ ಏಕಾಏಕಿ ಎಗರಿಹೋದ ಪ್ರತಾಪ್ ರೆಡ್ಡಿ 'ಇದು ನನ್ನ ಜಮೀನು, ನೀವು ಈಗಿಂದೀಗಲೇ ಜಾಗ ಖಾಲಿ ಮಾಡಿ' ಅಂತ ಧಮಕಿ ಹಾಕಿದ್ದಲ್ಲದೆ ನ್ಯಾಯಾಲಯದಲ್ಲಿ ಕೇಸನ್ನೂ ಜಡಿದಿದ್ದಾನೆ. ನ್ಯಾಯಾಲಯದಲ್ಲಿ ಆತ ಮಂಡಿಸುತ್ತಿರುವ ವಾದ ಏನೆಂದರೆ, '1975-76ರಲ್ಲಿ ಭೂ ನ್ಯಾಯ ಮಂಡಳಿ ರೈತರಿಗೆ ಜಮೀನು ಮಂಜೂರು ಮಾಡಿದ್ದೇನೊ ನಿಜ. ಆದರೆ ಹಾಗೆ ಮಂಜೂರು ಮಾಡುವಾಗ ಸರ್ವೇ ನಂಬರ್ 715ಎ ರಲ್ಲಿನ ಜಮೀನನ್ನು ಸರಿಯಾಗಿ ಸರ್ವೇ ಮಾಡದ ತಹಸೀಲ್ದಾರ್ ಮತ್ತಿತರ ಅಧಿಕಾರಿಗಳು ಅರ್ಜಿ ಸಲ್ಲಿಸಿದ್ದ ಪ್ರತಿಯೊಬ್ಬರಿಗೂ ಬೇಕಾಬಿಟ್ಟಿಯಾಗಿ ಫಾರಂ.10ನ್ನು ನೀಡಿದ್ದಾರೆ. ಅದರ ಪರಿಣಾಮವೆಂದರೆ, ಪಕ್ಕದಲ್ಲೇ ಇರುವ ತನ್ನ ಸರ್ವೇ ನಂಬರ್ 1069, 1070, 1071ರಲ್ಲೂ ಇರುವ ಜಮೀನನ್ನೂ ಬೇರೆಯವರಿಗೆ ವಿಲೇವಾರಿ ಮಾಡಿಬಿಟ್ಟಿದ್ದಾರೆ. ಸರಿಯಾದ ನಕ್ಷೆ ಇಲ್ಲದೇ ಮಾಡಿದ ಈ ವಿಲೇವಾರಿಯಿಂದ ಸರ್ವೇ ನಂಬರ್ 715ಎ ನನ್ನ ಜಮೀನುಗಳ ಮೇಲೂ ಓವರ್‌ಲ್ಯಾಪ್ ಆಗಿ ಈಗ ರೈತರಿಂದ ನನ್ನ ನೆಮ್ಮದಿ ಹಾಳಾಗುತ್ತಿದೆ. ಅವರಿಂದ ನನಗೆ ರಕ್ಷಣೆ ಕೊಡಿ' ಅಂತನ್ನುತ್ತಿದ್ದಾನೆ.

ಒಂದಲ್ಲ, ಎರಡಲ್ಲ ಬರೋಬ್ಬರಿ 135 ಎಕರೆಯಷ್ಟು ಯಾರದೋ ಜಮೀನನ್ನು ಇನ್ಯಾರಿಗೊ ಸರ್ಕಾರ ಮಂಜೂರು ಮಾಡಿಕೊಡುತ್ತೆ ಮತ್ತು ಅದಾಗಿ ಸುಮಾರು ನಲವತ್ತು ವರ್ಷಗಳ ನಂತರ ಮೂಲ ಜಮೀನುದಾರರಿಗೆ ಅದರ ಅರಿವಾಗಿ ದಾವೆ ಹೂಡಲು ದೌಡಾಯಿಸುತ್ತಾರೆ ಎಂಬುದೇ ಹಾಸ್ಯಾಸ್ಪದದ ಸಂಗತಿ. ಆದರೆ ಕೋರ್ಟ್‌ಗೆ ಇಂತಹ ವಿವೇಚನೆಗಿಂತ ಹೆಚ್ಚಾಗಿ ಬೇಕಾಗಿರೋದು ಕಾಗದಪತ್ರಗಳ ದಾಖಲೆ ಮಾತ್ರ!

ಜಿಲ್ಲಾಡಳಿತದ ಶಾಮೀಲು

ಪ್ರತಾಪ್ ರೆಡ್ಡಿ ಬಡಜನರನ್ನು ಕೋರ್ಟ್ ಮೆಟ್ಟಿಲು ಹತ್ತುವಂತೆ ಮಾಡಿ ಬಿಡ್ದಾಕ್ಕೆ ಬೀಳಿಸಿಕೊಂಡರೆ ಈ ವಿಚಾರದಲ್ಲಿ ಜಿಲ್ಲಾಡಳಿತ ಕಾನೂನಾತ್ಮಕವಾಗಿ ನಡೆದುಕೊಳ್ಳದೆ ಅನ್ಯಾಯವನ್ನು ಮುಂದುವರೆಸುತ್ತಾ ಪ್ರತಾಪ್ ರೆಡ್ಡಿಗೆ ಹಿಂಬಾಗಿಲಿನಿಂದ ಸಹಾಯ ಮಾಡುತ್ತಾ ಬರುತ್ತಿದೆ.

ಸರ್ಕಾರ ಕೊಟ್ಟಿದ್ದ ಸರ್ವೇ ನಂಬರ್, ಪಹಣಿ, ಚೆಕ್‌ಬಂದಿ ಪ್ರಕಾರವೇ ನೂರಾರು ಕುಟುಂಬಗಳು ಉಳುಮೆ ಮಾಡಲು ಬಾವಿ, ಬೋರ್‌ವೆಲ್‌ಗಳನ್ನು ಹಾಕಿಸಿಕೊಂಡಿದ್ದಾರೆ. ತಾನೇ ಹಂಚಿದ ಭೂಮಿಯ ಬಗ್ಗೆ ತನ್ನ ಆದೇಶವನ್ನು ತಾನೇ ಸಮರ್ಥಿಸಿಕೊಳ್ಳದೆ, ಹಿಂದೆಮುಂದೆ ನೋಡುತ್ತಿರುವುದು ನೋಡಿದರೆ ಜಿಲ್ಲಾಡಳಿತದ ಮೇಲೆಯೇ ಅನುಮಾನ ಬರುತ್ತದೆ. ರೈತರು ಬೆಳೆಗಳನ್ನು ಬೆಳೆದು ಹೊಲಗಳ ಮೇಲೆ ಬ್ಯಾಂಕ್‌ಗಳಲ್ಲಿ ಸಾಲ ಪಡೆಯುತ್ತಿರುವುದು ಅಲ್ಲದೆ ಸರ್ಕಾರಕ್ಕೆ ಕಂದಾಯವನ್ನೂ ಪಾವತಿಸುತ್ತಿದ್ದಾರೆ.



ಜಮೀನಿನಲ್ಲಿ ತಾವು ಬೆಳೆದ ಬೆಳೆಯೊಂದಿಗೆ ರೈತ ಕುಟುಂಬ

ಇಷ್ಟೆಲ್ಲಾ ಇದ್ದರೂ ಜಿಲ್ಲಾಡಳಿತ ಕಳೆದ 10-15 ವರ್ಷಗಳಿಂದ ಈ ವಿಚಾರದ ಬಗ್ಗೆ ಒಬ್ಬೊಬ್ಬ ಅಧಿಕಾರಿ ಒಂದೊಂದು ರೀತಿ ಆದೇಶ ನೀಡುತ್ತಾ ಗೊಂದಲವನ್ನುಂಟುಮಾಡುತ್ತಿರುವುದು ಸೋಜಿಗದ ಸಂಗತಿ.

ಪ್ರತಾಪ್ ರೆಡ್ಡಿಯ ಹುನ್ನಾರದಲ್ಲಿ ಆಡಳಿತ ವರ್ಗದವರೂ ಕೈಜೋಡಿಸಿದ್ದಾರೆ ಎಂದು ಆರೋಪಿಸುವುದಕ್ಕೆ ಪ್ರಬಲ ಕಾರಣವಾಗಿರೋದು ರೈತರಿಗೆ ದಾಖಲೆಗಳನ್ನು ಕೊಡದೆ ಸತಾಯಿಸುತ್ತಿರೋದು. ರೈತರು 1975-76ರಲ್ಲಿ ಭೂ ನ್ಯಾಯಮಂಡಳಿಯಿಂದ ಮಂಜೂರು ಮಾಡಿಸಿಕೊಂಡಾಗ ಅಷ್ಟೂ ಜಮೀನು ಬ್ರಹ್ಮಶಾಸ್ತ್ರಿಯ ಹೆಸರಿನಲ್ಲಿತ್ತು. ಪ್ರತಾಪ್‌ರೆಡ್ಡಿ ಮಾಡಿಕೊಂಡಿರುವ ಖರೀದಿ ಕ್ರಯಪತ್ರದಲ್ಲಿ ಇದೇ ಕೃಷ್ಣಶಾಸ್ತ್ರಿಯನ್ನು ಬ್ರಹ್ಮಶಾಸ್ತ್ರಿಯ ಮಗ ಎಂದು ತೋರಿಸಲಾಗಿದೆ. ಆದರೆ ಸ್ಥಳೀಯ ಹಿರಿತಲೆಗಳು ಹೇಳುವ ಪ್ರಕಾರ ಈ ಬ್ರಹ್ಮಶಾಸ್ತ್ರಿಗೆ ಮಕ್ಕಳೇ ಇರಲಿಲ್ಲ. ಅವನ ತಮ್ಮನಾದ ತಿಪ್ಪೇಶಾಸ್ತ್ರಿಗೆ ರಾಜಶಾಸ್ತ್ರಿ ಅಂತ ಒಬ್ಬ ಮಗನಿದ್ದು ಅವನ ಮೂರು ಮಕ್ಕಳಲ್ಲಿ ಕೃಷ್ಣಶಾಸ್ತ್ರಿ ಒಬ್ಬ. ಅಂದರೆ ಪ್ರತಾಪ್ ರೆಡ್ಡಿಗೆ ಜಮೀನು ಮಾರಾಟ ಮಾಡಿದ್ದಾನೆ ಎನ್ನಲಾದ ಕೃಷ್ಣಶಾಸ್ತ್ರಿಯು ಬ್ರಹ್ಮಶಾಸ್ತ್ರಿಯ ತಮ್ಮನ ಮೊಮ್ಮಗ. ಸರಿ, ಕೃಷ್ಣಶಾಸ್ತ್ರಿಯನ್ನು ಬ್ರಹ್ಮಶಾಸ್ತ್ರಿಯ ಮಗ ಅಂತಲೇ ಅಂದುಕೊಳ್ಳೋಣ. ಆಗಲಾದರೂ ತಂದೆ ಬ್ರಹ್ಮಶಾಸ್ತ್ರಿಯಿಂದ, ಕೃಷ್ಣಶಾಸ್ತ್ರಿಗೆ ವರ್ಗಾವಣೆಯಾದ ದಾಖಲೆಗಳಾದರು ಇರಬೇಕಲ್ಲವೇ? ಈ ಕುರಿತು ವರ್ಗಾವಣೆಯ ದಾಖಲೆಗಳನ್ನು ಒದಗಿಸುವಂತೆ ಎ.ಡಿ.ಎಲ್.ಆರ್ ಕಚೇರಿಗೆ ರೈತರು ಆರ್‌ಟಿಐ ಅರ್ಜಿ ಸಲ್ಲಿಸಿದಾಗ ಅಧಿಕಾರಿಗಳಿಂದ ಬಂದ ಉತ್ತರ 'ಆ ದಾಖಲೆಗಳು ಸುಟ್ಟು ಹೋಗಿವೆ!'

ಇದನ್ನು ನಂಬಲು ಸಾಧ್ಯವೇ, ಯಾವುದೇ ಅಗ್ನಿ ಅವಘಡ ಸಂಭವಿಸದೆ, ಕೇವಲ ಮೂರು ದಶಕಗಳಷ್ಟು ಹಳೆಯ ದಾಖಲೆಗಳು ಸುಟ್ಟು ಹೋಗಿವೆ ಎಂದರೆ ಇದಕ್ಕೆ ಏನೆನ್ನಬೇಕು?

ಇದಕ್ಕೆ ವ್ಯತಿರಿಕ್ತವಾಗಿ, ರೈತರಿಗೆ ಮಂಜೂರು ಮಾಡಿಕೊಟ್ಟಿರುವ ಭೂಮಿಗಳು 1936ರಲ್ಲೇ ಟಿ.ಎಸ್. (ಟೌನ್ ಸರ್ವೇ ವ್ಯಾಪ್ತಿಗೆ ಒಳಪಟ್ಟಿದ್ದವು) ಆಗಿದ್ದವು ಎಂಬಂತೆ ಹೇಳುವ 1950ರಲ್ಲಿ ಪ್ರಕಟವಾಗಿದ್ದ ಚಿತ್ತೂರು ವಿಭಾಗದ ಗೆಜೆಟ್ ಎನ್ನುವಂತಹ ದಾಖಲೆಯೊಂದು ನನ್ನ ಕೈಲಿದೆ ಎಂದು ಪ್ರತಾಪ್ ರೆಡ್ಡಿ ಹೇಳಿಕೊಳ್ಳುತ್ತಿದ್ದಾನೆ. ಆ ದಾಖಲೆಯ ಸಾಚಾತನ ಇನ್ನೂ ಬೆಳಕಿಗೆ ಬರಬೇಕಾಗಿದೆ. ವೈಚಿತ್ರ್ಯವೇನೆಂದರೆ, ಬಡ ರೈತರು ಮೂವತ್ತು ವರ್ಷಗಳಷ್ಟು ಹಳೆಯ ದಾಖಲೆಗಳನ್ನು ಕೇಳಿದರೆ, ಅದು ಸುಟ್ಟು ಹೋಗಿದೆ ಅಂತ ಉತ್ತರ ಸಿಗುತ್ತೆ; ಅದೇ ಪ್ರತಾಪ್ ರೆಡ್ಡಿಯಂತಹ ಧನಿಕನ ಕೈಗೆ ಎಪ್ಪತ್ತು ವರ್ಷಗಳಷ್ಟು ಹಳೆಯದು ಎನ್ನಲಾದ ದಾಖಲೆಯೊಂದು ಸೃಷ್ಟಿಯಾಗಿ ದಕ್ಕುತ್ತದೆ. ಹೀಗಾದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳದೆ ಮತ್ತಿನ್ನೇನು. ಆಗ, ಇದೇ ಪ್ರತಾಪ್ ರೆಡ್ಡಿಯಂತಹ ರಾಜಕಾರಣಿಗಳು ಆ ರೈತರ ಮನೆಗೆ ಹೋಗಿ, ಫೋಟೊಕ್ಕೆ ಹೂವಿನ ಹಾರ ತಗುಲಿಸಿ, ಮೊಸಳೆ ಕಣ್ಣೀರು ಸುರಿಸಿ, ಐದೊ-ಹತ್ತೊ ಸಾವಿರ ಪರಿಹಾರ ಕೊಟ್ಟು 'ಜನನಾಯಕ' ಎನ್ನಿಸಿ ಬಿಡುತ್ತಾರೆ! ಇದೇ ನಮ್ಮ ಭವ್ಯ ಸಮಾಜ...

ಜನರನ್ನು ಮಾತ್ರವಲ್ಲ, ನ್ಯಾಯಾಲಯವನ್ನು



ಜಮೀನಿನ ಪಕ್ಕದಲ್ಲಿ ಇರುವ ಕಾಲುವೆ

ಯಾಮಾರಿಸುವುದರಲ್ಲೂ ಈ ರೆಡ್ಡಿ ನಿಸ್ಸೀಮ. ಸರ್ವೇ
715ಎ ರಲ್ಲಿನ 135 ಎಕರೆ ಭೂಮಿಯನ್ನು (
ಪ್ರತಾಪ್ ರೆಡ್ಡಿ ನನ್ನದು ಎಂದು ಹೇಳಿಕೊಳ್ಳುತ್ತಿರು
ಭೂನ್ಯಾಯ ಮಂಡಳಿ ವತಿಯಿಂದ ಒಟ್ಟು
ಕುಟುಂಬಗಳಿಗೆ ಹಕ್ಕುಪತ್ರ ಕೊಡಲಾಗಿತ್ತು, ಈ 17 ಮ
ಗೇಣಿದಾರರಲ್ಲಿ 3 ಜನ ಮಾತ್ರ ಬದುಕಿದ್ದಾರೆ. ಸತ್ತ
ಮಕ್ಕಳು ಈಗ ವ್ಯವಸಾಯ ಮಾಡಿಕೊಂಡಿದ್ದಾರೆ. ಆ
ಪ್ರತಾಪ ರೆಡ್ಡಿ ಹೈಕೋರ್ಟ್‌ನಲ್ಲಿ ಈ 17 ಜನ
ಸೇರಿಕೊಂಡು ನಾನು ಖರೀದಿಸಿರುವ ಭೂಮಿಯ
ಅತಿಕ್ರಮಿಸಿ, ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದಾರೆ, ರಕ್ಷಣೆ ಹಾ
ಬಂದೋಬಸ್ತ್ ಮಾಡಿಕೊಳ್ಳಲು ಅವಕಾಶ ನೀಡಿ ಎಂ
ಕೇಸು ಹಾಕಿದ್ದಾನೆ. ಅಂದರೆ ಆ ಜಮೀನಿನಲ್ಲಿ
ಸಕ್ರಿಯವಾಗಿರುವ ರೈತ ಯಾರು ಎನ್ನುವ ವಾಸ್ತವಿಕತೆಯ
ಅವನಿಗೆ ತಿಳಿದಿಲ್ಲ, ಅವನದೇನಿದ್ದರು ದಾಖಲೆಗಳ ಮೇ
ಹಾರಾಟ. ಯಾರ್‍ಯಾರ ಹೆಸರಲ್ಲಿ ಭೂಮಿ ಮಂಜೂರಾಗಿ
ಅವರೆಲ್ಲ ಇನ್ನು ಬದುಕಿದ್ದಾರೆ, ಅವರೇ ಉಳು
ಮಾಡುತ್ತಿದ್ದಾರೆ ಎನ್ನುವ ಪೇಪರ್ ಲೆಕ್ಕಾಚಾರದಲ್ಲೇ ಕೆ
ಜಡಿದಿದ್ದಾನೆ. ಹಾಗೊಮ್ಮೆ ನಿಜಕ್ಕೂ ಅದು ಅವನ
ಜಮೀನಾಗಿದ್ದು, ಅಲ್ಲಿ ಆತ ಹಕ್ಕು ಸಾಧಿಸಲು ಭೌತಿಕವ
ಮುಂದಾಗಿದ್ದಿದ್ದರೆ ಯಾರ್‍ಯಾರು ಅಡ್ಡಿ ಪಡಿಸುತ್ತಿದ್ದಾರೆ, ಅ
ಹೆಸರೇನು, ಕತೆಯೇನು ಎಂಬುದು ಗೊತ್ತಾಗುತ್ತಿ
ಅದಿರಲಿ, ವಿಚಿತ್ರದ ಸಂಗತಿಯೆಂದರೆ, ಕೋರ್ಟ್ ಸತ್ತ
ಹೆಸರಿನಲ್ಲಿಯೂ ಆದೇಶ ನೀಡಿ, ಸತ್ತವರು ಪ್ರತಾಪ ರೆ
ಅಡ್ಡಿ ಬರಬಾರದೆಂದು ತಡೆಯಾಜ್ಞೆ ನೀಡಿದೆ!!

ಬೀದಿಗೆ ಬಂದ ವಂಚಿತರು

ಭೂ ನ್ಯಾಯ ಮಂಡಳಿಯು ನ್ಯಾಯಯುತವ
ಹಂಚಿರುವ ಭೂಮಿಯನ್ನು ಬಿಟ್ಟು ಫಲಾನುಭವಿಗಳ
ಬೇರೆಯವರ ಭೂಮಿಯನ್ನು ಒತ್ತುವರಿ ಮಾಡಿಕೊಂಡಿ
ಒಂದು ವೇಳೆ ಒತ್ತುವರಿಯಾಗಿದ್ದರೆ, ಮೂಲನಕ್ಷೆ ಮ
ಸರ್ವೇಯ ಮೂಲಕ ಸರ್ಕಾರ, ಜಿಲ್ಲಾಡಳಿತದ ಮೂ
ಬಗೆಹರಿಸಬಹುದಾಗಿದೆ. ಈ ವಿಚಾರವಾಗಿ ಹಲ
ವರ್ಷಗಳಿಂದ ಸರ್ಕಾರಕ್ಕೆ, ಜಿಲ್ಲಾಡಳಿತಕ್ಕೆ ಕೊಟ್ಟ ಮನ
ಅರ್ಜಿಗಳು ಧೂಳು ತಿನ್ನುತ್ತಿವೆ. ಸರ್ಕಾರಿ ಕಚೇರಿಗ
ಅಲೆದು ಅಲೆದು ರೈತರು ನೆಲಕಚ್ಚುವ ಹಂತಕ್ಕೆ ತಲುಪಿದ
ಈ ಫಲಾನುಭವಿಗಳೆಲ್ಲರೂ ಪ್ರತಿನಿತ್ಯವೂ ಒಂದಲ್ಲ ಒಂ
ದಿನಗೂಲಿ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ
ಈ ಸಂದರ್ಭದಲ್ಲಿ ಪ್ರತಾಪ್ ರೆಡ್ಡಿಯ ಕಡೆಯವರೆಂ
ಹೇಳಿಕೊಳ್ಳುವ ಜನರು ಕೊಲೆ ಬೆದರಿಕೆ ಹಾಕುತ್ತಿದ್ದಾರಲ
ದೌರ್ಜನ್ಯವನ್ನು ನಡೆಸುತ್ತಿದ್ದಾರೆ. ಸುಪಾರಿ ಹಂತಕರ
ಕಳುಹಿಸಿ ಏನು ಬೇಕಾದರೂ ಮಾಡಲು ಸಿದ್ಧ ಎಂ
ಮಾತುಗಳೂ ಕೇಳಿ ಬರುತ್ತಿವೆ. ಈ ರೀತಿಯ ದೌರ್ಜ
ದಬ್ಬಾಳಿಕೆಗೆ ಬೆದರಿ ಕೆಲ ಕುಟುಂಬಗಳು ಭೂಮಿಯ
ಕೇಳಲೂ ಹಿಂಜರಿಯುತ್ತಿದ್ದಾರೆ. ಆದರೂ ಸ್ವಾಭಿಮ
ರೈತರು ಜನಪರ ಸಂಘಟನೆಗಳ ಮೂಲಕ ಕರಿಯ
ಗುಡಿಮನಿ, ರಾಮಚಂದ್ರ, ವೆಂಕಟರಾಮ್, ಮೋಹನ್
ಇವರ ನೇತೃತ್ವದಲ್ಲಿ ಹೋರಾಟಕ್ಕೆ ಇಳಿದಿದ್ದಾ
ಭೂಮಾಲೀಕರ ವಿರುದ್ಧ ಹೋರಾಟ ಮಾಡಿ 40 ವರ್ಷ
ಶೋಷಣೆಗೆ ಕಳೆದ ವರ್ಷ ತೆರೆ ಎಳೆದ ಶ್ರೀರಾಮರಂಗಾಪ
ರೈತರು ಈ ಹೋರಾಟದೊಂದಿಗೆ ಕೈ ಜೋಡಿಸಿರುವು
ಬಹಳ ವಿಶೇಷ.

ಈಗಲಾದರು ಸರ್ಕಾರ ಎಚ್ಚೆತ್ತುಕೊಂಡು ಸೂಕ್ತ ಕ್ರಮ
ಮುಂದಾಗದಿದ್ದರೆ, ಬಡ ರೈತರು ಬದುಕು ಪ್ರತಾ
ರೆಡ್ಡಿಯ ಅಟ್ಟಹಾಸಕ್ಕೆ ನಲುಗಿ ಹೋಗುವುದು ಸುಳ್ಳ
ಈಗಾಗಲೇ ಸರಣಿ ರೈತ ಆತ್ಮಹತ್ಯೆಯಿಂದ ಕಂಗೆಟ್ಟಿರು
ಸರ್ಕಾರ ಆಮೇಲೆ ಸಾಮೂಹಿಕ ರೈತ ಆತ್ಮಹತ್ಯೆಯ
ಉಣ್ಣಬೇಕಾದೀತು..

■ ವರದಿಗಾ

ರೈತನ ಕೈ ಕತ್ತರಿಸಿದ ಭೂಮಾಲಿಕ...

04 ⏮

ಹತ್ತು ಸಾವಿರ ಕೊಟ್ಟು ಸುಮ್ಮನಾದ ಶಾಸಕ

ಬೆಳ್ತಂಗಡಿ ಶಾಸಕ ವಸಂತ ಬಂಗೇರನಿಗೂ ಗೋಪಾಲಗೌಡನಿಗೂ ಕಂಡರಾಗುವುದೇ ಇಲ್ಲ. ಆದರೆ ಕೈ ಕಡಿದ ಗೋಪಾಲಗೌಡನ ಬಗ್ಗೆ ಒಂದು ಹೇಳಿಕೆ ಕೊಡಲೂ ಅವರು ಹಿಂಜರಿಯುತ್ತಿರುವುದು ಸೋಜಿಗ.. ಘಟನೆ ನಡೆದ ಕೂಡಲೆ ಶಾಸಕರ ಬಳಿಗೆ ಅಲ್ಲಿನ ಜನರು ಹೋಗಿದ್ದಾರೆ. ಆಗ ಅವರು ಹತ್ತು ಸಾವಿರ ರೂಪಾಯಿ ಕೊಟ್ಟು ಕಳಿಸಿದ್ದಾರೆ. ಆಸ್ಪತ್ರೆಗೆಂದು ಓಡಾಡಿದವರೂ ಕಾಂಗ್ರೆಸಿಗರೆ. ಆದರೆ ಪಕ್ಷದ ವತಿಯಿಂದ ಒಂದು ಹೇಳಿಕೆ ನೀಡಲೂ ಯಾವ ನಾಯಕರೂ ಮುಂದಾಗುತ್ತಿಲ್ಲ. ತಾಲೂಕಿನಲ್ಲಿ ಪ್ರಬಲರಾಗಿರುವ ಒಕ್ಕಲಿಗರನ್ನು ಓಲೈಸಲು ಈ ಧೋರಣೆ ಅನುಸರಿಸುತ್ತಿದ್ದಾರೆ ಎಂಬ ಆರೋಪವು ಶಕ್ತವಾಗಿ ಕೇಳಿಬರುತ್ತಿದೆ.

ಬಳಸಿ ಎಸೆದ ಬಿಜೆಪಿಗರು

"ನಮ್ಮ ಸುಂದರ ಮಲೆಕುಡಿಯರ ಮಗನನ್ನು ಕಳೆದ ಚುನಾವಣೆಯ ಸಮಯ ಬಿಜೆಪಿಗರು ಹಾಗು ಸಂಘಪರಿವಾರ 'ಹಿಂದೂ ನಾವೆಲ್ಲ ಒಂದು' ಎಂದು ಹೇಳಿ ಉಪಯೋಗಿಸಿಕೊಂಡಿತ್ತು. ಆದರೆ ಆತನ ತಂದೆಯ ಕೈ ಕತ್ತರಿಸಿದಾಗ ಇವರ್‍ಯಾರೂ ಅತ್ತ ತಿರುಗಿಯೂ ನೋಡಿಲ್ಲ. ಕಾಶ್ಮೀರದಲ್ಲಿ ಹಿಂದೂಗಳಿಗೆ ಅನ್ಯಾಯವಾಯಿತೆಂದು ನೆರಿಯದಲ್ಲಿ ರಕ್ತಹರಿಸಲು ಸಿದ್ಧರಾಗುವ ಸಂಘ ಪರಿವಾರಕ್ಕೆ ಅನ್ಯಾಯಕ್ಕೆ ಒಳಗಾದಾಗ ಸುಂದರಮಲೆಕುಡಿಯ ಹಿಂದೂವಾಗಿ ಕಾಣಲೇ ಇಲ್ಲ. ಆತನ ನೆರವಿಗೆ ಬರುವ ಬದಲು ಆರೋಪಿಯ ರಕ್ಷಣೆಗೆ ನಿಂತಿದ್ದಾರೆ.

ಇಡೀ ಘಟನೆಯ ಬಗ್ಗೆ ಸಿಪಿಐ(ಎಂ) ರಸ್ತೆಗಿಳಿದು ಪ್ರತಿಭಟಿಸಿದೆ ಮತ್ತು ಮಲೆಕುಡಿಯ ಕುಟುಂಬಕ್ಕೆ ದಲಿತ ಸಂಘಟನೆಗಳು ಹಾಗು ಎಸ್‌ಡಿಪಿಐಯ ಯುವಕರು ನಿಂತಿದ್ದಾರೆ. ಉಳಿದಂತೆ ಎಲ್ಲರದ್ದೂ ಇಲ್ಲಿ ಮೌನ.

ನೆರಿಯದ ಹೆಬ್ಬಾರನ ದೌರ್ಜನ್ಯಗಳ ವಿರುದ್ಧ ದಶಕದ ಹಿಂದೆ ಮಲೆಕುಡಿಯರು ಬೀದಿಗಿಳಿದಿದ್ದರು. ಸುಮಾರು 50 ಮಲೆಕುಡಿಯ ಕುಟುಂಬಗಳನ್ನು ನೆರಿಯ ಎಸ್ಟೇಟಿನ ಮಾಲಿಕ ಹೆಬ್ಬಾರ ಜೀತಕ್ಕಿಟ್ಟಿದ್ದ. ಇದರ ವಿರುದ್ಧ ಕದ್ದು ಮುಚ್ಚಿ ಶಾಲೆಗೆ ಹೋಗಿ ಶಿಕ್ಷಣ ಪಡೆದ ಎಲ್ಯಣ್ಣ ಮಲೆಕುಡಿಯರ ನೇತೃತ್ವದಲ್ಲಿ ಜನ ಸಿಡಿದೆದ್ದರು. ಅವರಿಗೆ ಜೀತದಿಂದ ಮುಕ್ತಿ ದೊರಕಿದ್ದರೂ ಇನ್ನೂ ಮೂಲ ಸೌಲಭ್ಯಗಳು ಕನಸೇ ಆಗಿವೆ. ಸ್ಥಳೀಯರು ಜೀತದಿಂದ ಮುಕ್ತರಾದಾಗ ಹೊರಗಿನಿಂದ ಜನರನ್ನು ತಂದು ಜೀತದಾಳುಗಳಾಗಿ ದುಡಿಸಲಾಗುತ್ತಿದೆ ಎಂಬ ಮಾಹಿತಿಯು ಲಭ್ಯವಾಗುತ್ತದೆ. ಉತ್ತರ ಭಾರತದವರನ್ನು ಹಾಗೂ ಬಾಂಗ್ಲಾ ವಲಸಿಗರನ್ನು ಇಲ್ಲಿ ಜೀತದಾಳುಗಳಾಗಿ ದುಡಿಸುತ್ತಿರುವ ಗುಮಾನಿಯಿದೆ. ಸಾವಿರಾರು ಎಕರೆ ವ್ಯಾಪಿಸಿರುವ ಈ ಸಾಮ್ರಾಜ್ಯದೊಳಗೆ ಯಾರಿಗೂ ಪ್ರವೇಶವೇ ಇಲ್ಲವಾಗಿದ್ದು ಅಲ್ಲಿ ಏನು ನಡೆದರೂ ಅದು ಹೊರ ಪ್ರಪಂಚಕ್ಕೆ ತಿಳಿಯುವುದೇ ಇಲ್ಲ. ಇನ್ನು ಇದೇ ಸ್ಥಿತಿ ವಿನಪೋಯ ಎಸ್ಟೇಟಿನಲ್ಲಿಯೂ ಇದೆ. ಇವರ ಎಸ್ಟೇಟಿನ ಮಧ್ಯೆ ಇರುವ ಬಾಂಜಾರು ಮಲೆಯ ಮಲೆಕುಡಿಯರ ಕಾಲೋನಿಗೆ ಹೋಗಬೇಕಾದರೆ ಅವರು ಹಾಕಿರುವ ಗೇಟ್ ದಾಟಿಯೆ ಹೋಗಬೇಕು. ಅಲ್ಲಿ ಅಪ್ಪಣೆಯ ವಿನಃ ಪ್ರವೇಶವಿಲ್ಲ ಎಂಬ ಬೋರ್ಡ್ ನೇತಾಡುತ್ತಿದೆ. ಈ ದೊರೆಗಳ ಅನುಮತಿ ಪಡೆದೇ ಇವರು ಮನೆಯಿಂದ ಹೊರಹೋಗಬೇಕು ಅಥವಾ ಮನೆಗೆ ಹೋಗಬೇಕಾಗಿದೆ.

ನೆರಿಯ ಹಾಗೂ ವಿನಪೋಯ ಎಸ್ಟೇಟಿನವರು ಭಾ
ಪ್ರಮಾಣದಲ್ಲಿ ಅಕ್ರಮ ಜಮೀನನ್ನು ಇಟ್ಟುಕೊಂಡಿದ
ಎಂಬ ವಿಚಾರದಲ್ಲಿ ಕಳೆದ ಹಲವಾರು ವರ್ಷಗಳಿ
ನ್ಯಾಯಾಲಯಗಳಲ್ಲಿ ಪ್ರಕರಣಗಳು ನಡೆಯುತ್ತಿದ್ದರೂ ಅ
ಯಾವುದೂ ಅಂತ್ಯ ಕಾಣುತ್ತಿಲ್ಲ.

ನೆರಿಯದ ಜಮೀನಿನ ಸರಿಯಾದ ಅಳತೆ ಆ
ಅಲ್ಲಿರುವ ಎಸ್ಟೇಟ್ ಮಾಲಿಕರುಗಳು ತಮ್ಮ ಬ
ಅಕ್ರಮವಾಗಿ ಇರಿಸಿಕೊಂಡಿರುವ ಸಾವಿರಾರು ಎ
ಜಮೀನು ಪತ್ತೆಯಾಗಲಿದೆ. ನೆರಿಯ ಹಾಗೂ ತಾಲೂ
ವಿವಿಧೆಡೆಗಳಲ್ಲಿ ಮೂಲನಿವಾಸಿಗಳು ಹಾಗೂ ಬಡವ
ಸಾವಿರಾರು ಸಂಖ್ಯೆಯಲ್ಲಿ ಮನೆಕಟ್ಟಲು ನಿವೇಶನವಿಲ್ಲ
ಪರದಾಡುತ್ತಿರುವಾಗ ಈ ಅಕ್ರಮ ಜಮೀನ
ವಶಪಡಿಸಿಕೊಂಡು ಅವರಿಗೆ ಹಂಚಲು ಸರಕಾರಿ ವ್ಯ
ಮಾಡಬೇಕಿದೆ. ಆದರೆ ಅಂತಹ ಯೋಜನೆಗೆ ತಾಲೂ
ಯಾವ ರಾಜಕಾರಣಿಯೂ ಬೆಂಬಲ ನೀಡಲಾರ. ಆದ್ದರಿ
ಜನಪರ ಚಿಂತನೆಯಿರುವ ರಾಜ್ಯ ಸರಕಾರದ ಕಂದಾ
ಸಚಿವರಾದರೂ ಇತ್ತ ಗಮನ ಹರಿಸುವರೇ?

■ ವರದಿಗಾ


ಇರ್ಶಾದ್ ಉಪ್ಪಿನಂಗಡಿ ಅವರ ಸಾಕ್ಷ್ಯಚಿತ್ರ
ಸ್ವರ್ಗದ ಹಾದಿಯಲ್ಲಿ: ಕಮರುತ್ತಿರುವ ಕನಸುಗಳು

ಮಂಗಳೂರಿನ ಯುವ ಪತ್ರಕರ್ತ, ಇರ್ಶಾದ್ ...ನಂಗಡಿ ಸ್ವಾತಂತ್ರ್ಯ, ಸೌಹಾರ್ದಗಳನ್ನು ...ಸುವವರೆಲ್ಲರೂ ಅಗತ್ಯ ನೋಡಬೇಕಾದ ಒಂದು ಕಿರು ...ವನ್ನು ನಿರ್ಮಿಸಿದ್ದಾರೆ. 'ಸ್ವರ್ಗದ ಹಾದಿಯಲ್ಲಿ: ...ಮರುತ್ತಿರುವ ಕನಸುಗಳು' ಎಂಬ ಹೆಸರಿನ ಈ ಸಾಕ್ಷ್ಯ... ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರಾಥಮಿಕ ಶಾಲೆಗಳ ...ಸ್ಲಿಂ ವಿದ್ಯಾರ್ಥಿಗಳ ಮೇಲೆ ಹೇರಲಾಗುವ ...ಬಂಧಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಈ ...ರ್ಥಿಗಳು ತಮ್ಮ ಶಾಲೆಯ ಡ್ಯಾನ್ಸ್, ನಾಟಕ ಇತ್ಯಾದಿ ...ವಟಿಕೆಗಳಲ್ಲಿ ಭಾಗವಹಿಸಕೂಡದು ಎಂದು ಮುಸ್ಲಿಂ ...ಗುರುಗಳು ನಿರ್ಬಂಧಿಸುವುದು ಹಾಗು ಅದಕ್ಕೆ ...ಕ್ಕಳು, ಅವರ ಹೆತ್ತವರು, ಸಾಮಾಜಿಕ ಧುರೀಣರು, ...ರ್ಮಿಕ ಮುಖಂಡರು, ಅಧ್ಯಾಪಕರು ಮುಂತಾದವರ ...ಯೆ ಗಳನ್ನು ಸಾಕ್ಷ್ಯಚಿತ್ರ ನಿರೂಪಿಸುತ್ತದೆ.

ಈ ನಿರ್ಬಂಧಗಳನ್ನು ದೊಡ್ಡ ದ್ವನಿಯಲ್ಲಿ ಪ್ರತಿಭಟಿಸಿರು...ವಲ್ಲಿ ಪ್ರಮುಖರೆಂದರೆ ನಾಡಿನ ಎಲ್ಲ ಸ್ವಾತಂತ್ರ್ಯಪ್ರಿಯರ ...ಮುಕ್ಕನ ಹಾಗಿರುವ ಲೇಖಕಿ ಸಾರಾ ಅಬುಬಕ್ಕರ್, ...ಮಾಜಿಕ ಕಾರ್ಯಕರ್ತೆ ಜೋಹರ ನಿಸಾರ್ ಅಹ್ಮದ್ ...ಹಿ ಸದಾ ಜನಪರ ಹೋರಾಟಗಳ ಮುಂಚೂಣಿ...ಯಲ್ಲಿರುವ ಡಿ.ವೈ.ಎಸ್.ಪಿ ಮುಖಂಡ ಮುನೀರ್ ...ಪಳ್ಳ. ಮೂವರೂ ಧರ್ಮದ ಹೆಸರಿನಲ್ಲಿ ಧರ್ಮಗುರು... ಶಾಲೆಯಲ್ಲಿ ಮುಸ್ಲಿಂ ಮಕ್ಕಳು ಡ್ಯಾನ್ಸ್ ಇತ್ಯಾದಿ ...ಡದಂತೆ ಹೆದರಿಸಿ, ಆ ಮಕ್ಕಳನ್ನು ಇತರರಿಂದ ...ರವಿಡುವುದನ್ನು ಖಂಡಿಸುತ್ತಾರೆ. ಸಾರಾ "ನಾವೆಲ್ಲರೂ ...ಟ್ಟಿಗಿ ಇಂತಹ ನಿಷೇಧಗಳ ವಿರುದ್ಧ ಹೋರಾಡಬೇಕು" ...ಮ ಹೇಳಿದರೆ ಜೋಹರ "ಮುಸ್ಲಿಂ ಮಕ್ಕಳು ಡ್ಯಾನ್ಸ್ ...ಡಕೂಡದು ಎನ್ನುವ ಬದಲು ಮುಸ್ಲಿಂ ಮಕ್ಕಳಿಗೆ ಆ ...ಲ್ಲ ಎಂದು ಹೇಳಲಿ; ಮುಸ್ಲಿಮರಿಗೆ ಬೇರೆ ಕಾನೂನು ...ಮ ಹೇಳಲಿ" ಎಂದು ಸವಾಲು ಹಾಕುತ್ತ ಪರೋಕ್ಷವಾಗಿ ...ರತದ ಸಂವಿಧಾನ ಎಲ್ಲ ಪ್ರಜೆಗಳಿಗೂ ಕೊಟ್ಟಿರುವ ...ಂತ್ರ್ಯಗಳನ್ನು ನೆನಪಿಸುತ್ತಾರೆ.

ಸಾಕ್ಷ್ಯಚಿತ್ರ ಕೊನೆಯಲ್ಲಿ ಭಾರತವೂ ಅಂಗೀಕರಿಸುವ ...ರಾಷ್ಟ್ರ ಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶ ...ಪಿಸಿರುವ ಮಕ್ಕಳ ಹಕ್ಕುಗಳನ್ನು ಪ್ರಸ್ತಾಪಿಸುತ್ತದೆ. ...ಸ್ಲಿಂ ಮಕ್ಕಳ ಹಕ್ಕುಗಳ ಪರವಾಗಿ ಈ ಚಿತ್ರದಲ್ಲಿ ...ಬರುವ ಇನ್ನೊಂದು ದಿಟ್ಟ ಧನಿ ಮುನೀರ್ ಕಾಟಿಪಳ್ಳ...ರದ್ದು. ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಮಾತ್ರವಲ್ಲ, ...ಡುಗರಿಗೆ ಸಹ ಡ್ಯಾನ್ಸ್, ನಾಟಕ ಇತ್ಯಾದಿಗಳಲ್ಲಿ ಭಾಗವಹಿ...ಸತೆ ನಿರ್ಬಂಧಿಸಲಾಗುತ್ತಿದೆ ಎಂದು ಹೇಳುತ್ತ ತಮ್ಮ ...ರ್ಥಿ ದಿನಗಳಲ್ಲಿ ಮದ್ರಸಾ ಗುರುಗಳು ತಮ್ಮ ಮೇಲೆ ...ರಿದ ನಿರ್ಬಂಧಗಳ ಕುರಿತು ಮುನೀರ್ ತಿಳಿಸುತ್ತಾರೆ.

ಇರ್ಶಾದ್ ಈ ಸಾಕ್ಷ್ಯಚಿತ್ರದಲ್ಲಿ ತಮ್ಮ ಕ್ಲಾಸ್‌ಮೇಟ್‌ಗಳ ...ತೆ ತಾವೂ ಡ್ಯಾನ್ಸ್ ಮಾಡಬೇಕು ಎಂಬ ಉತ್ಕಟ ...ಯನ್ನು ಅದುಮಿಟ್ಟು, "ನಾವು ಮುಸ್ಲಿಮರು, ನಾವು ...ನ್ಸ್ ಮಾಡ್ಲಿಕ್ಕೆ ಬಾರದು ಅಲ್ಲವಾ? ನಮ್ಮ ಪಳ್ಳಿ ಶಾಲೆಯ ...ಷ್ಟು ಬೈತಾರೆ. ಅರೇಬಿಕ್ ಸರ್, ಡ್ಯಾನ್ಸ್ ಮಾಡ್ಲಿಕ್ಕೆ ...ದು ಅಂತ ಹೆದರಿಸ್ತಾರೆ" ಎಂದು ಮುಂತಾಗಿ ಮುಸ್ಲಿಂ ...ಡುಗಿಯರು ಹೇಳುವುದನ್ನೂ ನಮಗೆ ಕಾಣಿಸುತ್ತಾರೆ; ...ಹುಡುಗಿಯರ ಅಳಲನ್ನು ಅವರ ಸ್ವರದಲ್ಲೇ ಕೇಳಿಸುತ್ತಾರೆ. ...ಕ್ಲಾಸಿನ ಇತರ ಹುಡುಗಿಯರು ಡ್ಯಾನ್ಸ್ ಹೆಜ್ಜೆ ...ಕುತ್ತ ಕರಿ ಹಲಗೆ, ಡೆಸ್ಕು ಬೆಂಚುಗಳ ನೀರಸ ಕ್ಲಾಸು ...ಮನ್ನು ನಂದನವನವನ್ನಾಗಿ ಮಾರ್ಪಡಿಸುವುದನ್ನು ಈ



ಹುಡುಗಿಯರು ಆಸೆ ಕಣ್ಣಿನಿಂದ ನೋಡುವುದನ್ನೂ ಇರ್ಶಾದ್ ನಮಗೆ ಕಾಣಿಸುತ್ತಾರೆ. "ಇವರಲ್ಲಿ ಕೆಲವರು ಹಿಂದೆ ಕೂತು ತಮ್ಮಷ್ಟಕ್ಕೆ ತಾವು ತಮ್ಮ ಸಹಪಾಠಿಗಳನ್ನು ಅನುಕರಿಸುವುದನ್ನು ನೋಡಿದರೆ ಬೇಜಾರಾಗುತ್ತದೆ" ಎಂದು ಒಬ್ಬ ಅಧ್ಯಾಪಕಿ ತಿಳಿಸುತ್ತಾರೆ. ಇರ್ಶಾದ್ ಈ ಹೆಣ್ಣುಮಕ್ಕಳ ಹೆತ್ತವರಲ್ಲಿಯೂ ಕೆಲವರನ್ನು ಮಾತಾಡಿಸಿದ್ದಾರೆ. ಅವರಲ್ಲಿ ಒಂದಿಬ್ಬರಿಗೆ ತಮ್ಮ ಮಕ್ಕಳು, ಅವರ ಕ್ಲಾಸ್‌ಮೇಟುಗಳ ಜೊತೆ ಡ್ಯಾನ್ಸ್ ಮಾಡುವುದನ್ನು ನೋಡುವ ಆಸೆ ಇದೆ; ಆದರೆ ಧರ್ಮಗುರುಗಳ ಭೀತಿ. ಇನ್ನು ಕೆಲವು ಹೆತ್ತವರು ತಮ್ಮ ಹೆಣ್ಣು ಮಕ್ಕಳು 7 ನೇ ಕ್ಲಾಸಿನವರೆಗೆ ಡ್ಯಾನ್ಸ್ ಇತ್ಯಾದಿಗಳಲ್ಲಿ ಭಾಗವಹಿಸಲು ಅಡ್ಡಿಯಿಲ್ಲ ಎಂದು ಭಾವಿಸುವವರು. ಈ ಸಾಕ್ಷ್ಯಚಿತ್ರದಲ್ಲಿ ನಮಗೆ ಎದುರಾಗುವ ಒಬ್ಬ ಮುಸ್ಲಿಂ ಗೃಹಸ್ಥನ ಇಬ್ಬಂದಿತನ ಸಂಸಾರವಂದಿಗನೊಬ್ಬ ಯಾವ ಧರ್ಮದವನಾದರೂ ಎದುರಿಸುವಂತಹದ್ದು. ಅವರಿಗೆ ತಮ್ಮ ಹೆಣ್ಣುಮಕ್ಕಳು ಸ್ಕೂಲ್ ಡೇ ಸಮಾರಂಭದಲ್ಲಿ ಡ್ಯಾನ್ಸ್ ಮಾಡಬೇಕು, ತಾವು ಅದನ್ನು ನೋಡಬೇಕು ಎಂಬ ಆಸೆ; ಆದರೆ ತಮ್ಮ ಧರ್ಮ ಆ ಬಗ್ಗೆ ಏನು ಹೇಳುತ್ತದೆ ಎಂಬ ಅಳುಕು.

"ನಮಗೆ ಎರಡೂ ಬೇಕಲ್ಲವಾ?" ಎಂಬುದು ಅವರ ಉಭಯ ಸಂಕಟ. ಕರಾವಳಿಯ ಗ್ರಾಮಾಂತರ ಶಾಲೆಗಳಲ್ಲಿ ಮುಸ್ಲಿಂ ಮಕ್ಕಳ ಮೇಲೆ ಇಂತಹ ನಿರ್ಬಂಧಗಳನ್ನು ಹೇರುವುದು ಹೆಚ್ಚಾಗಿ ಕಾಣುತ್ತದೆ. "ನಮ್ಮ ಶಾಲೆಗೆ ಸಿಟಿಯಿಂದಲೂ ಮುಸ್ಲಿಂ ಮಕ್ಕಳು ಬರುತ್ತಾರೆ. ಅವರು ಎಲ್ಲ ಪ್ರೋಗ್ರಾಮ್‌ಗಳಲ್ಲೂ ಭಾಗವಹಿಸುತ್ತಾರೆ. ಅವರ ಹೆತ್ತವರೂ ಅದಕ್ಕೆ ಅಡ್ಡ ಬರುವುದಿಲ್ಲ" ಎಂದು ಓರ್ವ ಅಧ್ಯಾಪಕಿ ತಿಳಿಸುತ್ತಾರೆ.

ಇರ್ಶಾದ್ ಅವರ ಸಾಕ್ಷ್ಯಚಿತ್ರದಲ್ಲಿ ಶಾಲಾ ಅಧ್ಯಾಪಕರಾದ ತ್ರಿವಿಕ್ರಮ ಮೂರ್ತಿ, ಸುಮಲತಾ, ಜಯರಾಂ ಶೆಟ್ಟಿ, ನಳಿನಿ ರೈ, ಮಕ್ಕಳ ಹಕ್ಕು ಹೋರಾಟಗಾರ ರೆನ್ನಿ ಹಾಗು ಕಸ್ತೂರಿ, ಧರ್ಮಗುರುಗಳಾದ ಬಿ.ಕೆ. ಇಬ್ರಾಹಿಂ ಮದನಿ, ಮೊಹಮ್ಮದ್ ಅಲಿ ದಾರಿಮಿ, ಜಮಾತ್-ಎ-ಇಸ್ಲಾಂ ಹಿಂದ್‌ನ ಮುಖಂಡ ಮೊಹಮ್ಮದ್ ಕುಂಜ್ಞಿ ಸಲಾಫಿ ಸಂಘಟನೆಯ ಸಲಾಹುದ್ದೀನ್ ಮತ್ತು ಇತರರು ಮುಸ್ಲಿಂ ಮಕ್ಕಳು ಡ್ಯಾನ್ಸ್ ನಾಟಕ ಇತ್ಯಾದಿ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ತಿಳಿಸುತ್ತಾರೆ. ಸಾಕ್ಷ್ಯಚಿತ್ರದ ವೈಶಿಷ್ಟ್ಯವೆಂದರೆ, ಅದನ್ನು ನಿರ್ಮಿಸಿರುವ ಇರ್ಶಾದ್ ಚಿತ್ರದಲ್ಲಿ ಎಲ್ಲೂ ಒಂದು ಮಾತನ್ನೂ ಆಡುವುದಿಲ್ಲ; ಸಾಕ್ಷ್ಯಚಿತ್ರ ನೇರವಾಗಿ ಏನನ್ನೂ ಪ್ರತಿಪಾದಿಸುವುದಿಲ್ಲ; ಅದು ಧರ್ಮದ ಪಾವಿತ್ರ್ಯವನ್ನೂ ಪ್ರಶ್ನಿಸುವುದಿಲ್ಲ; ನಾಸ್ತಿಕವಾದವನ್ನು ಸಹ ಬೋಧಿಸುವುದಿಲ್ಲ, ಮಕ್ಕಳ ಮುಗ್ಧ ಮನಸ್ಸುಗಳಲ್ಲಿ ಪ್ರಾಯಸ್ಥರ ಪೂರ್ವಗ್ರಹಗಳನ್ನು ತುಂಬಬೇಡಿ ಎಂಬುದು ಮಾತ್ರ ಈ ಸಾಕ್ಷ್ಯಚಿತ್ರದ ಕಳಕಳಿಯ ಮನವಿ. ಇರ್ಶಾದ್ ತಾನು ಹೇಳಬೇಕಾದ್ದನ್ನೆಲ್ಲ ದೃಶ್ಯವತ್ತಾಗಿ ಕಾಣಿಸುತ್ತಾರೆ. ಏಳರಿಂದ ಹತ್ತು ವರ್ಷ ಪ್ರಾಯದ ಮಕ್ಕಳು ತಮ್ಮ ಜಾತಿ, ಮತ ಇತ್ಯಾದಿ ಭೇದಗಳನ್ನೆಲ್ಲ ಮರೆತು ಒಟ್ಟಿಗೆ ನರ್ತಿಸುವುದನ್ನು ನೋಡುವಾಗ, ಈ ಶಾಲಾ ಕ್ಲಾಸುರೂಮುಗಳು ಮಾತ್ರ ಈಗ ನಮ್ಮ ಸಮಾಜದಲ್ಲಿ ಉಳಿದಿರುವ ನಿರ್ಮಲ ಗಾಳಿ ಬೆಳಕುಗಳ ಒಂದೇ ಒಂದು ತಾಣ ಎನ್ನಿಸುತ್ತದೆ. ನಮ್ಮ ಕ್ಲಾಸುರೂಮುಗಳೂ 'ನಾವು ಮುಸ್ಲಿಮರು, ನಾವು ಹಿಂದೂಗಳು, ನಾವು ಬೇರೆ ಬೇರೆ' ಎಂಬ ಭೇದಭಾವದಿಂದ ಕಲುಷಿತವಾದರೆ ನಮ್ಮ ಸಮಾಜಕ್ಕೆ ಉಳಿಗಾಲವಿದೆಯೆ?

ಸಾಕ್ಷ್ಯಚಿತ್ರದಲ್ಲಿ ಒಬ್ಬ ಹುಡುಗಿ "ಡ್ಯಾನ್ಸ್ ಮಾಡಬಾರದು ಎಂದು ಮನೆಯವರು ಹೇಳಿದರೂ ತಾನು ಮಾಡುವವಳೇ" ಎನ್ನುತ್ತಾಳೆ. ಅವಳ ಇಚ್ಛಾಶಕ್ತಿ ಮತ್ತು ಧೈರ್ಯ ಎಲ್ಲಾ ಹುಡುಗಿಯರಿಗೂ ಬರಲಿ ಎಂದು ಚಿತ್ರ ನೋಡಿದ ಮೇಲೆ ನಮಗೆ ಅನಿಸುತ್ತದೆ.

ಸಾಕ್ಷ್ಯಚಿತ್ರದಲ್ಲಿ ಒಂದೆಡೆ ಸಾರಾ "ಒಂದು ಕಾಲದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳನ್ನು ಶಾಲೆಗೇ ಕಳುಹಿಸುತ್ತ ಇರಲಿಲ್ಲ" ಎಂದು ನೆನಪಿಸಿಕೊಳ್ಳುತ್ತಾ ಇವತ್ತು ಹೆಚ್ಚು ಹೆಚ್ಚು ಮುಸ್ಲಿಂ ಹುಡುಗಿಯರು ಆಧುನಿಕ ಶಿಕ್ಷಣದ ಕಡೆ ಮುಖ ಮಾಡಿರುವುದರ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. ಇದೊಂದು ಒಳ್ಳೆಯ ಬೆಳವಣಿಗೆ. ಯಾವ ಕಾರಣಕ್ಕೂ



ಮುಸ್ಲಿಂ ಹುಡುಗಿಯರ ಶಿಕ್ಷಣವನ್ನು ಚಿಗುರಿನಲ್ಲೇ ಚಿವುಟಿಹಾಕುವುದಕ್ಕೆ ಯಾರೂ ಅವಕಾಶ ಕೊಡಕೂಡದು. ಆದರೆ ಮುಸ್ಲಿಂ ಹುಡುಗ ಹುಡುಗಿಯರಿಗೆ ಆಧುನಿಕ ಶಿಕ್ಷಣ ಕೊಡಿಸಬೇಕು ಎಂಬ ಹಂಬಲ ಆ ಸಮುದಾಯದಲ್ಲಿ ಹೆಚ್ಚುತ್ತಿರುವ ಈ ದಿನಗಳಲ್ಲೇ ಮುಸ್ಲಿಂ ಹುಡುಗಿಯರಿಗೆ ನಾಟಕ ನಿಷಿದ್ಧ, ಡಾನ್ಸ್ ಹರಾಮ್ ಇತ್ಯಾದಿ ಭಾವನೆಗಳು ಸಮುದಾಯದಲ್ಲಿ ತಲೆದೋರಿರುವುದು ಆಧುನಿಕತೆಯ ಅನಿವಾರ್ಯ ದ್ವಂದ್ವವೆ? ಇರ್ಶಾದ್ ಅವರ ಸಾಕ್ಷ್ಯಚಿತ್ರ ಈ ನಿಟ್ಟಿನಲ್ಲಿ ನಮ್ಮನ್ನು ಚಿಂತನೆಗೆ ತೊಡಗಿಸುತ್ತದೆ.

ಧರ್ಮಾಧಾರಿತ ರಾಜಕಾರಣ ಮಾಡುವ ಕೆಲವು ಮುಸ್ಲಿಂ ಮುಖಂಡರು ಸಮುದಾಯದ ಆಚರಣೆ, ಸಂಪ್ರದಾಯ ಇತ್ಯಾದಿಗಳ ಹೆಸರಿನಲ್ಲಿ ಇಂತಹ ನಿರ್ಬಂಧಗಳನ್ನು ಸಮರ್ಥಿಸುತ್ತಾರೆ. ವ್ಯಕ್ತಿಗಳಿಗೆ ಮಾತ್ರವಲ್ಲ, ಸಮುದಾಯಗಳಿಗೂ ಆಚರಣೆಯ ಹಕ್ಕುಗಳಿವೆ ಎಂಬ ವಾದವನ್ನು ಸಹ ಈಗ ಕೆಲವು ಸ್ಥಾಪಿತ ಹಿತಾಸಕ್ತಿಗಳು ಚಾಲ್ತಿಗೆ ತಂದಿವೆ. ಭಾರತದ ಸಂವಿಧಾನ ವಿವಿಧ ಮತ, ಜಾತಿ, ಪಂಗಡ ಮತ್ತು ಬುಡಕಟ್ಟುಗಳ ಆಚರಣೆಯ ಹಕ್ಕುಗಳನ್ನು ಮನ್ನಿಸುತ್ತದೆ ನಿಜ. ಆದರೆ ಸಂವಿಧಾನದತ್ತವಾದ ಇತರ ಸ್ವಾತಂತ್ರ್ಯಗಳನ್ನು ಈ ಆಚರಣೆಗಳು ಅಲ್ಲಗಳೆಯುವಂತಿಲ್ಲ, ಆದ್ದರಿಂದಲೇ ಅಸ್ಪೃಶ್ಯತೆಯ ಆಚರಣೆಯನ್ನು ಬಹುಸಂಖ್ಯಾತರ ಧಾರ್ಮಿಕ ಆಚರಣೆಗಳಲ್ಲಿ ಅದಕ್ಕೆ ಮನ್ನಣೆ ಇದ್ದರೂ ಸಂವಿಧಾನ ನಿಷೇಧಿಸಿದೆ. ಅದೇ ರೀತಿಯಲ್ಲಿ ಇಸ್ಲಾಮ್‌ನ ಪವಿತ್ರ ಕಿತಾಬ್, ಹದೀಸ್ ಇತ್ಯಾದಿಗಳನ್ನು ಮುಂದಿಟ್ಟು ಶಾಲೆಯಂತಹ ಸಾರ್ವಜನಿಕ ಸ್ಥಳಗಳಲ್ಲಿ ಅವುಗಳ ಪ್ರತಿಪಾದನೆಗಳನ್ನು (ಅದು ಕೂಡ ತಮ್ಮ ಮೂಗಿನ ನೇರಕ್ಕೆ ತಕ್ಕಂತೆ ಅರ್ಥೈಸಿಕೊಂಡು) ಒಳನುಗ್ಗಿಸ ಕೂಡದು. ಇದು ಸಮುದಾಯದ ಆಚರಣೆಯ ಹಕ್ಕುಗಳ ಹೆಸರಿನಲ್ಲಿ ಧಾರ್ಮಿಕ ಮುಖಂಡರು ನಡೆಸುವ ದಬ್ಬಾಳಿಕೆ. ಇತ್ತೀಚಿನ ದಿನಗಳಲ್ಲಿ ಶಾಲೆ, ಕಾಲೇಜು, ಹೆದ್ದಾರಿ, ಬಸ್ ಸ್ಟ್ಯಾಂಡ್, ಐಸ್ ಕ್ರೀಮ್ ಪಾರ್ಲರ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂಗಳು ಮತ್ತು ಹಿಂದೂಯೇತರರು ಬೆರೆಯದಂತೆ ಭಜರಂಗಿಗಳು ನೈತಿಕ ಪೊಲೀಸುಗಿರಿ ನಡೆಸುವ ಪರಿಪಾಠ ಕರಾವಳಿಯ ಊರುಗಳಲ್ಲಿ ಶುರುವಾಗಿದೆ. ಈಗ ಶಾಲೆಗಳ ಕ್ಲಾಸುರೂಮುಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳನ್ನು ಧರ್ಮದ ಹೆಸರಿನಲ್ಲಿ ಇತರರಿಂದ ಬೇರ್ಪಡಿಸುವುದು ಕೂಡ ನೈತಿಕ ಪೊಲೀಸುಗಿರಿಯಲ್ಲವೇ?

■ ಜಿ. ರಾಜಶೇಖರ

ಒಂದು ಪತ್ರ

ನತದೃಷ್ಟವಂತ!

ಅವತ್ತು ಆಗಸ್ಟ್ 3, ನನ್ನ ಬದುಕಿನ ಅತಿ ಕರಾಳ ದಿನ!

...ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳನ್ನು ತಡೆಯುವ ...ನಲ್ಲಿ 'ಕರ್ನಾಟಕ ಜನಶಕ್ತಿ' ಸಂಘಟನೆ ಪರ್ಯಾಯ ಹೋರಾಟ ರೂಪಿಸಿತ್ತು. ...ಹೆಚ್ಚು ರೈತರು ಆತ್ಮಹತ್ಯೆಗೊಳಗಾಗಿರುವ ಮಂಡ್ಯ ಜಿಲ್ಲೆಯನ್ನು ...ಕೊಂಡು 'ರೈತ ಹೋರಾಟ ಜಾಥಾ'ವನ್ನು ಹಮ್ಮಿಕೊಂಡಿತ್ತು, ಮಂಡ್ಯದ ...ಸುಮಾರು '750' ಹಳ್ಳಿಗಳಲ್ಲಿ ಈ ಹೋರಾಟ ಜಾಥಾ ಮಾಡಲಾಯಿತು. ...ಜಾಥಾದಲ್ಲಿ ನಾನು ಕೂಡ ಪಾಲ್ಗೊಂಡಿದ್ದು, ರೈತರ ಸಂಕಷ್ಟಗಳೇನು? ...ರ ಆತ್ಮಹತ್ಯೆಗಳಿಗೆ ಕಾರಣಗಳೇನು? ಎಂಬುದನ್ನು ತಿಳಿಯಲು ...ನವಾಯಿತು.

...ಆತ್ಮಹತ್ಯೆ- ದುಬಾರಿ ಬಿತ್ತನೆ ಬೀಜಗಳು, ಖಾಸಗೀ ಲೇವಾದೇವಿಯವರ ...ಅತಿಯಾದ ಗೊಬ್ಬರದ ಬೆಲೆ, ಬೆಳೆಗಳಿಗೆ ಸರಿಯಾದ ಬೆಲೆ ಸಿಗದಿರುವುದು ...ಮಧ್ಯವರ್ತಿಗಳ ದೋಚಿಕೊಳ್ಳುವಿಕೆ ಇತ್ಯಾದಿ ಅನೇಕ ರೀತಿಯ ಸಮಸ್ಯೆಗಳೇ ...ರ ಆತ್ಮಹತ್ಯೆಗಳಿಗೆ ಕಾರಣ. ಇದನ್ನು ತಡೆಗಟ್ಟಬೇಕು, ಸಮಸ್ಯೆಗಳಿಗೆ ...ಹತ್ಯೆ ಪರಿಹಾರವಲ್ಲ, ಪರಿಹಾರವನ್ನು ಹೋರಾಟದ ಮೂಲಕ ಪಡೆಯಲು ...ಎಂಬುದನ್ನು ರೈತರ ಮನವೊಲಿಸಲು, ರೈತರಿಗೆ ಆತ್ಮಸ್ಥೈರ್ಯ ತುಂಬಲು, ...ರೈತ ಹೋರಾಟ ಜಾಥಾ ಮಾಡಲಾಯಿತು.

...-21 ರಿಂದ ನಿರಂತರವಾಗಿ ಮಂಡ್ಯದ ಎಲ್ಲಾ ಹಳ್ಳಿಗಳಿಗೂ ...ಸುಮಾರು 120 ವಿದ್ಯಾರ್ಥಿಗಳು ಬೀದಿ ನಾಟಕ, ಹೋರಾಟದ ...ಗೀತೆಗಳನ್ನು ಹಾಡುವುದು, ಭಾಷಣಗಳನ್ನು ಮಾಡುತ್ತಾ, ನಿಮ್ಮ ...ಜೊತೆಗೆ ನಾವಿದ್ದೇವೆ ಬನ್ನಿ ಎಂದು ನೊಂದ ರೈತರಿಗೆ ಸಾಂತ್ವನ ...ಹೇಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೆವು. 'ಆಗಸ್ಟ್ 3ರ ...ಜಿಲ್ಲಾಧಿಕಾರಿ ಕಚೇರಿ ದಿಗ್ಬಂಧನಕ್ಕೆ, ರೈತರು ಕೂಡ ಬರುವುದಾಗಿ ...ಹೇಳಿ, ಕೀರಿ ನಮ್ಮ ಪ್ರಯತ್ನಕ್ಕೆ ಕೈಜೋಡಿಸಿದರು. ಇನ್ನೇನು



ಆಗಸ್ಟ್ 3 ಬಂದಿತು. ನಾನಂತೂ ತುಂಬಾ ಕುತೂಹಲದಿಂದ ಆಗಸ್ಟ್ 3ಕ್ಕೆ ಸ್ವಾಗತ ನೀಡಿದೆ. ರೈತರ ನೋವಿನ ಕೂಗು, ಎಲ್ಲಾ ರೈತರು ಒಗ್ಗೂಡಿದಾಗ ಬರುವ ಆಕ್ರೋಶದ ಧ್ವನಿ, ವಿದ್ಯಾರ್ಥಿ ಯುವಜನರ ಬೆಂಬಲ, ನಮ್ಮ ಸಂಘಟನೆಯ ಕಾರ್ಯಕರ್ತರ ಕೆಚ್ಚೆದೆ, ಹಲವು ದಿನಗಳ ವಿದ್ಯಾರ್ಥಿಗಳ ಪರಿಶ್ರಮಕ್ಕೆ ಫಲಸಿಗಬಹುದೇ ಎನ್ನುವ ಆತಂಕ ಮತ್ತು ರೈತಾಪಿ ವರ್ಗ ಮತ್ತು ವಿದ್ಯಾರ್ಥಿಯುವ ಸಮೂಹ ಸೇರಿ ಯಾವ ರೀತಿಯಲ್ಲಿ ನಾವು ಸರ್ಕಾರಗಳಿಗೆ ಧಿಕ್ಕಾರ ಹಾಕುತ್ತೇವೆ ಹಾಗೂ ಅದಕ್ಕೆ ಸರ್ಕಾರ ಯಾವ ರೀತಿಯಲ್ಲಿ ಪ್ರತಿಸ್ಪಂದಿಸುತ್ತದೆ ಎನ್ನುವುದನ್ನು ನೋಡಲು ತುಂಬಾ ಕಾತರದಿಂದ ಕಾಯುತ್ತಿದ್ದೆ.

ಆ ಘಳಿಗೆ ಶುರುವಾಗಲು 2 ಗಂಟೆಗಳು ಬಾಕಿ ಇದ್ದವು. ಕರ್ನಾಟಕ ಜನಶಕ್ತಿಯ ಕಾರ್ಯಕರ್ತರು ಮತ್ತು 'ಕರ್ನಾಟಕ ವಿದ್ಯಾರ್ಥಿ ಸಂಘಟನೆ'ಯ ಎಲ್ಲಾ ವಿದ್ಯಾರ್ಥಿಗಳು ಸಿದ್ಧತೆಯಲ್ಲಿದ್ದೆವು. ನಾನು ರೆಡಿಯಾಗಿ ಹೋರಾಟದ ಸಿದ್ಧತೆಯಲ್ಲಿ ತೊಡಗಿದ್ದಾಗ ನನ್ನ ಮೊಬೈಲ್‌ಗೆ ಒಂದು ಕರೆ ಬಂತು. ಅದನ್ನು ಸ್ವೀಕರಿಸಿದಾಗ ನಾನು ಊಹೆ ಮಾಡದ ಆಘಾತಕಾರಿ ಸುದ್ದಿಯೊಂದು ನನ್ನ ಕಿವಿಗೆ ಅಪ್ಪಳಿಸಿತು!

ಅದು ನಮ್ಮಣ್ಣನ ಮಗನ ಸಾವು!


ಯಾವುದೋ ವಿಷಕಾರಿ ಹಾವು ಕಚ್ಚಿ ಸತ್ತಿದ್ದಾನೆ ಎಂದು ತಿಳಿದು ನನ್ನ ಹೃದಯ ನೋವಿನ ಮಡುವಿನಲ್ಲಿ ವಿಲವಿಲನೇ ಒದ್ದಾಡಿತು. ದಿಕ್ಕು ತೋಚದೇ ಒಂಟಿಯಾಗಿ ರೂಮಿನಲ್ಲಿ ಅಳುತ್ತಾ ಕುಳಿತೆ! ನಾನು ಮಂಡ್ಯದಿಂದ ಎಷ್ಟೇ ವೇಗವಾಗಿ ಹೋದರೂ ಬಳ್ಳಾರಿಗೆ ತಲುಪಲು 8 ಗಂಟೆಗಳು ಬೇಕು ಎಂದು ತಿಳಿದರೂ ಬೆಳಗ್ಗೆ 8.30ಕ್ಕೆ ಹೊರಟುನಿಂತೆ. ಆದರೆ ಮಧ್ಯಾಹ್ನ 2.00 ಗಂಟೆಗೆ ನಾನು ಹಿರಿಯೂರನ್ನು ಮುಟ್ಟಿದಾಗ ಶವಸಂಸ್ಕಾರ ಕಾರ್ಯ ಮುಗಿದ ಸುದ್ದಿ ಕೇಳಿ ಮತ್ತಷ್ಟು ದುಃಖ ನನ್ನನ್ನು ಆವರಿಸಿತು.

ಅತ್ತ ಹೋರಾಟದ ಕೊನೆಯ ಕ್ಷಣವನ್ನು ನೋಡದೆ, ಇತ್ತ ನನ್ನ ಪ್ರೀತಿಯ ಶಂಕರನ ಕೊನೆಯ ನೋಟವೂ ಸಿಗದೆ ನರಳಾಡಿದೆ. ಎರಡು ಅವಕಾಶಗಳಿಂದ ವಂಚಿತನಾದ ನಾನು 'ನತದೃಷ್ಟವಂತ'ನೇ ಸರಿ.


ಏನೇ ಆಗಲಿ ನಮ್ಮ ಶಂಕರನ ಸಾವು ನಮ್ಮ ಕುಟುಂಬಕ್ಕೆ ತುಂಬಲಾರದ ನಷ್ಟ. ಅವನು ಇಲ್ಲದ ನಮ್ಮ ಮನೆಯನ್ನು ಊಹಿಸಲೂ ಅಸಾಧ್ಯ. ಮಿಸ್ ಯೂ ಶಂಕ್ರ..

- ಎಂ. ಹನುಮಂತ, ಎಮ್ಮಿಗನೂರು, ಬಳ್ಳಾರಿ

ಮುಂಡಗೋಡ: ಸ್ಟೇಟ್‌ಬ್ಯಾಂಕ್-ನವರೋಮಾದ ಸುಳ್ಳು ಸಾಲದ ಶೂಲದಲ್ಲಿ ರೈತರು!



ಆರ್.ವಿ. ದೇಶಪಾಂಡೆ



ಶಿವರಾಂ ಹೆಬ್ಬಾರ್



ವಂಚನೆ ಕೇಂದ್ರವಾದ ಎಸ್‌ಬಿಐ (ಮಳಗಿ ಬ್ರಾಂಚ್)


ಉತ್ತರ ಕನ್ನಡದ ಮುಂಡಗೋಡ ತಾಲ್ಲೂಕು ಬರ-ಬಡತನದ ಅರೆ ಬಯಲು ಸೀಮೆಯಂಥ ಪ್ರದೇಶ. ಇಲ್ಲಿ ಒಕ್ಕಲುತನ ಅವಲಂಬಿಸಿ ಬದುಕು ಕಟ್ಟಿಕೊಂಡ ಅಮಾಯಕ ರೈತರೇ ಅಪಾರ. ಹೇಗೆ ನೋಡಿದರೂ ಇದು ಅಪ್ಪಟ ರೈತರ ಏರಿಯಾ. ರಾಜಕಾರಣದ ಉದ್ದಕ್ಕೂ ಒಂದಿಲ್ಲೊಂದು ಆಯಕಟ್ಟಿನ ಸ್ಥಾನಕ್ಕೇರಿದ ಡಾನ್ ದೇಶಪಾಂಡೆಯನ್ನು ಎರಡೂವರೆ ದಶಕಗಳ ಕಾಲ ಪೊರೆದ ಮುಂಡಗೋಡು ಮಾತ್ರ ಇವತ್ತಿಗೂ ಉದ್ಧಾರವಾಗಲೇ ಇಲ್ಲ! ದೊಡ್ಡದೊಂದು ಹಳ್ಳಿಯಂತೆ ಕಾಣಿಸುವ ಮುಂಡಗೋಡಿನ ಹಳ್ಳಿ-ಹಳ್ಳಿಯಲ್ಲಿ ತುಂಬಿರುವ ಮುಗ್ಧ ರೈತರನ್ನು ಆಷ್ಟೂ ಪಕ್ಷದ ದಗಾಕೋರ ಪುಢಾರಿಗಳು ಓಟ್‌ಬ್ಯಾಂಕಾಗಿ ಪರಿಗಣಿಸಿದರೇ ಹೊರತು ಅದರ ದಾರಿದ್ರ್ಯ, ಅಜ್ಞಾನ ನೀಗಲು ನಿಯತ್ತಿನ ಪ್ರಯತ್ನ ಮಾಡಲೇ ಇಲ್ಲ!

ಬತ್ತ ಕಬ್ಬು ಹತ್ತಿ ತಂಬಾಕು... ಬೆಳೆದ ಮುಂಡಗೋಡಿನ ರೈತರು ಆರ್ಥಿಕ-ಸಾಮಾಜಿಕ-ಶೈಕ್ಷಣಿಕವಾಗಿ ತೀರ ಹಿಂದುಳಿದಿದ್ದಾರೆ. ಈ ರೈತರ ಮುಗ್ಧತೆ, ಅಸಹಾಯಕತೆ, ಅಜ್ಞಾನ ಬಳಸಿಕೊಂಡ ದಲ್ಲಾಳಿಗಳು ಭರ್ಜರಿಯಾಗಿ ಬೆಳೆದಿದ್ದಾರೆ. ಕಳಪೆ ಬೀಜ, ಖೋಟಾ ಕ್ರಿಮಿನಾಶಕ, ಸುಳ್ಳು ಬೆಳೆ ವಿಮೆಯ ಏಜೆಂಟರು ತಾಲ್ಲೂಕಿನ ಉದ್ದಗಲಕ್ಕೆ ಓಡಾಡಿಕೊಂಡಿದ್ದಾರೆ. ಈ ಚೋರ ಸಂತತಿ ಜತೆ ಸರ್ಕಾರಿ ಅಧಿಕಾರಿಗಳು ಮತ್ತು ಬ್ಯಾಂಕ್ ಭೂಪರು ರಹಸ್ಯ ಒಪ್ಪಂದ ಮಾಡಿಕೊಂಡು ಸಬಲರಾಗುತ್ತಿದ್ದಾರೆ. ತಂಬಾಕು ಮತ್ತು ಸುಗಂಧ ದ್ರವ್ಯದಲ್ಲಿ ಬಳಸುವ "ಪಚೋಲಿ' ಬೆಳೆಯ ಹೆಸರಲ್ಲಿ ಮುಂಡಗೋಡಿನ ರೈತಾಪಿ ವರ್ಗಕ್ಕಾಗಿರುವ ವಂಚನೆ-ಮೋಸ ಒಂದೆರಡು ನಮೂನೆಯಲ್ಲ!

2006-07 ರಲ್ಲಿ ಮಳಗಿ ಸೀಮೆಯ ಹುಲಿಹೊಂಡ, ಉಗ್ಗಿನಕೇರಿ, ಸನವಳ್ಳಿ, ನಂದಿಗಟ್ಟ.... ಮುಂತಾದ ಪಚೋಲಿ ಪ್ರಚಾರ ಜೋರಾಗಿ ನಡೆದಿತ್ತು. ಆಗ ಇಲ್ಲಿ ದೇಶಪಾಂಡೆ ಸಾಹೇಬರೇ ಎಮ್ಮೆಲ್ಲೆ. ಪಚೋಲಿ ಬೆಳೆದರೆ ಲಕ್ಷ, ಲಕ್ಷ ಆದಾಯ ಗಳಿಸಬಹುದೆಂದು ರೈತರಿಗೆ ನಂಬಿಸುವ ತಂಡವೊಂದು ಆಗ ಹಳ್ಳಳ್ಳಿಯಲ್ಲಿ ಕಾರ್ಯಾಚರಣೆ ಮಾಡಿತ್ತು. ಸಾಲ ಕೊಡಿಸುತ್ತೇವೆ, ಸರ್ಕಾರದಿಂದ ನೀರಾವರಿ ಪೈಪ್‌ಗಳು, ಪಂಪ್‌ಸೆಟ್ ಕೊಡಿಸುತ್ತೇವೆ ಎಂದು ಈ ಪಂಗನಾಮದ ಪಟಾಲಮ್ ಅಮಾಯಕ ರೈತರನ್ನು ನಂಬಿಸಿತ್ತು. "ನವರೋಮಾ ಪಚೋಲಿ" ಎಂಬ ಬೋಗಸ್ ಕಂಪನಿ ಪಚೋಲಿ ಬೆಳೆದರೆ ಒಂದೇ ಹಂಗಾಮಿಗೆ ಭರ್ಜರಿ ಲಾಭ ಮಾಡಬಹುದೆಂಬ ಆಸೆ-ಕನಸು ರೈತರಲ್ಲಿ ಮೂಡಿಸಿತ್ತು.

ಈ "ನವರೋಮಾ ಪಚೋಲಿ" ಎಂಬ ಪಾಪಿ ಕಂಪನಿ ಎಲ್ಲಿದೆ ಎಂಬುದು ಯಾವ ರೈತರಿಗೂ ಗೊತ್ತಿಲ್ಲ, ಆದರೆ ಸದ್ರಿ ದೋಖಾ ಕಂಪನಿ ಹೆಸರು ಹೇಳಿಕೊಂಡು ಬಂದವರು ಮಾತ್ರ ಪಕ್ಕದ ಶಿರಸಿಯ ಗಣಪತಿ ರಾಯ್ಕರ್ ಮತ್ತು ಪಾಂಡುರಂಗ ದೈವಜ್ಞ ಎಂಬಿಬ್ಬರು ಹಲಾಲು ಟೋಪಿಗಳು. ಇವರೊಂದಿಗೆ ಅಂದಿನ ಮಳಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ)ದ ಮ್ಯಾನೇಜರ್ ಜೈಗೋಪಾಲ್ ಸೇರಿಕೊಂಡಿದ್ದ! ವಂಚನೆಯ ಕುಶಲತೆ ಕರಗತ ಮಾಡಿಕೊಂಡಿರುವ ಈ ಜೈಗೋಪಾಲ್ ಪಚೋಲಿ ಬೆಳೆಯಲು ಬಣ್ಣ-ಬಣ್ಣದ ಮಾತಾಡಿ ರೈತರನ್ನು ಆಕರ್ಷಿಸಿದ್ದಾನೆ.

ಆರ್ಥಿಕವಾಗಿ ಸಬಲರಾಗುವ ಆಸೆಯಿಂದ ಬರೋಬ್ಬರಿ 31 ರೈತರು ಈ ಮೋಸಗಾರರ ಬಲೆಯಲ್ಲಿ ಬಿದ್ದಿದ್ದಾರೆ. ರೈತರನ್ನು ದಾರಿ ತಪ್ಪಿಸಲು ಕೆಲವು ಸಾವಿರ ರೂ. ಈ ಹರಾಮಿತ್ರಯರು ಬಂಡವಾಳವಾಗಿ ಬಳಸಿದ್ದಾರೆ. ಒಂದಿಬ್ಬರು ರೈತರ ಹೊಲದಲ್ಲಿ ಪಂಪ್‌ಸೆಟ್, ನೀರಾವರಿ ಪೈಪ್ ಅಳವಡಿಸಿದ್ದಾರೆ. ಇದನ್ನು ಕಂಡ ರೈತರು ಪಚೋಲಿ ಬೆಳೆಯಲು ಮುಂದಾಗಿದ್ದಾರೆ. ಈ ಗ್ಯಾಂಗಲ್ಲಿ ಎಸ್‌ಬಿಐ ಶಾಖೆಯ ಮ್ಯಾನೇಜರ್ ಮಾಮನೇ ಖುದ್ದು ಇದ್ದುದರಿಂದ ರೈತರಲ್ಲಿ ವಿಶ್ವಾಸ ಬಂದಿದೆ. ಮನೆ-ಮನೆಗೆ ಹೋಗಿ ಪಚೋಲಿ ವೈಭವ ವಿವರಿಸಿದ ಜೈಗೋಪಾಲ, ದೈವಜ್ಞ ಮತ್ತು ರಾಯ್ಕರ್ ಉಪಾಯವಾಗಿ ರೈತರ ಹೊಲ-ಗದ್ದೆಗಳ ಆರ್‌ಟಿಸಿ (ರೆಕಾರ್ಡ್ಸ್ ಆಫ್ ರೈಟ್) ಪಡೆದುಕೊಂಡಿದ್ದಾರೆ.



ಎಸ್ಪಿ ಆರ್. ದಿಲೀಪ್

ರೈತರಿಗೆ "ನೀವೇನೂ ಓಡಾಡೋದು ಬೇಡ, ಆರ್‌ಟಿಸಿ ಕೊಡಿ... ಸಾಲದ ಕಾಗದಪತ್ರಕ್ಕೆ ಸಹಿ ಮಾಡಿದ್ರೆ ಸಾಕು... ಸಾಲ ನಾವೇ ತುಂಬುತ್ತೇವೆ... ಒಂದೇ ಪೀಕಿಗೆ ಸಾಲವೆಲ್ಲ ಚುಕ್ತಾ ಆಗುತ್ತದೆ.... ನೀವು ಲಕ್ಷಾಧೀಶರಾಗ್ತೀರಿ..." ಎಂದೆಲ್ಲ ಭೋಂಗು ಬಿಟ್ಟು ಬಡ ರೈತರ ಸಹಿ ಪಡೆದಿದ್ದಾರೆ. 31 ರೈತರ ಹೆಸರಲ್ಲಿ 2 ಲಕ್ಷದಿಂದ 8 ಲಕ್ಷದ ವರೆಗೆ "ನವರೋಮಾ ಸ್ಟೇಟ್ ಬ್ಯಾಂಕ್" ಗ್ಯಾಂಗ್ ಸಾಲ ಮಾಡಿದೆ. ಇದರಲ್ಲಿ ಕೆಲವು ರೈತರ ಮನೆಗೆ ಹೋಗಿ 25, 30, 45, 50 ಸಾವಿರ ಪಂಚಕಜ್ಜಾಯದಂತೆ ಹಂಚಿದ್ದಾರೆ. ಉಳಿದ ಹಣದಲ್ಲಿ ನಾವೇ ಪಚೋಲಿ ಬೆಳೆ ತೆಗೆದು ಸಾಲ ತೀರಿಸಿ ಲಾಭ ಕೊಡುತ್ತೇವೆ ಎಂದಿದ್ದಾರೆ. ಆದರೆ ಪಚೋಲಿ ಮಾತ್ರ ಯಾರ ಹೊಲದಲ್ಲಿ ಬೆಳೆಯಲೇ ಇಲ್ಲ.

ರೈತರ ಹೆಸರಲ್ಲಿ ಜೈಗೋಪಾಲ, ರಾಯ್ಕರ್ ಮತ್ತು ದೈವಜ್ಞ ತೆಗೆದ ಒಟ್ಟು ಸಾಲ ಎಷ್ಟು ಗೊತ್ತಾ? ಬರೋಬ್ಬರಿ ಎರಡು ಕೋಟಿ ನಲವತ್ತು ನಾಲ್ಕು ಲಕ್ಷ ರೂಪಾಯಿಗಳು ಮಾತ್ರ!! ಕಳ್ಳ ಮ್ಯಾನೇಜರ್ ಜೈಗೋಪಾಲ ತಾನು ಬಚಾವಾಗಲು ಎಲ್ಲ ರೈತರ ಆರ್‌ಟಿಸಿ ಮೇಲೆ ಭೋಜಾ ಹಾಕಿದ್ದಾನೆ. ಹೊಲ ಅಡವಿಟ್ಟು ಸಾಲ ತೆಗೆದಂತೆ ದಾಖಲೆ ಸೃಷ್ಟಿಸಿದ್ದಾನೆ. ಹೀಗೆ ಕೃಷಿ ಜಮೀನಿನ ಮೇಲೆ ಲಕ್ಷಾಂತರ ರೂ. ಸಾಲ ಕೊಡಲು ರಾಷ್ಟ್ರೀಕೃತ ಬ್ಯಾಂಕಾದ ಎಸ್‌ಬಿಐಗೆ ಅನುಮತಿಯೇ ಇಲ್ಲ, ಹತ್ತು ರೂ. ಸಾಲ ಕೊಡುವಾಗ ನೂರಾರು ದಾಖಲೆ ತರುವಂತೆ ಸಾವಿರಾರು ಬಾರಿ ಬ್ಯಾಂಕಿಗೆ ಎಡತಾಕಿಸುವ ಬ್ಯಾಂಕರ್ ಭೂಪರು ಇಷ್ಟು ಸುಲಭದಲ್ಲಿ ಲಕ್ಷಾಂತರ ರೂ. 'ಸಾಲಮೇಳ' ಮಾಡಿದ್ದಾರೆ. ಅಂದರೆ ವಂಚಕರಾದ ದೈವಜ್ಞ ಹಾಗು ರಾಯ್ಕರ್ ಎಸ್‌ಬಿಐ ಮ್ಯಾನೇಜರ್ ಸಹಕಾರದಿಂದ ಕೋಟ್ಯಾಂತರ ರೂ. ಬಾಚಿದ್ದಾರೆ. ಮ್ಯಾನೇಜರ್ ಜೈಗೋಪಾಲ ದೊಡ್ಡ ಗಂಟು ಮಾಡಿಕೊಂಡು ಬೆಂಗಳೂರು ಕಡೆ ವರ್ಗಾಯಿಸಿಕೊಂಡು ಹೋಗಿದ್ದಾನೆ.

ದಗಲುಬಾಜಿ ಜೈಗೋಪಾಲ್ ಮ್ಯಾನೇಜರನಾಗಿರುವ ಕಾಲದಲ್ಲಿ ಎಸ್‌ಬಿಐನ-ಮಳಗಿ ಶಾಖೆಯಲ್ಲಿ ಅನೇಕ ಅನಾಚಾರ ಆಗಿಹೋಗಿದೆ. ಕೃಷಿ ಭೂಮಿ ಅಡಮಾನಕ್ಕೆ ಕಾನೂನುಬಾಹಿರವಾಗಿ ಲಕ್ಷಾಂತರ ಸಾಲ ಕೊಟ್ಟಂತೆಯೇ ಅರಣ್ಯ ಅತಿಕ್ರಮಣದಾರರಿಗೂ ಯಥೇಚ್ಛವಾಗಿ ಈತ ಸಾಲ ಸೌಲಭ್ಯ ಭಾಗ್ಯ ಕರುಣಿಸಿದ್ದಾನೆ. ಇದರಲ್ಲಿ ದೊಡ್ಡ ಕಮಿಷನ್ ಜೈಗೋಪಾಲನೇ ಗುಳುಂ ಮಾಡಿದ್ದಾನೆ. ರೈತರಿಗಿನ್ನೂ ಪಟ್ಟಾ ಸಿಗದ ಭೂಮಿಗೆ ಈತ ತಂಬಾಕು ಬೆಳೆಗೆಂದು ಸಾಲ ಮಂಜೂರು ಮಾಡಿದ್ದಾನೆ. ಹೀಗೆ ಈತ 2000 ರೈತರಿಗಿಂತಲೂ ಹೆಚ್ಚು ಮಂದಿಗೆ ಸಾಲ ಮಂಜೂರಿ ಮಾಡಿ ಕೋಟ್ಯಾಧಿಪತಿಯಾಗಿದ್ದಾನೆ. ಬ್ಯಾಂಕ್ ದಿವಾಳಿ ಮಾಡಿದ್ದಾನೆ. ಅಮಾಯಕ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾನೆ. ಐಟಿಸಿ ಕಂಪನಿ ಜೊತೆ ಮಳಗಿ ಎಸ್‌ಬಿಐ ಮಾಡಿಕೊಂಡಿದ್ದ ರೈತ ಸಾಲ ಯೋಜನೆ ಒಪ್ಪಂದ ಜೈಗೋಪಾಲ್ ಮತ್ತು ಮಧ್ಯವರ್ತಿಗಳನ್ನು ಧನಾಢ್ಯರಾಗಿಸಿದರೆ, ರೈತರಿಗೆ ತಿರುಪತಿ ನಾಮ ತಿಕ್ಕಿದೆ.


ಪಚೋಲಿ ಬೆಳೆ ಬೆಳೆಯದಿದ್ದರೂ ರೈತರ ಜಮೀನು ಅಡಮಾನದಲ್ಲಾಗಿದ್ದ ಸಾಲದ ಬಡ್ಡಿ ದೊಡ್ಡದ... 2007-8 ರಲ್ಲಿ ಸಾಲ ತುಂಬುವಂತೆ ಎಸ್‌ಬಿಐ ರ... ನೋಟಿಸು ಕೊಟ್ಟಿದೆ. ರೈತರು ಕಂಗಾಲಾಗಿದ್ದಾರೆ. ಲಕ್ಷ... ಸಾಲ ಮತ್ತು ಬಡ್ಡಿ ತಮ್ಮ ಭೂಮಿಯ ಮೇಲಿರು... ಕೇಳಿ ದಿಕ್ಕೆಟ್ಟಿದ್ದಾರೆ. ತಕ್ಷಣ ಬ್ಯಾಂಕಿಗೆ ಹೋಗಿ ಗೋ... ದ್ದಾರೆ. ಆಗ ಜೈಗೋಪಾಲನೇ ಮ್ಯಾನೇಜರ್ ಆಗಿ... ರೈತರಿಗೆ ರಮಿಸಿ ಕಳಿಸಿದ್ದಾನೆ. "ಸಾಲ ಕೊಟ್ಟಿರಿ... ನಿಮಗಲ್ಲ... ನವರೋಮಾ ಕಂಪನಿಗೆ... ನೋಟಿಸ್ ಸ... ನಿಮ್ಮ ಹೆಸರಿಗೆ ಕಳಿಸಿದ್ದೇವೆ... ಸಾಲ ನವರೋಮಾದ... ವಸೂಲು ಮಾಡ್ತೇವೆ....." ಎಂದು ಸಮಾಧಾನ ಮಾ... ದ್ದಾನೆ. ಆದರೆ ಜೈಗೋಪಾಲ ಮಳಗಿಯಿಂದ ಫೇ... ನಂತರ ಬಂದ ಮ್ಯಾನೇಜರ್‌ಗಳು ಸಾಲ ರೈತರೇ ತು... ಹೊಣೆಗಾರರೆಂದು ಕಾನೂನು ಹೇಳಿದ್ದಾರೆ.


ಬಡ ರೈತರಿಂದ ಲಕ್ಷಗಟ್ಟಲೆ ಸಾಲ ತುಂಬಲು... ಸಾಧ್ಯ? ಅದೂ ಅವರು ಮಾಡದ ಸಾಲ ತುಂಬುವುದ... ಹೇಗೆ? ಕೇಸು ಸಹಕಾರಿ ಇಲಾಖೆಯ ಉಪನಿ... ನ್ಯಾಯಾಲಯಕ್ಕೆ ಹೋಯಿತು. ಒನ್ ಟೈಮ್ ಸೆಟ್ಲಮೆ... ಎಸ್‌ಬಿಐ ಆಹ್ವಾನಿಸಿತು. ಹಣವಿಲ್ಲದ ರೈತರಿಂದ... ತುಂಬಲಾಗಲಿಲ್ಲ. ಆಗ ಸಹಕಾರಿ ಉಪನಿಬಂ... ಸಾಲ-ಬಡ್ಡಿ ಎರಡೂ ತುಂಬಲು ರೈತರಿಗೆ ನೋ... ಜಾರಿ ಮಾಡಿದರು. ರೈತರೀಗ ಮಾಡದ ತ... ನೋವು-ನಷ್ಟ ಅನುಭವಿಸುತ್ತಿದ್ದಾರೆ. ಹೊಲ ಹರಾ... ಆತಂಕದಲ್ಲಿ ತತ್ತರಿಸುತ್ತಿದ್ದಾರೆ.


ದಿಕ್ಕು ಕಾಣದಂತಾಗಿರುವ ರೈತರೀಗ ಎಸ್... ಹಿಂದಿನ ಮ್ಯಾನೇಜರ್ ಜೈಗೋಪಾಲ್, ನವರೋ... ನೀಚರಾದ ದೈವಜ್ಞ ಹಾಗು ರಾಯ್ಕರ್ ಮೇಲೆ ವಂ... ಕೇಸು ದಾಖಲಿಸಿದ್ದಾರೆ. ಪೊಲೀಸರು ತನಿಖೆ ಕೈಗೊಂ... ಅಂತಿಮವಾಗಿ ರೈತರಿಗೆ ಈ ಕೇಸಲ್ಲಿ ಅನ್ಯಾಯವಾ... ನೋಡಿಕೊಳ್ಳುವ ಹೊಣೆಯಿರುವುದು ಸ್ಥಳೀಯ... ಶಿವರಾಮ ಹೆಬ್ಬಾರ್ ಮೇಲೆ. ಕೆಡಿಸಿಸಿ ಬ... ರಾಜಕೀಯದಲ್ಲಿ, ಜಿಲ್ಲಾಧಿಕಾರಿ ವರ್ಗಾವಣೆ ಹಿಕಮ... ಮಂತ್ರಿ ದೇಶಪಾಂಡೆ ಜೊತೆಗಿನ ಜಂಗೀಕುಸ್ತಿಯಲ್ಲಿ ಹ... ಮಾಡಿದ ಹೋರಾಟದ ಕಾಲುಭಾಗದ ತಾಕತ್ತನ್ನು... ಹೆಬ್ಬಾರ್ ಈ "ಸುಳ್ಳು ಸಾಲ"ದ ಕೇಸಲ್ಲಿ ತೋ... ದರ್ದು ಇದೆ. ತಾನು ಅನ್ನದಾತರ ಹಿತರಕ್ಷಕನಂತೆ... ಕೊಡುವ ಹೆಬ್ಬಾರ್ ಅಸಲಿಯತ್ತು ಸದ್ರಿ ಪ... ಪ್ರಕರಣದಲ್ಲಿ ಬಯಲಾಗುವುದಂತೂ ಖರೆ. ದೇಶ... ಈ ರೈತರ ಋಣ ತೀರಿಸಲು ಯೋಚಿಸುವರಾ?

ಪಚೋಲಿ ಗಂಡಾಂತರದಿಂದ ನಿಷ್ಪಾಪಿ ರೈ... ಬಚಾಯಿಸಿ ನವರೋಮಾ ಕಂಪನಿ ಖದೀಮರಿಗೆ, ... ಎಸ್‌ಬಿಐ ಮ್ಯಾನೇಜರ್‌ಗೆ ಕೊಳ ತೊಡಿಸುವ ... ಎಸ್ಪಿ ಆರ್. ದಿಲೀಪ್ ಸಾಹೇಬರಿಗೆ ಇದೆಯಾ?

■ ನ...








ವಂಚಕರ ಮೇಲೆ ಆಗಿರುವ ಎಫ್‌ಐಆರ್

ದುರ್ಗದ 'ಗೂಳಿ' ಈಗ ಕೇಶವನ 'ಹಟ್ಟಿ'ಯಲ್ಲಿ



ಚಿತ್ರದುರ್ಗದ ದುರಂತ ರಾಜಕಾರಣದ ಪ್ರತಿನಿಧಿ ಯಾರು ಎಂದು ಬೊಟ್ಟು ಮಾಡಿ ತೋರಿಸುವುದಾದರೆ, ಬೇರೆ ಬೇಡ, ಅದು ಮಾಜಿ ಮಂತ್ರಿ ಗೂಳಿಹಟ್ಟಿ ಶೇಖರನೇ ಆಗಿರುತ್ತಾನೆ. ದುರ್ಗದ ರಾಜಕಾರಣವನ್ನು ದುರಂತ ಅಂತ ಕರೆಯುವುದಕ್ಕೂ ಒಂದು ಕಾರಣವಿದೆ. ಅದೇನೆಂದರೆ, ಅತ್ಯಾ ಮೀಸಲು ಕ್ಷೇತ್ರವಾದ ಚಿತ್ರದುರ್ಗ (ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ನಾಲ್ಕು ಮೀಸಲು ಕ್ಷೇತ್ರಗಳು ಮತ್ತು ಸ್ವತಃ ಚಿತ್ರದುರ್ಗ ಲೋಕಸಭಾ ಕ್ಷೇತ್ರವೇ ಒಂದು ಮೀಸಲು ಕ್ಷೇತ್ರ), ಇಲ್ಲಿನ ಸ್ಥಳೀಯ ತಳಸಮುದಾಯದ ನಾಯಕರನ್ನು ಹುಟ್ಟುಹಾಕಿದ್ದಕ್ಕಿಂತ, ಹೊರಗೆಲ್ಲಿಂದಲೋ ಬಂದು ನಾಟಿ ಮಾಡಲ್ಪಟ್ಟ ನಾಯಕರಿಂದ ಆಳಿಸಿಕೊಂಡಿದ್ದೇ ಹೆಚ್ಚು. ಹೀಗೆ ಬಂದವರಿಗೆ ತಮ್ಮ ರಾಜಕೀಯ ಏಳುಬೀಳಿನ ಮೇಲೆ ಗಮನವಿರುವುದೇ ವಿನಃ ದುರ್ಗದ ಅಂತರಾಳದ ಸಮಸ್ಯೆಗಳು ಅವರಿಗೆ ಬೇಕಾಗುವುದೇ ಇಲ್ಲ. ಹಾಗಾಗಿಯೇ ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ತುಮಕೂರು ಸಹದ ತಕ್ಕಮಟ್ಟಿಗೆ ಅಭಿವೃದ್ಧಿ ಕಂಡ ಜಿಲ್ಲೆಗಳಿಂದ ಸುತ್ತುವರೆದಿದ್ದರೂ ಇಲ್ಲಿ ಮಾತ್ರ ಹೈದರಾಬಾದ್-ಕರ್ನಾಟಕದ ದರಿದ್ರಕ್ಕಿಂತ ಕಮ್ಮಿಯೇನೂ ಇಲ್ಲ. ಮೂಲ ಸೌಕರ್ಯಗಳಿಂದ ಹಿಡಿದು ಶಿಕ್ಷಣ, ಆರೋಗ್ಯ ಎಲ್ಲದರಲ್ಲೂ ಚಿತ್ರದುರ್ಗದ ಪ್ರಗತಿ ಏದುಸಿರು ಬಿಡುವಂತದ್ದು.

ಅಂತಹ ದುರ್ಗದ ರಾಜಕಾರಣವನ್ನು ಮತ್ತಷ್ಟು ನರಕೀಯಗೊಳಿಸಲು ಗೂಳಿಹಟ್ಟಿ ಶೇಖರನೆಂಬ ಐನಾತಿ ಆಸಾಮಿ ಸಜ್ಜಾಗಿ ಕೂತಿದ್ದಾನೆ. ಅಸಲಿಗೆ 2008ರ ವಿಧಾನಸಭಾ ಚುನಾವಣೆಯಲ್ಲಿ ಅಚಾನಕ್ಕಾಗಿ ಹೊಸದುರ್ಗ ಮತಕ್ಷೇತ್ರದಿಂದ ಗೆದ್ದು ಪಕ್ಷೇತರ ಶಾಸಕನಾದ ಗೂಳಿಹಟ್ಟಿ, ಯಡ್ಡಿಯ ಮಾರ್ಜಿನ್ ಸರ್ಕಾರದಲ್ಲಿ ಮಂತ್ರಿಯಾಗಿ ಭರ್ಜರಿ ಬಾಬಾವು ಮಾಡಿಕೊಂಡಿದ್ದ. ಅದಕ್ಕಿಂತಲೂ ಕರ್ನಾಟಕ ರಾಜಕಾರಣದ ಇತಿಹಾಸದಲ್ಲಿ ಅಸಹ್ಯವಾಗಿ ದಾಖಲಾದದ್ದು ಗೂಳಿಹಟ್ಟಿ ಅಧಿವೇಶನದಲ್ಲಿ ಅಂಗಿ ಹರಕೊಂಡು ಹಾರಚಾಡಿದ್ದು. ರಾಜಕೀಯ ಪಕ್ಷವೊಂದರ ಕಟ್ಟಕಡೆಯ ಕಾರ್ಯಕರ್ತನಿಗೆ ಇರಬೇಕಾದ ಕನಿಷ್ಠ ಕಾಮನ್‌ಸೆನ್ಸ್ ಕೂಡಾ ಇಲ್ಲದ ಗೂಳಿಹಟ್ಟಿಯ ಯೋಗ್ಯತೆ ಅರ್ಥಮಾಡಿಕೊಂಡ ಹೊಸದುರ್ಗದ ಜನ 2013ರ ಚುನಾವಣೆಯಲ್ಲಿ ಮುಲಾಜಿಲ್ಲದೆ ಆತನನ್ನು ಮನೆಗೆ ಗಡುಮಿದ್ದರು. ಬಿಜೆಪಿಗಳ 'ಆಪರೇಷನ್ ಕಮಲ'ದಲ್ಲಿ ಕೈಯಿಟ್ಟು ನೆಂಚಿಕೊಂಡಿದ್ದ ಅಷ್ಟೋ ಇಷ್ಟೋ ಕಾಸನ್ನೂ ಕಳೆದುಕೊಂಡು ಬರಿಗೈ ದಾಸನಾದ ಗೂಳಿಹಟ್ಟಿ, ಅಧಿಕಾರವೂ ಇಲ್ಲದೆ ರಾಜಕೀಯ ನಿರುದ್ಯೋಗಿಯಾದ ಮೇಲೆ ಇಡೀ ಚಿತ್ರದುರ್ಗದ ದುಸ್ಥಿತಿಯನ್ನೇ ಹಾಳು ಮಾಡುವ ಮೆಗಾ ಪ್ರಾಜೆಕ್ಟ್ ಒಂದನ್ನು ಮುಂದಿರಿಸಿಕೊಂಡು ಕೂತಿದ್ದಾನೆ.

ಹಲವು ಬಹುಪಾಲು ರಾಜಕಾರಣಿಗಳಂತೆ ಗೂಳಿಹಟ್ಟಿಗೂ ರಾಜಕೀಯ ಎಂದರೆ ಕಾಸು ಮಾಡುವ ದಂಧೆ ಅಷ್ಟೆ. ಆದರೆ, ಯಾವಾಗ ಅಧಿಕಾರ ತನ್ನಿಂದಲೇ ದೂರ ಸರಿಯಿತೋ, ಆಗ ದಂಧೆಯ ಮತ್ತೊಂದು ಮಗ್ಗುಲಿಗೆ ಹೊರಳಿದ ಗೂಳಿಹಟ್ಟಿ, ಕಾಸಿರುವ ಕುಳಗಳನ್ನು ಹಿಡಿದು ತಂದು ಅವರನ್ನು ಚಿತ್ರದುರ್ಗದಿಂದ ಎಂ.ಎಲ್.ಸಿ ಮಾಡ್ತೀನಿ ಅಂತ ಖಜಾನೆ ತುಂಬಿಕೊಳ್ಳುವ ಖಯಾಲಿ ಆರಂಭಿಸಿದ್ದಾನೆ. ಅವರಿಂದ ಕಾಸು ವಸೂಲಿ ಮಾಡಿದ ಹಣದಲ್ಲಿ ಒಂದಷ್ಟು ಪುಡಿಗಾಸನ್ನು ತಳಮಟ್ಟದ ಜನಪ್ರತಿನಿಧಿಗಳಿಗೆ ತಿನ್ನಿಸಿ ಗಿರಾಕಿಗಳನ್ನು ಮಾಡಿಕೊಳ್ಳುವುದು ಅವನ ಸದ್ಯದ ಹುನ್ನಾರವಾಗಿದೆ. ಕಳೆದ ಬಾರಿಯಷ್ಟೇ ಇಂತಹ ಹೂಡಿಕೆಗೆ ಕೈಹಾಕಿದ್ದ ಗೂಳಿಹಟ್ಟಿ, ಬೆಂಗಳೂರಿನ ಬಿಲ್ಡರ್ ರಘು ಆಚಾರ್ ಎಂಬ ಕೊಳಕ್ಕರನ್ನು ಕರೆತಂದು ಅವನನ್ನು ಗೆಲ್ಲಿಸುವಲ್ಲಿ ಯಶಸ್ವಿಯಾಗಿದ್ದ. ಈಗ ಕೋಲಾರದ ಕೇಶವ ಎಂಬ ಹೊಸ ಮಿಕವನ್ನು ಇದೇ ಆಸೆ ತೋರಿಸಿ ಅಣಿ ಮಾಡುತ್ತಿದ್ದಾನೆ ಎನ್ನುವ ವರ್ತಮಾನಗಳು ಕೇಳಿಬರುತ್ತಿವೆ. ಹಾಗಾಗಿಯೇ ಇಲ್ಲಿನ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದಾಗಿ ಚಿತ್ರದುರ್ಗ ಅಭಿವೃದ್ಧಿ ಇಲ್ಲದೆ ಸೊರಗಿಹೋಗಿದೆ. ಅಂತದ್ದರಲ್ಲಿ ಗೂಳಿಹಟ್ಟಿ ಶೇಖರ ಹುಟ್ಟುಹಾಕಿದ ಲಾಭದಾಯಕ ಹೊಸ ಪರಂಪರೆಯೇನಾದರೂ ಕ್ಲಿಕ್ ಆದರೆ ಇಲ್ಲಿನ ಪುಡಿ ರಾಜಕಾರಣಿಗಳೂ ದುರ್ಗವನ್ನು ಮಾರಿಕೊಳ್ಳುವ ಬಿಸಿನೆಸ್‌ಗೆ ಇಳಿದರೆ ಅಚ್ಚರಿಯಿಲ್ಲ. ಅದರ ನೇರ ಪರಿಣಾಮ ಅನುಭವಿಸೋದು, ಬಡಪಾಯಿ ದುರ್ಗದ ಜನ!

ಗೂಳಿಯ 'ಎಂಪಿ' ಕನಸು

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತರೂ ಗೂಳಿಹಟ್ಟಿ ಶೇಖರ ಆರ್ಥಿಕ ದಿವಾಳಿತನವನ್ನೇನೂ ತಲುಪಿಲ್ಲ. ವೈಯಕ್ತಿಕ ಲೆಕ್ಕಾಚಾರದಲ್ಲಿ ಸದೃಢವಾಗೇ ಇದ್ದಾನೆ. ಆದರೆ ರಾಜಕಾರಣಕ್ಕಾಗಿ ಚೆಲ್ಲಾಡಲು ಬೇಕಾದಷ್ಟು 'ಬಿಟ್ಟಿ' ಕಾಂಚಾಣ ಇಲ್ಲವಷ್ಟೆ. ಯಾವ ಜಾಣ ರಾಜಕಾರಣಿಯೂ ತನ್ನ ಮಿನಿಮಮ್ ಸೇಫ್ಟಿಯ ಆರ್ಥಿಕತೆಯನ್ನು ಪಣಕ್ಕಿಟ್ಟು ಕಾದಾಟಕ್ಕಿಳಿಯುವುದಿಲ್ಲ. ಕಂಡೋರ ಕಾಸು, ಬಿಟ್ಟಿ ದುಡ್ಡಿನಲ್ಲೇ ಅವರ ಮೆರವಣಿಗೆ ಸಾಗಬೇಕು. ಇದಕ್ಕೆ ಗೂಳಿಹಟ್ಟಿಯೇನೂ ಹೊರತಲ್ಲ. ಹಾಗಾಗಿ ಅವನು ತನ್ನ ರಾಜಕೀಯ 'ಗ್ರ್ಯಾಂಡ್ ಲೀಪ್'ಗೆ ಭರ್ಜರಿ ಹೂಡಿಕೆ ಹೊಂದಿಸುತ್ತಿದ್ದಾನೆ.

ಅಂದಹಾಗೆ, ಅವನ 'ಗ್ರ್ಯಾಂಡ್ ಲೀಪ್' ಬಯಕೆಯಾದರು ಎಂತದ್ದು? ಮುಂದೊಂದು ದಿನ ತಾನು ದುರ್ಗದ ಎಂಪಿಯಾಗಿ ದಿಲ್ಲಿಯ ಶಕ್ತಿಸೌಧ ಹೊಕ್ಕು, ಅಲ್ಲಿಯೂ ಒಮ್ಮೆ ಅಂಗಿಯನ್ನು ಪರಪರ ಹರಕೊಂಡು ಬರಬೇಕೆನ್ನುವುದು. 2013ರ ಎಂಎಲ್‌ಎ ಎಲೆಕ್ಷನ್‌ನಲ್ಲಿ ಸೋತ ಮರುಕ್ಷಣದಲ್ಲೇ ಅವನ ತಲೆಯಲ್ಲಿ ಇಂತಹದ್ದೊಂದು ಐಡಿಯಾ ತೂರಿಕೊಂಡಿತ್ತು. ಅದಕ್ಕೋಸ್ಕರ ಕಳೆದ ಲೋಕಸಭಾ ಚುನಾವಣೆಯ ವೇಳೆಗಾಗಲೇ ಆಡಬಾರದ ಆಟವನ್ನೆಲ್ಲಾ ಆಡಿದ್ದ. ಒಂದು ಲೋಕಸಭೆ ಕ್ಷೇತ್ರದಂತಹ ವಿಶಾಲ ಸಾಗರವನ್ನು ಗೆಲ್ಲಬೇಕೆಂದರೆ ಪಕ್ಷೇತರನಾಗಿ ತನ್ನೊಬ್ಬನ ವೈಯಕ್ತಿಕ ಗಂಟು ಆಡ ಇಡುವುದು ಕ್ಷೇಮವಲ್ಲ ಅಂತ ಲೆಕ್ಕ ಹಾಕಿ, ಮುಲಾಯಂ ಸಿಂಗ್‌ನ ಸೈಕಲ್ ಏರಲು ಹೋಗಿ ಸಿಪಿ ಯೋಗೀಶ್ವರ್, ಬಿದರಿ ಸಹಿತ ಮಕಾಡೆ ಬಿದ್ದಿದ್ದ. ಸಮಾಜವಾದಿ ಪಕ್ಷ ಗಿಟ್ಟದಾದಾಗ ದೇವೇಗೌಡರ ಜೆಡಿಎಸ್‌ಗೆ ಜೈ ಎಂದಿದ್ದ.

ಈ ನಡುವೆ ಲೋಕಸಭೆಯಲ್ಲಿ ಗೆಲ್ಲೋದು ಸುಲಭದ ಮಾತಲ್ಲ ಎನ್ನುವುದು ಗೂಳಿಹಟ್ಟಿಗೆ ಖಾತ್ರಿಯಾಗಿತ್ತು. ಪಕ್ಷ ನೀಡುವ ಪುಡಿಗಾಸು ಎಲೆಕ್ಷನ್ ಖರ್ಚಿಗೆ ಏತಕ್ಕೂ ಸಾಲದು, ತನಗೋಸ್ಕರ ಹಣವನ್ನು ನೀರಿನಂತೆ ಹರಿಸಲು ಒಂದು ಬಿಟ್ಟಿ ಖಜಾನೆ ಸಿದ್ಧವಾಗಿರಬೇಕು ಎಂಬುದನ್ನು ಗೂಳಿಹಟ್ಟಿ ಅರ್ಥಮಾಡಿಕೊಂಡಿದ್ದ. ಅದೇ ವೇಳೆಗೆ ಚಿತ್ರದುರ್ಗದಿಂದ ಎಂಎಲ್‌ಸಿ ಆಗಿದ್ದ ಜಿ.ಎಚ್.ತಿಪ್ಪಾರೆಡ್ಡಿ ವಿಧಾನಸಭೆ ಎಲೆಕ್ಷನ್‌ನಲ್ಲಿ ಗೆದ್ದು ಶಾಸಕನಾಗಿದ್ದರಿಂದ ತನ್ನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆ ಸ್ಥಾನಕ್ಕೆ ಉಪಚುನಾವಣೆ ಘೋಷಣೆಯಾಗಿತ್ತು. ಅದನ್ನೇ ಬಂಡವಾಳ ಮಾಡಿಕೊಳ್ಳಲು ಯೋಚಿಸಿದ ಗೂಳಿಹಟ್ಟಿ, ಅಲ್ಲಿಗೆ ಒಂದು ಮಿಕ ಹುಡುಕಲು ಶುರು ಮಾಡಿದ್ದ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ಆರು ವಿಧಾನಸಭಾ ಕ್ಷೇತ್ರಗಳ ಮತ್ತು ದಾವಣಗೆರೆಯ ಮೂರು ತಾಲ್ಲೂಕುಗಳ ಚುನಾಯಿತ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಮತ ಹಾಕಬಹುದಾಗಿದ್ದ ಆ ಚುನಾವಣೆಯಲ್ಲಿ ತಾನೇ ನೇರವಾಗಿ ಸ್ಪರ್ಧಿಸುವ ಆಲೋಚನೆ ಗೂಳಿಹಟ್ಟಿಗೆ ಬಂದಿತ್ತು. ಆದರೆ, ಅದೃಷ್ಟವಶಾತ್ ಉಪಚುನಾವಣೆಯಲ್ಲಿ ಗೆದ್ದರೂ ತನಗ್ಯಾವ ಲಾಭವೂ ಆಗದು ಮತ್ತು ಅದಕ್ಕೋಸ್ಕರ ಭಾರೀ ಹಣವನ್ನೇ ಖರ್ಚು ಮಾಡಬೇಕಾಗುತ್ತದೆ ಅಂತೆಲ್ಲಾ ಲೆಕ್ಕ ಹಾಕಿದ ಗೂಳಿಹಟ್ಟಿ, ತನ್ನ ಎಂಪಿ ಆಗುವ ಕನಸನ್ನು ನನಸು ಮಾಡಿಕೊಳ್ಳಲು ಒಬ್ಬ 'ಭಾರಿ' ಧನಿಕನನ್ನು ಕರೆತಂದು ಉಪಚುನಾವಣೆಗೆ ನಿಲ್ಲಿಸುವ ನಿರ್ಧಾರಕ್ಕೆ ಬಂದಿದ್ದ.

ಆಗ ಅವನಿಗೆ ತಗುಲಿಕೊಂಡವನೇ ಬೆಂಗಳೂರಿನ ಬಿಲ್ಡರ್ ರಘು ಆಚಾರ್ ಎಂಬ ಆಸಾಮಿ. ರಿಯಲ್ ಎಸ್ಟೇಟ್ ಮತ್ತು ಬಿಲ್ಡರ್ ಕಸುಬಿನಿಂದ ಬೇಕಾಬಿಟ್ಟಿ ಕಮಾಯಿ ಕಂಡಿದ್ದ ರಘು ಆಚಾರ್, ಗೂಳಿಹಟ್ಟಿಗೆ ವ್ಯವಹಾರದ ದಿನದಿಂದಲೂ ಪರಿಚಯಸ್ಥ. ಎಲ್ಲ ರೊಕ್ಕಸ್ಥರಿಗೆ ಇರುವಂತೆ ತಾನು ರಾಜಕಾರಣ ಮಾಡಬೇಕೆನ್ನುವ ತೆವಲು ಆತನಲ್ಲಿತ್ತು. ಅದನ್ನು ಎನ್‌ಕ್ಯಾಶ್ ಮಾಡಿಕೊಂಡ ಗೂಳಿಹಟ್ಟಿ, 'ನೀನು ಉಪಚುನಾವಣೆಯಲ್ಲಿ ಜಸ್ಟ್ ನಾಮಪತ್ರ ಸಲ್ಲಿಸು, ಹಣದ ಹೊಳೆ ಹರಿಸು, ನಿನ್ನ ಗೆಲ್ಲಿಸೋದು ಹೇಗೆ ಅಂತ ನನಗೆ ಗೊತ್ತು' ಅಂತ ಅವನನ್ನು ಪುಸಲಾಯಿಸಿ ಅಖಾಡಕ್ಕೆ ಕೆಡವಿದ್ದ.

ರಘು ಆಚಾರಿ ಕ್ಷೇತ್ರಕ್ಕೆ ಹೊಸಬನಾದರು ಆತನಲ್ಲಿದ್ದ ಹಣದ ಹಳೆಯ ನೆಂಟಸ್ತಿಕೆಗೆ ಕಟ್ಟುಬಿದ್ದ ಸ್ಥಳೀಯ ಪಂಚಾಯ್ತಿ ಜನಪ್ರತಿನಿಧಿಗಳು ಅವನನ್ನು ಜಯಶೀಲನನ್ನಾಗಿ ಮಾಡಿದ್ದರು. ರಘು ಆಚಾರ್‌ನ ಹಣವನ್ನು ಬಟವಾಡೆ ಮಾಡಿದ್ದು, ಸ್ಥಳೀಯವಾಗಿ ತನಗಿದ್ದ ಪ್ರಭಾವವನ್ನು ಬಳಸಿಕೊಂಡು ಗೆಲ್ಲಿಸಿದ್ದು ಗೂಳಿಹಟ್ಟಿಯೇ ಆದ್ದರಿಂದ ರಘು ಆಚಾರ್ ಖಜಾನೆಯ ಕೀಲಿಯೇ ಶೇಖರನಿಗೆ ಒಲಿದು ಬಂದಂತಾಗಿತ್ತು. ಅಷ್ಟರಲ್ಲಾಗಲೆ 2014ರ ಲೋಕಸಭಾ ಚುನಾವಣೆಯೂ ಬಳಿ ಸಾರಿತ್ತು. ಕಂಡೋರ ದುಡ್ಡಿನಲ್ಲಿ ಯಲ್ಲಮ್ಮನ ಜಾತ್ರೆ ಮಾಡಲು ಅಣಿಯಾದ ಗೂಳಿಹಟ್ಟಿ ಶೇಖರ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ. ಅವನ ಹೇತ್ಲಾಂಡಿತನವನ್ನು ಸ್ವಕ್ಷೇತ್ರ ಹೊಸದುರ್ಗದ ಮತದಾರರೇ ಸಹಿಸಿಕೊಳ್ಳದಿರುವಾಗ ಇನ್ನು ಇಡೀ ಜಿಲ್ಲೆಯ ಮಂದಿ ಹೇಗೆ ತಾನೆ ಗೆಲ್ಲಿಸಿಯಾರು? ಗೂಳಿಹಟ್ಟಿ, ರಘು ಆಚಾರ್‌ನ ಖಜಾನೆಯನ್ನು ಬಿಂದಾಸಾಗಿ ಚೆಲ್ಲಾಡಿದರೂ ಕಾಂಗ್ರೆಸ್‌ನ ಬಿ.ಎನ್. ಚಂದ್ರಪ್ಪನ ವಿರುದ್ಧ ಮಕಾಡೆ ಮಲಗಿದ್ದ. ಗೂಳಿಹಟ್ಟಿಯ ತಿಕ್ಕಲುತನಕ್ಕೆ ಆಚಾರಿಯ ತಿಜೋರಿ ಸೋರಿಹೋಗಿತ್ತು. ಇದೇ ಕಾರಣಕ್ಕೆ ರಘು ಆಚಾರ್ ಮತ್ತು ಗೂಳಿಹಟ್ಟಿಯ ನಡುವಿನ ನಂಟೂ ನರಳಾಡಲು ಆರಂಭಿಸಿತ್ತು.

ಹೊಸ ಬಲಿ ರೆಡಿ

ಯಾವಾಗ ರಘು ಆಚಾರಿ, ಗೂಳಿಹಟ್ಟಿಯನ್ನು ದೂರ ಇರಿಸಲು ಶುರು ಮಾಡಿದನೊ ಆಗ ಅವನಿಗೆ ಟಾಂಗ್ ನೀಡಲು ಹೊಸ ಬಲಿಯನ್ನು ಹುಡುಕಲು ಶುರುಮಾಡಿದ. ಆಗ ಅವನಿಗೆ ಸಿಕ್ಕಿದ್ದೇ ಕೋಲಾರದ ಕೇಶವ. ಈ ಕೇಶವ ಕೋಲಾರದ ಮೂಲದವನಾದರೂ ಬೆಂಗಳೂರಿನಲ್ಲಿ ಹೆಸರು ಮಾಡಿದ ರಿಯಲ್‌ಎಸ್ಟೇಟ್ ವ್ಯವಹಾರಸ್ಥ ಆದರೆ ರಾಜಕೀಯ ಇವನಿಗೇನು ಹೊಸದಲ್ಲ. ಈ ಹಿಂದೆ 2014ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕೋಲಾರದಲ್ಲಿ ಕೆ.ಎಚ್. ಮುನಿಯಪ್ಪನ ಎದುರು ಸ್ಪರ್ಧಿಸಿ ಸೋತವನು. ಸೋತ ದಿನದಿಂದಲೇ ಕೇಶವ ಮುನಿಯಪ್ಪನನ್ನು ತನ್ನ ಆಜನ್ಮ ವೈರಿಯಂತೆ ಭಾವಿಸಿ ಸಿಕ್ಕಸಿಕ್ಕ ವೇದಿಕೆಯಲ್ಲಿ ವಾಚಾಮಗೋಚರ ನಿಂದಿಸಿಕೊಂಡು ಬರುತ್ತಿದ್ದಾನೆ. ಅಂತವನು ಕಣ್ಣಿಗೆ ಬೀಳುತ್ತಲೇ ಖೆಡ್ಡಾಕ್ಕೆ ಕೆಡವಲು ಗೂಳಿಹಟ್ಟಿ ಭಾರೀ ಸಂಚನ್ನೇ ರೂಪಿಸಿದ್ದ.

ಈ ಕೇಶವ ಭೋವಿ ಸಮುದಾಯಕ್ಕೆ ಸೇರಿದವನು. ಅದೇ ಕಾರಣಕ್ಕೆ ಭೋವಿ ಜನಾಂಗದ ಸ್ವಯಂಘೋಷಿತ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯನ್ನು ಕಾಣಲು ಆಗಿಂದಾಗ್ಗೆ ಚಿತ್ರದುರ್ಗಕ್ಕೆ ಎಡತಾಕುತ್ತಿದ್ದ. ಅದನ್ನೇ ಗಾಳ ಮಾಡಿಕೊಂಡ ಗೂಳಿಹಟ್ಟಿ, ಕಾವಿ ಸ್ವಾಮಿಗೇ ಖಾದಿಯ ಹುಚ್ಚು ಹಿಡಿಸಿ ಅವರ ಮೂಲಕ ಕೇಶವನ ಹೆಗಲು ಮೇಲೆ ಕೈ ಇರಿಸಿದ್ದಾನೆ. ದುರ್ಗದಲ್ಲಿ ಮಠಗಳ ರಾಜಕಾರಣ ಹೊಸದೇನೂ ಅಲ್ಲ, ಹಾಗಾಗಿ ಭೋವಿ ಮಠವೂ ಸಲೀಸಾಗಿ ಗೂಳಿಹಟ್ಟಿಯ ರಾಜಕೀಯ ಅಭೀಪ್ಸೆಗೆ ಬಲಿಯಾಗಿದೆ. ಮುಂಬರುವ ಎಲೆಕ್ಷನ್‌ನಲ್ಲಿ, ಈ ಹಿಂದೆ ರಘು ಆಚಾರಿಯನ್ನು ಗೆಲ್ಲಿಸಿದಂತೆಯೇ ನಿನ್ನನ್ನೂ ಗೆಲ್ಲಿಸಿ ಎಂ.ಎಲ್.ಸಿ ಮಾಡ್ತೀನಿ ಅಂತ ಕೇಶವನನ್ನು ಪುಸಲಾಯಿಸಿ ಅವನ ಖಜಾನೆಗೆ ನುಗ್ಗಲು ಗೂಳಿಹಟ್ಟಿ ಶೇಖರ ಹವಣಿಸುತ್ತಿದ್ದಾನೆ. ಇದಕ್ಕೆ ಭೋವಿ ಮಠದ ಜಗದ್ಗುರುವಿನದ್ದೇ ಮಧ್ಯಸ್ಥಿಕೆ ಎನ್ನುವ ಸುದ್ದಿ ಚಿತ್ರದುರ್ಗದಲ್ಲಿ ಹರಿದಾಡುತ್ತಿದೆ.




ಒಂದುಕಡೆ, ಕೋಲಾರದಲ್ಲಿ ಈಡೇರದ ತನ್ನ ರಾಜಕೀಯ ಬಯಕೆಯನ್ನು ಈಡೇರಿಸಿಕೊಳ್ಳುವ ಆಸೆ, ಮತ್ತೊಂದು ಕಡೆ ಮಠದ ಸಿರಿವಂತ ಭಕ್ತನಾಗಿ ಪ್ರಭಾವ ಸೃಷ್ಟಿಸಿಕೊಳ್ಳುವ ಹಂಬಲದಲ್ಲಿ ಗೂಳಿಹಟ್ಟಿಯ ಜೇಬು ತುಂಬಿಸಲು ಕೇಶವ ಬಕರಾ ಆಗುತ್ತಿದ್ದಾನೆ. ಗೂಳಿಹಟ್ಟಿಯ ಐನಾತಿ ಐಡಿಯಾದಿಂದಾಗಿ ಕೋಲಾರದ ಕೇಶವನ ಖಜಾನೆ ಬರಿದಾಗುತ್ತದಲ್ಲದೇ ಶ್ರಮಿಕ ಸಮುದಾಯದ ಭೋವಿ ಮಠದ ಮಾನಮರ್ಯಾದೆಯೂ ಬೀದಿಗೆ ಬೀಳುವ ಸಂಭವವಿದೆ.


ಕೇಶವ ಎಂಬ ಪ್ರತಿಭೆ(?)ಯನ್ನು ಗೂಳಿಹಟ್ಟಿ ಪೋಷಿಸುತ್ತಿರುವುದಕ್ಕೆ ಮತ್ತೂ ಒಂದು ಮಗ್ಗುಲಿದೆ. ಅದೇನೆಂದರೆ, ಕಳೆದ ಲೋಕಸಭೆ ಚುನಾವಣೆಯಲ್ಲಿ ಇವನ ರಾಜಕೀಯ ತೆವಲಿಗೆ ಕಾಸು ಸುರಿದು ಸಾಕಾಗಿ, ದೂರ ಆಗುತ್ತಿರುವ ರಘು ಆಚಾರಿಯನ್ನು ಬ್ಲ್ಯಾಕ್‌ಮೇಲ್ ಮಾಡುವುದಕ್ಕೂ ಈ ಕೇಶವನ ಭೂತವನ್ನು ಗೂಳಿಹಟ್ಟಿ ಬಳಸಿಕೊಳ್ಳುತ್ತಿದ್ದಾನೆ. ತನ್ನನ್ನು ಇದೇ ರೀತಿ ತಿರಸ್ಕರಿಸಿದ್ದೇ ಆದಲ್ಲಿ ಮುಂಬರುವ ಪರಿಷತ್ ಚುನಾವಣೆ ವೇಳೆಗಾಗಲೆ ನಿನಗೊಬ್ಬ ಪ್ರತಿಸ್ಪರ್ಧಿಯನ್ನು ರೆಡಿ ಮಾಡಿ ನಿನ್ನನ್ನೇ ಸೋಲಿಸಿ ಬಿಡುತ್ತೇನೆ ಎಂಬ ಮೆಸೇಜನ್ನು ರಘು ಆಚಾರಿಗೆ ತಲುಪಿಸುವ ಇರಾದೆಯೂ ಗೂಳಿಹಟ್ಟಿಗಿದೆ. ಅದೇನೆ ಆಗಲಿ, ಗೂಳಿಹಟ್ಟಿಯಂತಹ ಸಮಯಸಾಧಕ ರಾಜಕಾರಣಿ ಹುಟ್ಟುಹಾಕಿದ ಈ ಹೊಸ ಪರಂಪರೆಯಿಂದಾಗಿ ದುರ್ಗ ಇವತ್ತು ಬಿಕರಿಯಾಗುವ ದುಸ್ಥಿತಿ ತಲುಪುತ್ತಿರೋದು ಮಾತ್ರ ದುರಂತ!

■ ಟಿ.ಎನ್. ಷಣ್ಮುಖ



ಬಿಬಿಎಂಪಿ ಕಾಳಗ ಅಶೋಕ್ v/s ರೇವಣ್ಣ





ಬೆಂಗಳೂರನ್ನು ಇಬ್ಭಾಗ, ಮೂರ್ಭಾಗ, ಐದು ಭಾಗ ಮಾಡಿ ಕೆಂಪೇಗೌಡರ ಆತ್ಮಕ್ಕೆ ಘಾಸಿ ಮಾಡಿದ್ದೇ ನಮ್ಮ ಬಿಬಿಎಂಪಿ ಎಲೆಕ್ಷನ್ನಿನ ಪ್ರಚಾರದ ಅತೀ ಮುಖ್ಯ ಅಂಶ. ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ರೈತರ ಆತ್ಮಹತ್ಯೆಯನ್ನು ಬೆಂಗಳೂರಿನ ಪ್ರತಿಯೊಬ್ಬ ನಾಗರಿಕರಿಗೂ ಮುಟ್ಟಿಸ್ತೀವಿ. ಲಾಟರಿ ಹಗರಣ, ಡಿ.ಕೆ. ರವಿ ಸಾವಿನ ಬಗ್ಗೆ ಜನಕ್ಕೆ ತಿಳಿಸಿ ಹೇಳ್ತೀವಿ. ಬೆಂಗಳೂರಿಗೆ ಅಂತಾನೇ ಬಿಜೆಪಿ ಪಕ್ಷ ಪ್ರತ್ಯೇಕ ಪ್ರಣಾಳಿಕೆಯನ್ನು ರಚಿಸಲಿದೆ...!

ಬಿಜೆಪಿಯ ಬಿಬಿಎಂಪಿ ಚುನಾವಣಾ ಕಣದ ಹಾಟ್ ಫೇವರಿಟ್ ಮಾಜಿ ಡಿಸಿಎಂ ಆರ್. ಅಶೋಕ್ ತನ್ನ ಸುತ್ತ ನೆರೆದ ಟಿವಿ ಕ್ಯಾಮರಾಗಳೆದುರು ಹೇಳಿದ್ದೇ ಹೇಳಿದ್ದು. ಸುತ್ತ ನಿಂತಿದ್ದ ಬಿಜೆಪಿಯ ಮಾಜಿ ಕೌನ್ಸಿಲರ್‌ಗಳು, ಮಾಜಿ ಮೇಯರುಗಳು, ಖದೀಮ ಕಂಟ್ರಾಕ್ಟರುಗಳು ಟಿಕೆಟ್ ಆಕಾಂಕ್ಷಿಗಳ ಪಡೆ 'ಭೋಲೋ ಭಾರತ್ ಮಾತಾಕೀ' ಎಂದು ಜೈಕಾರ ಹಾಕತೊಡಗುತ್ತದೆ.

ಇನ್‌ಕಂಬೆನ್ಸಿ ಜೋರಾಗೇ ಬೀಸ್ತಾ ಇರೋದರಿಂದ ಏನೇ ಸರ್ಕಸ್ ಮಾಡಿದ್ರೂ ಕಾಂಗ್ರೆಸ್ ಐವತ್ತನ್ನು ದಾಟೋದು ಕಷ್ಟ. ಜೆಡಿಎಸ್‌ಗೆ ಹೆಚ್ಚು ಅಂದ್ರೆ ಹದಿನೈದು ಬರಬಹುದು. ಮಿಕ್ಕಂತೆ ನಾವು ನೂರನ್ನು ದಾಟೋದು ಗ್ಯಾರಂಟಿ. ಕಳೆದ ಲೋಕಸಭಾ ಚುನಾವಣೇಲಿ ಹೇಗೆ ಮೋದಿ ಅಲೆಯಿತ್ತೋ ಈಗ ಬೆಂಗಳೂರಿನ ಮಟ್ಟಿಗೆ ಬಿಜೆಪಿ ಅಲೆಯಿದೆ. ಇಲ್ದೇ ಇದ್ರೆ ಕಾಂಗ್ರೆಸ್ ಜೆಡಿಎಸ್‌ನಿಂದ ಇಪ್ಪೊಂದು ಮಂದಿ ಕಾರ್ಯಕರ್ತರು ಯಾಕೆ ಬಿಜೆಪಿಗೆ ಬರ್‍ತಾ ಇದ್ರು? ಕಾಂಗ್ರೆಸ್ ಟಿಕೆಟ್ಟಿಗೇ ಇಲ್ಲದ ಜಿದ್ದಾಜಿದ್ದಿ ಏಕೆ ಬಿಜೆಪಿ ಟಿಕೆಟ್ಟಿಗಾಗಿ...?

೨೫೦ ಕೋಟಿ

ಆಗಸ್ಟ್ 1 ಶನಿವಾರ ಬಿಜೆಪಿ ಕಚೇರಿಯಲ್ಲಿ ನೆರೆದ ಬಿಜೆಪಿ ಮುಖಂಡನೊಬ್ಬ ಪ್ರಶ್ನೆ ಕೇಳಿದ ವರದಿಗಾರನಿಗೇ ಹಾಕುವ ಪ್ರಶ್ನೆಯಿದು. ಅವತ್ತು ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬಿಬಿಎಂಪಿ ಎಲೆಕ್ಷನ್ನಿಗೆಂದೇ ಕಲೆತ ನಾಯಕರೇನು ಕಮ್ಮಿಯಿದ್ದರಾ? ಕೇಂದ್ರ ಮಂತ್ರಿಗಳಾದ ಅನಂತ್‌ಕುಮಾರ್, ಸದಾನಂದಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ, ಮಾಜಿ ಡಿಸಿಎಂ ಆರ್. ಅಶೋಕ್, ಮಾಜಿ ಮಂತ್ರಿಗಳಾದ ಸುರೇಶ್ ಕುಮಾರ್, ಲಿಂಬಾವಳಿ, ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರು ಸೇರಿದಂತೆ ಬೆಂಗಳೂರಿನ ವಶಕ್ಕಾಗಿ ತನ್ನೆಲ್ಲಾ ತಾಕತ್ತು, ವರ್ಚಸ್ಸು, ಸಂಪತ್ತು, ವಿದ್ವತ್ತನ್ನೆಲ್ಲಾ ಬಿಜೆಪಿ ಪಣಕ್ಕಿಟ್ಟಂತಿದೆ.

ಆಗಸ್ಟ್ 22ಕ್ಕೆ ಚುನಾವಣೆ ನಿಗದಿಯಾಗಿದೆ. ಮೊದಲ ಸುತ್ತಿನ ನೂರು ಮಂದಿಯ ಪಟ್ಟಿಯನ್ನೂ ಬಿಜೆಪಿ ಬಿಡುಗಡೆ ಮಾಡಿದೆ. ಆ ಪಟ್ಟಿಯಲ್ಲಿರುವ ಮಾಜಿ ರೌಡಿಗಳು, ಬೋಗಸ್ ಬಿಲ್ ಖದೀಮರು, ರಿಯಲ್ ಎಸ್ಟೇಟ್ ಧಣಿಗಳು, ರೊಕ್ಕಸ್ಥರ ಹೆಸರುಗಳನ್ನು ನೋಡಿಬಿಟ್ಟರೆ ಸಾಕು ಬಿಜೆಪಿಯ ಕನಸಿನ ಬೆಂಗಳೂರು ಹೇಗಿರಬಹುದೆಂಬುದರ ಅಂದಾಜು ಸಿಕ್ಕಿ ಬಿಡುತ್ತದೆ. ಕಳೆದ ಎಂಟು ವರ್ಷಗಳಿಂದ ಬೆಂಗಳೂರನ್ನಾಳಿದ್ದು ಬಿಜೆಪಿಯೇ. ಮೊದಲ ಮೂರು ವರ್ಷಗಳ ಕಾಲ ಆಡಳಿತಾಧಿಕಾರಿಯನ್ನಿಟ್ಟು, ತದನಂತರ ಐವರು ಮೇಯರ್‌ಗಳ ಮೂಲಕ ಬಿಜೆಪಿ ಬೆಂಗಳೂರಿಗೆ ಮಾಡಿದ ಘನಂದಾರಿ ಉಪಕಾರಗಳ್ಯಾವುದನ್ನೂ ಜನ ಮರೆತಿಲ್ಲ. ಬೋಗಸ್ ಬಿಲ್ ಕಾಮಗಾರಿಗಳ 1538 ಕೋಟಿ ಹಗರಣ ಮುಚ್ಚಿ ಹಾಕಲು ಬಿಬಿಎಂಪಿ ಕೇಂದ್ರ ಕಚೇರಿಗೇ ಬೆಂಕಿ ಹಚ್ಚಲಾಯಿತು. ಬೆಂಗಳೂರಿನ ಪಾರಂಪರಿಕ ಪುರಭವನ, ಕೆ.ಆರ್. ಮಾರುಕಟ್ಟೆ, ದಾಸಪ್ಪ ಆಸ್ಪತ್ರೆ, ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಮಳಿಗೆಗಳನ್ನೂ ಬಿಡದೆ ಸಾಲಕ್ಕೆ ಅಡವಿಟ್ಟರು.

ಒಂದೇ ಒಂದು ಸ್ಮಶಾನ, ಆಟದ ಮೈದಾನ, ಸಾರ್ವಜನಿಕ ಆಸ್ಪತ್ರೆ, ಕಾಲೇಜು, ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಥರದ ಹೊಸದೊಂದು ಉದ್ಯಾನವನ ಯಾವುದನ್ನೂ ಬಿಜೆಪಿಯಿಂದ ನಿರ್ಮಿಸಲಾಗಲಿಲ್ಲ. ವರ್ಕ್‌ಕೋಡ್ ಕರ್ಮಕಾಂಡ, ಪಾಲಿಕೆ ಆಸ್ತಿಪಾಸ್ತಿಗಳ ಕಬಳಿಕೆ, ಜಾಹಿರಾತು ಫಲಕಗಳ ಹಗರಣ, ಓಎಫ್‌ಸಿ ಕೇಬಲ್ ವಂಚನೆ, ಬೋಗಸ್ ಬಿಲ್ ದಂಧೆ, ರಾಜಕಾಲುವೆ ಒತ್ತುವರಿ, ಕೆರೆ ಭೂಮಿ ಕಬಳಿಕೆ, ಆಸ್ತಿ ತೆರಿಗೆ ವಂಚನೆ- ಹೀಗೆ ಬಿಜೆಪಿ ಕಾಲದ ಹಗರಣಗಳ್ಯಾವುದನ್ನೂ ಜನ ಮರೆತಿಲ್ಲ. ಎಲ್ಲಕ್ಕೂ ಮಿಗಿಲಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಮಾನ ಹರಾಜಾಗಿದ್ದು ಬಿಜೆಪಿ ಆಳ್ವಿಕೆಯಲ್ಲೇ ಮತ್ತು ಗಾರ್ಬೇಜ್ ದಂಧೆಯಿಂದಾಗಿ ಊರಿಗೆ ಊರೇ ತಿಪ್ಪೆಗುಂಡಿಯಾಗಿದ್ದನ್ನೂ ಬೆಂಗಳೂರಿಗರು ಮರೆಯಲಿಕ್ಕಿಲ್ಲ.

ಪ್ರತಿ ವಾರ್ಡಿಗೂ ೧ ಕೋಟಿ

ಇಷ್ಟೆಲ್ಲಾ ಕುಖ್ಯಾತಿ-ಅಪಖ್ಯಾತಿಗಳನ್ನು ಬೆನ್ನಿಗಿಟ್ಟುಕೊಂಡು ಜನಕ್ಕೆ ಮುಖ ತೋರಿಸಲು ನಯಾ ಪೈಸೆಯ ಸಾಧನೆಯಿಲ್ಲವೆಂದು ಗೊತ್ತಿದ್ದೂ ಮತ್ತೆ ಬೆಂಗಳೂರಿನ ಜನಕ್ಕೆ ಮುಖ ತೋರಿಸುವ ಯಾವ ನೈತಿಕತೆ ತಾನೇ ಬಿಜೆಪಿಗಿದೆ?

ಇದು ಬೆಂಗಳೂರಿನ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನೂ ಕೇಳಲೇಬೇಕಾದ ಪ್ರಶ್ನೆ ತಾನೆ?

ಅದು ಕೇಸರಿ ಪಡೆಗೂ ಚೆನ್ನಾಗಿ ಗೊತ್ತಿದೆ. ಹಾಗಿದ್ದೂ ಬಿಜೆಪಿಯ ಭಂಡತನ ಯಾವ ಮಟ್ಟಕ್ಕಿದೆಯೆಂದರೆ 'ಇನ್ನೂರು ಕೋಟಿ ಕೈಬಿಟ್ಟರೂ ಪರವಾಗಿಲ್ಲ ನಾವು ಬೆಂಗಳೂರನ್ನು ಹಿಡಿಯಲೇಬೇಕು....' ಎಂಬುದು ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಷಾರ ಒತ್ತಾಸೆಯಂತೆ. ಹಾಗೆಂದು ಬಿಜೆಪಿಯ ಲಿಂಗಾಯತ ನಾಯಕರೊಬ್ಬರು ತಮ್ಮ ಆಪ್ತ ವಲಯದಲ್ಲಿ ಬಾಯಿಬಿಟ್ಟದ್ದೂ ಗುಟ್ಟೇನಲ್ಲ. ಪಾಲಿಕೆಯ ಪ್ರತಿ ಅಭ್ಯರ್ಥಿಗೂ 1 ಕೋಟಿಯ ಪಾರ್ಟಿ ಫಂಡ್, ವಿವಿಧ ನ್ಯೂಸ್ ಚಾನಲ್ಲುಗಳಲ್ಲಿ ಕಾಸು ಕೊಟ್ಟು ಸುದ್ದಿ ಮಾಡಿಸಲೆಂದೇ ಐವತ್ತು ಕೋಟಿಯ ಗಂಟು, ರಾಜ್ಯಾದ್ಯಂತ ಎಬಿವಿಪಿ, ಆರೆಸ್ಸೆಸ್ ಕಾರ್ಯಕರ್ತರನ್ನು ಬೆಂಗಳೂರಲ್ಲಿ ಕಲೆ ಹಾಕಿ ಅವರ ಖರ್ಚಿಗೆಂದೇ ಮತ್ತೆ ಐವತ್ತು ಕೋಟಿ, ಪ್ರತಿ ವಾರ್ಡಿಗೂ ನೂರು ಮಂದಿ ಕಾರ್ಯಕರ್ತರ ಪಡೆ, ಮೊಬೈಲ್, ವಾಟ್ಸಪ್, ಫೇಸ್‌ಬುಕ್ ಮುಖೇನ ಷಡ್ಯಂತ್ರಕ್ಕೆಂದು ಪ್ರತ್ಯೇಕ ಐಟಿ ತಂಡ; ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಮಿಕ್ಕೆಲ್ಲಾ ನಗರಗಳನ್ನೂ ಮೀರಿದ ಸಿಲಿಕಾನ್ ಪ್ರತಿಷ್ಠೆಯ ಬೆಂಗಳೂರನ್ನು ಹಿಡಿಯುವ ಮೂಲಕ ಅಧಿಕಾರಸ್ಥ ಕಾಂಗ್ರೆಸ್ ಸರ್ಕಾರಕ್ಕೂ, ರಾಷ್ಟ್ರೀಯ ಮಟ್ಟದಲ್ಲಿ ಸೋನಿಯಾ ಪಕ್ಷಕ್ಕೂ ಮುಖಭಂಗ ಮಾಡುವ ಬಿಜೆಪಿ ಷಡ್ಯಂತ್ರಕ್ಕೆ ಕೆಲ ಸ್ಯಾಂಪಲ್ಲುಗಳಿವು.

ಇದು ಗೊತ್ತಿದ್ದೇ ಮುಖ್ಯಮಂತ್ರಿ ಸಿದ್ದು ಬಿಬಿಎಂಪಿ ಎಲೆಕ್ಷನ್ನನ್ನು ಮುಂದೂಡುತ್ತಲೇ ಬಂದದ್ದು ಸೋಲಿನ ಭೀತಿಯಿಂದಲ್ಲ, ಬದಲಿಗೆ ಎಂಟು ವರ್ಷಗಳ ಕಾಲ ಬಿಜೆಪಿ ಮಾಡಿದ ಅನಾಹುತವನ್ನು ಸರಿದೂಗಿಸುವುದು.

ಜೆಡಿಎಸ್ ಕಳ್ಳಾಟ

ಸದ್ಯ ಬಿಬಿಎಂಪಿ ಬೆಂಗಳೂರಿಗೆ ಮಾಡಿದ ಹಾನಿಯನ್ನು ತಹಬಂದಿಗೆ ತರುವುದಕ್ಕೆ 10 ಸಾವಿರ ಕೋಟಿ ಬೇಕು. ಮಾಡಿದ ಸಾಲಕ್ಕೆ ಕಟ್ಟಬೇಕಾದ ಬಡ್ಡಿಯೇ ಬೆಳೆದು ಬೆಟ್ಟವಾಗಿದೆ. ಇನ್ನು ಮೇಯರ್ ಶಾಂತಕುಮಾರಿ ಕಾಲದಲ್ಲಿ ಕರೆದ ಟೆಂಡರ್‌ಗಳಿಗೆ ಬಿಲ್ ಪಾವತಿಸುವುದಕ್ಕೂ ಸರ್ಕಾರವೇ ದುಡ್ಡು ಹಾಕಬೇಕು. ಇಂಥಾ ದುರ್ಗತಿಯನ್ನು ರಿಪೇರಿ ಮಾಡುವುದಕ್ಕೇ ಕನಿಷ್ಠ ಮೂರು ವರ್ಷ ಹಿಡಿಯುವಾಗ ಮತ್ತೆ ಚುನಾವಣೆಯಾಗಿ ಇನ್ನೂರು ಮಂದಿ ಹೊಸ ಕೌನ್ಸಿಲರ್‌ಗಳ ಸಂಬಳ, ಖರ್ಚು ವೆಚ್ಚ ಅವರ ಲೂಟಿಯನ್ನೂ ಪಾಲಿಕೆಯೇ ಭರಿಸಬೇಕೆಂದರೆ ಸರ್ಕಾರದ ಮಟ್ಟಿಗದು ಯಮಬಾಧೆಯೆ.

ಇಂಥಾದ್ದೊಂದು ಸಂಕಷ್ಟವನ್ನು ಮನಗಂಡೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲಿಕೆ ಚುನಾವಣೆಯ ಬಿಜೆಪಿ ಹುನ್ನಾರಗಳನ್ನು ತಡೆಯೊಡ್ಡಿಕೊಂಡೇ ಬಂದದ್ದು. ಸರ್ಕಾರದ ಕಾಳಜಿಯನ್ನು ಬಿಜೆಪಿ ನ್ಯಾಯಾಂಗದ ಅಸ್ತ್ರವಾಗಿ ಬಳಸಿದ್ದೂ ಅಲ್ಲದೆ ಕೇಂದ್ರದ ತನ್ನ ಅಧಿಕಾರದ ಮೂಲಕ ವಿಫಲಗೊಳಿಸುತ್ತಲೇ ಬಂತು. ಅದೀಗ ಬಿಬಿಎಂಪಿ ಚುನಾವಣೆತನಕ ಬಂದುನಿಂತಾಗಿದೆ. ಹೆಚ್ಚೆಂದರೆ ಇನ್ನೆರಡು ವಾರವಷ್ಟೇ ಬಾಕಿಯಿದೆ. ರೈತರ ಆತ್ಮಹತ್ಯೆಯ ಅಪಪ್ರಚಾರ, ಸುಳ್ಳುಸುಳ್ಳೇ ಹಬ್ಬಿಸಿದ ಲಾಟರಿ ಹಗರಣ, ಡಿ.ಕೆ. ರವಿ ಸಾವಿನ ನಿಗೂಢ ಎಲ್ಲವನ್ನೂ ಸರ್ಕಾರದ ವಿರುದ್ಧ ಪ್ರಯೋಗಿಸಿ ಎಂಥಾ ವಾಮಮಾರ್ಗವಾದರೂ ಸರಿಯೆ ಬೆಂಗಳೂರನ್ನು ಆಕ್ರಮಿಸಬೇಕೆಂಬುದು ಬಿಜೆಪಿ ತಂತ್ರ.

ವಿಪರ್ಯಾಸವೆಂದರೆ ಬಿಜೆಪಿಯ ಇಂಥ ಕಳ್ಳಾಟಕ್ಕೆ ಜೆಡಿಎಸ್ ಕೈಜೋಡಿಸಿರುವುದು. ಗೆಲ್ಲಬಹುದಾದ ಜೆಡಿಎಸ್ ಅಭ್ಯರ್ಥಿಗಳ ಪರವಾಗಿ ಒಳಗಿಂದೊಳಗೇ ಬಿಜೆಪಿ ಕೈಜೋಡಿಸುವುದು, ಎಲ್ಲಿ ಜೆಡಿಎಸ್ ಗೆಲ್ಲಲು ಸಾಧ್ಯವಿಲ್ಲವೋ ಅಂಥಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವುದು ಈ ಷಡ್ಯಂತ್ರದ ಉದ್ದೇಶ. ಬಿಜೆಪಿ-ಜೆಡಿಎಸ್‌ಗಳು ಕದ್ದೂ ಮುಚ್ಚಿ ಒಂದಾದಲ್ಲಿ ಸಹಜವಾಗೇ ಅಪಾಯ ಕಟ್ಟಿಟ್ಟ ಬುತ್ತಿ. ಇಂಥ ಅನೈತಿಕ ಮೈತ್ರಿಯೇ ಮುಖ್ಯಮಂತ್ರಿ ಸಿದ್ದು ತಲೆನೋವಿಗೆ ಅತೀ ಮುಖ್ಯ ಕಾರಣ.

ಡಾರ್ಕ್‌ಹಾರ್ಸ್ ರೇವಣ್ಣ

ಕಳೆದ ಪಾಲಿಕೆ ಚುನಾವಣೆಯಲ್ಲಿ ತನಗೆ ಅನುಕೂಲವಾಗುವಂತೆ ವಾರ್ಡ್ ಮೀಸಲಾತಿ ಅಸ್ತ್ರ ಬಳಸಿದ ಆರ್. ಅಶೋಕ್ ಐವತ್ತಕ್ಕೂ ಅಧಿಕ ಕಾಂಗ್ರೆಸ್ ಕೌನ್ಸಿಲರ್‌ಗಳನ್ನು ಮಾಜಿಗಳನ್ನಾಗಿಸಿದ್ದರು. ಈಗ ಅದೇ ಅಸ್ತ್ರವನ್ನು ಕಾಂಗ್ರೆಸ್ ಪ್ರಯೋಗಿಸಿದೆ. ಆ ಪ್ರಕಾರ ಬಿಜೆಪಿಯ ಐವತ್ತಕ್ಕೂ ಅಧಿಕ ಮಂದಿ ಕೌನ್ಸಿಲರ್‌ಗಳು ತಮ್ಮದೇ ವಾರ್ಡಿನಲ್ಲಿ ಮತ್ತೆ ಸ್ಪರ್ಧಿಸುವಂತಿಲ್ಲ. ಇಷ್ಟಾಗಿಯೂ ಅಧಿಕ ಸಂಖ್ಯೆಯಲ್ಲಿರುವ ನಗರದ ಬಿಜೆಪಿ ಶಾಸಕರು, ಲೋಕಸಭಾ ಸದಸ್ಯರು, ಕೇಂದ್ರ ಮಂತ್ರಿಗಳೆಲ್ಲ





...ತೆ ಕಾಂಗ್ರೆಸ್ ಪಾಲಿಗದು ದುಸ್ಸಾಧ್ಯ ...ಯೇ.

...ಪಿ ಜೆಡಿಎಸ್‌ಗಳು ಒಡ್ಡಿದ ಈ ಅಪಾಯಕ್ಕೆ ... ರೂಪಿಸಬಲ್ಲ ಚಾಕಚಕ್ಯತೆ ರಾಮಲಿಂಗಾ ...ನೊದಲ್ಲ. ಸದ್ಯ ಬೆಂಗಳೂರು ನಗರದ ...ರಿಯೂ ಅವರದ್ದೇ. ಡೀಕೆ, ರೋಷನ್ ...ಥ ಕಾರ್ಯ ಸಮರ್ಥರಿಗೂ ಕಾಂಗ್ರೆಸ್‌ನಲ್ಲಿ ...ಯಿಲ್ಲ. ಮಾಜಿ ಮೇಯರ್‌ಗಳಾದ ...ದ್ರಪ್ಪ, ಜೆ. ಹುಚ್ಚಪ್ಪ, ಪಿ.ಆರ್. ರಮೇಶ್‌ರಂಥ ...ಗಳೂ ಸಾಕಷ್ಟಿದ್ದಾರೆ. ಇಷ್ಟಾಗ್ಯೂ ...ಮಂತ್ರಿಯೊಬ್ಬ ನೇರವಾಗಿ ಕಣಕ್ಕಿಳಿದು ...ಗದ, ಇಡೀ ಬೆಂಗಳೂರನ್ನು ಎಲ್ಲೋ ಕೂತು ...ಸಬಲ್ಲ, ಚುನಾವಣೆಯೊಂದನ್ನು ಗೆಲ್ಲಲು ...ಬೇಕಾದ ಎಲ್ಲಾ ಕೈಚಳಕವನ್ನೂ ನಿಭಾಯಿಸಬಲ್ಲ ...ಗಾರಿಕೆಯೇ ಬೇರೆಯಿರುತ್ತದೆ.

...ವ್ಯ ಬಿಬಿಎಂಪಿ ಚುನಾವಣೆಗೆ ಸಂಬಂಧಪಟ್ಟಂತೆ ...ದ್ರುದಾದರೆ ಶಾಸಕ ಹೆಚ್.ಎಂ. ರೇವಣ್ಣ ...ಮಂತ್ರಿ ಸಿದ್ದು ಪಾಲಿನ ಡಾರ್ಕ್‌ಹಾರ್ಸ್. ... ಪಂದ್ಯದ ಕುದುರೆ. ಬೆಂಗಳೂರು ನಗರದ ...ಸಾರಿ ಮಂತ್ರಿ ರಾಮಲಿಂಗಾ ರೆಡ್ಡಿ ಇಡೀ ...ಂಪಿ ಚುನಾವಣೆಯ ಪರಮೋಚ್ಚ ನಾಯಕನೆಂಬ ...ಯಾರಿಗೂ ಅನುಮಾನವಿಲ್ಲ. ಅಭ್ಯರ್ಥಿಗಳ ... ಬಿ-ಫಾರ್ಮ್ ಹಂಚಿಕೆ, ಕ್ಯಾಟಗರಿ ನಿರ್ಧಾರ, ...ವಣಾ ಕಾರ್ಯತಂತ್ರ ಇತ್ಯಾದಿಗಳೆಲ್ಲವನ್ನೂ ರಾ.ಲಿಂ. ...ಯೇ ನಿಭಾಯಿಸಬಹುದು.

ಅಹಿಂದದ ಸೇನಾನಿ

...ದರೆ ಕೊನೇಕ್ಷಣದ ಕೈಚಳಕಕ್ಕೊಂದು ಸಿಎಂ ...ಂಬಿಸಿರುವುದು ಮಾಗಡಿಯ ಹೆಚ್.ಎಂ. ...ನ್ನನ್ನು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ...ಳಕ್ಕೆ ರೇವಣ್ಣ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೆ ...ಕ್ಷ ಜಗದೀಶ್‌ಕುಮಾರ್ ಯಾವ ಅಂತರದಲ್ಲಿ ...ಲುತ್ತಿದ್ದನೋ ಗೊತ್ತಿಲ್ಲ. ಶತಗತಾಯ ...ಬೇಕೆಂದು ಎಲ್ಲಾ ತಯಾರಿಯನ್ನೂ ...ಕೊಂಡಿದ್ದ ರೇವಣ್ಣ ಕೊನೇಕ್ಷಣದಲ್ಲಿ ಜಾಫರ್ ಶರೀಫ್ ಮೊಮ್ಮಗ ರೆಹಮಾನ್ ಶರೀಫ್‌ಗಾಗಿ ಹೆಬ್ಬಾಳದ ಟಿಕೆಟ್ ತ್ಯಾಗ ಮಾಡಿದ್ದರು. ಮಾಡಿದ ತ್ಯಾಗಕ್ಕೆ ಪ್ರತಿಫಲವೆಂಬಂತೆ ಮುಖ್ಯಮಂತ್ರಿ ಸಿದ್ದು ವಿಧಾನ ಪರಿಷತ್ ಸದಸ್ಯತ್ವ ಕೊಟ್ಟು ಕೈಹಿಡಿದರಾದರೂ ಮಂತ್ರಿಗಿರಿಯ ವಿಷಯದಲ್ಲಿ ರೇವಣ್ಣನ ಅದೃಷ್ಟ ಕೈಗೂಡಲೇ ಇಲ್ಲ.

ಹಾಗಂತ ರೇವಣ್ಣನದ್ದು ಕೈಕಟ್ಟಿ ಕೂರುವ ಜಾಯಮಾನವಲ್ಲ. ಸಿದ್ದು ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ತಲೆಕೊಡುತ್ತಿದ್ದರೆ ರೇವಣ್ಣ ಅಹಿಂದದ ಅನಭಿಷಕ್ತ ಸಾರಥಿಯಾದರು. ಬಲಾಢ್ಯ ಜಾತಿಗಳ ದವಲತ್ತಿಗೆ ಮುದುರಿ ಕೂತಿದ್ದ ಒಂದೊಂದೇ ಸಣ್ಣ ಜಾತಿಗಳನ್ನು ಆಯ್ದು ರಾಜಕೀಯದ ಅಖಾಡಕ್ಕಿಳಿಸತೊಡಗಿದರು. ಅವತ್ತು ದೇವರಾಜ ಅರಸು ಹೇಗೆ ಬಾಯಿಲ್ಲದ ವರ್ಗಗಳನ್ನು ಹಿಡಿದೆತ್ತಿ ನಿಲ್ಲಿಸುತ್ತಿದ್ದರೋ ಆ ಕಾರ್ಯವನ್ನು ಸಿದ್ದು ಪರ ವಹಿಸಿ ನಿಭಾಯಿಸ ಹೊರಟಿದ್ದೇ ರೇವಣ್ಣ.

ಮೀಡಿಯಾಗಳ ನಿರ್ಲಕ್ಷ್ಯದ ನಡುವೆಯೂ ಉಪ್ಪಾರರ ಸಮ್ಮೇಳನ ನಡೆಯಿತು. ಸವಿತಾ ಸಮಾಜದ ಹಿಂದೆ ಯಾವತ್ತೂ ಇಲ್ಲದ ಸಮಾವೇಶ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಿತು. ವಿಶ್ವಕರ್ಮ ಸಮ್ಮೇಳನ, ತಿಗಳರ ಸಮಾವೇಶ, ಉಪ್ಪಾರರ ರಾಜ್ಯ ಸಮ್ಮೇಳನ ಹೇಳಹೆಸರಿಲ್ಲದ ಕಣಿಯರು, ಬುಡ್ಗ ಜಂಗಮರು, ಬೋವಿ, ದೇವಾಂಗ ಕುಂಬಾರರು, ಯಾದವರು, ಪದ್ಮಸಾಲಿ, ಈಡಿಗರು, ಬೆಸ್ತರು, ಕೋಲಿ ಸಮಾಜ, ಅಲೆಮಾರಿಗಳು; ಇತ್ಯಾದಿ ಸಣ್ಣಪುಟ್ಟ ಜಾತಿಗಳನ್ನೆಲ್ಲ ಒಂದೊಂದಾಗಿ ಬಡಿದೆಬ್ಬಿಸಿ ಸಮಾವೇಶಗಳನ್ನು ಸಂಘಟಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದೇ ರೇವಣ್ಣ.

ಬೆನ್ನಿಗೆ ಸಿಎಂ

ಮಾಧ್ಯಮಗಳು ಈ ಎಲ್ಲಾ ಸಮಾವೇಶಗಳನ್ನು ಉದ್ದೇಶಪೂರ್ವಕವಾಗಿ ಸುದ್ದಿಯಾಗದ ಹಾಗೆ ಮಾಡಿರಬಹುದು. ಹೊರಪ್ರಪಂಚಕ್ಕಿದು ಗೊತ್ತಾಗದೇ ಹೋದರೂ ಅಂತರ್ಗತವಾಗಿ ಉಪೇಕ್ಷಿತ ಜನಸಮೂಹಗಳಲ್ಲಾದ ರಾಜಕೀಯ ಜಾಗೃತಿಯೇನೂ ಕಮ್ಮಿಯದಾಗಿರಲಿಲ್ಲ. ವಿಶೇಷವೆಂದರೆ ಈ ಎಲ್ಲಾ ನಿರ್ಲಕ್ಷಿತ ಜಾತಿ ಸಮಾವೇಶಗಳಿಗೂ ವಿಶೇಷ ಆಕರ್ಷಣೆಯಾಗಿದ್ದದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ!


ಸದ್ದಿಲ್ಲದೆ ನಡೆದ ಇಂಥ ಸಾಮಾಜಿಕ ಸಂಘರ್ಷಕ್ಕೆ ಕಾಣದ ಕೈಯಾಗಿ ಕಾರ್ಯ ನಿರ್ವಹಿಸಿದ್ದೇ ರೇವಣ್ಣ. ಈಗ ಪಾಲಿಕೆ ಚುನಾವಣೆಗೆಂದು ರೇವಣ್ಣನ ಹೆಸರು ಹೆಬ್ಬಾಳದ ಮಟ್ಟಿಗಷ್ಟೇ ಸೀಮಿತಗೊಂಡಿರಬಹುದು. ಹಾಗಂತ ಇಡೀ ಬೆಂಗಳೂರಿನ ಕಾಂಗ್ರೆಸ್ ಕಾರ್ಯತಂತ್ರ ಮಟ್ಟಿಗೆ ರೇವಣ್ಣನದ್ದೇ ತೆರೆಮರೆಯ ಸೂತ್ರಧಾರಿಕೆ. ಬಿಜೆಪಿ ದುಡ್ಡಿನ ದೌಲತ್ತಿಗೆ ಸಿಲುಕಿ ಇನ್ನೇನು ಸೋಲುವುದು ನಿಶ್ಚಿತವೆಂಬಂತಿದ್ದ ಮೂವತ್ತಕ್ಕೂ ಅಧಿಕ ದುರ್ಬಲ ಜಾತಿಗಳ ಅಭ್ಯರ್ಥಿಗಳ ಕಷ್ಟಕ್ಕೆ ರೇವಣ್ಣ ಕೈಜೋಡಿಸಿದ್ದಾರಂತೆ. ಬಿಜೆಪಿ-ಜೆಡಿಎಸ್‌ಗಳ ಟಿಕೆಟ್ ಸಿಗದೇ ಬಂಡೆದ್ದ ಇಪ್ಪತ್ತಕ್ಕೂ ಅಧಿಕ ಲೋಕಲ್ ಲೀಡರ್‌ಗಳನ್ನು ಕಾಂಗ್ರೆಸ್ ಬೆಂಬಲಕ್ಕೆ ನಿಲುವಂತೆ ಕಾರ್ಯತಂತ್ರ ರೂಪಿಸಿದ್ದು, ಕಾಂಗ್ರೆಸ್ ತೊರೆದು ಬಿಜೆಪಿ ಬಾವುಟ ಹಿಡಿಯಲು ಹೊರಟಿದ್ದ ಅತೃಪ್ತರನ್ನೆಲ್ಲಾ ಅವರ ಮನೆಗೇ ಹೋಗಿ ಸಂತೈಸಿದ್ದು, ಬೆಂಗಳೂರಿನ ಐವತ್ತಕ್ಕೂ ಅಧಿಕ ವಾರ್ಡುಗಳಲ್ಲಿ ಜೆಡಿಎಸ್-ಬಿಜೆಪಿಗಳ ಪರ ವಾಲುತ್ತಿದ್ದ ಮರಿನಾಯಕರುಗಳಿಗೆ ರೇವಣ್ಣ ಗಾಳ ಹಾಕಿರುವುದು ಇತ್ಯಾದಿಗಳಾವುದೂ ಹೊರಜಗತ್ತಿಗೆ ಕಾಣಬರಬಹುದು.

ಆದರೆ ಪಾಲಿಕೆ ಚುನಾವಣೆಯ ಫಲಿತಾಂಶದಲ್ಲಿ ಇವರ ಪರಿಣಾಮ ಊಹಿಸಲಸಾಧ್ಯ. ಜೆಡಿಎಸ್-ಬಿಜೆಪಿಗಳ ಅನೈತಿಕ ಕೂಟದ ವಿರುದ್ಧ ರೇವಣ್ಣನ ಪ್ರತಿತಂತ್ರವೇನೆಂದರೆ ಅದು ಸಿಎಂ ಸಿದ್ದರಾಮಯ್ಯನವರ ಖಾಸಾ ಕಾರ್ಯತಂತ್ರವೆಂಬುದು ಗುಟ್ಟಾಗಿ ಉಳಿದಿಲ್ಲ!

■ ರಾ. ಸೋಮನಾಥ್

ಬಿಜೆಪಿ ಬಂಡಾಯ ಕಾಂಗ್ರೆಸ್ ಪಾಲಿಗೆ ಆದಾಯ!








ರೇವಣ್ಣ ಸುಮ್ಮನಿದ್ದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ಮೊದಲನೇ ವ್ಯಕ್ತಿ ಕಾಮಾಕ್ಷಿಪಾಳ್ಯದ ದಯಾನಂದ ಮೂರ್ತಿ. ನಿನ್ನೆಮೊನ್ನೆಯ ತನಕ ಮಹಾಲಕ್ಷ್ಮಿ ಬಡಾವಣೆಯ ಜೆಡಿಎಸ್ ಶಾಸಕ ಗೋಪಾಲಯ್ಯರ ಬಲಗೈ ಬಂಟನಂತಿದ್ದ ದಯಾನಂದಮೂರ್ತಿ ತನ್ನ ನಾಯಕನ ವಿರುದ್ಧವೇ ಬಂಡೇಳಲು ಮುಖ್ಯ ಕಾರಣ ಗೋಪಾಲಯ್ಯ ತನ್ನ ಅತ್ತಿಗೆಯನ್ನು ವೃಷಭಾವತಿನಗರ ವಾರ್ಡಿನಿಂದ ಜೆಡಿಎಸ್ ಅಭ್ಯರ್ಥಿಯಾಗಿಸಿದ್ದು.

ಪೀಣ್ಯ ಕೈಗಾರಿಕಾನಗರ ವಾರ್ಡಿಗೆ ನಿನ್ನೆಮೊನ್ನೆಯ ತನಕ ಕೌನ್ಸಿಲರ್ ಆಗಿದ್ದ ತಿಮ್ಮನಂಜಯ್ಯ ಕಳೆದ ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರನಾಗೇ ಗೆದ್ದುಬಿಟ್ಟ. ಈಗ ಅದೇ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿ. ಹಾಗೇ ಹೇರೋಹಳ್ಳಿ ವಾರ್ಡ್‌ನ ಜೆಡಿಎಸ್ ಕೌನ್ಸಿಲರ್ ಹನುಮಂತೇಗೌಡ ಈಗ ಕಾಂಗ್ರೆಸ್ ಕೈಹಿಡಿದಿದ್ದಾನೆ. ಕಾರಣ ಜವರಾಯಿಗೌಡನ ಮೇಲಿನ ಸಿಟ್ಟು. ಯಶವಂತಪುರದ ವ್ಯಾಪ್ತಿಯಲ್ಲಿ ಜೆಡಿಎಸ್‌ಗೆ ಭದ್ರನೆಲೆ ಕಲ್ಪಿಸಿದ್ದೇ ಹೇರೋಹಳ್ಳಿ ಹನುಮಂತೇಗೌಡ. ಆದರೆ ಜೆಡಿಎಸ್ ಟಿಕೆಟ್ ಕೊಟ್ಟಿದ್ದು ಜವರಾಯಿಗೌಡನಿಗೆ. ತಾನು ಎಮ್ಮೆಲ್ಲೆಯಾಗಬೇಕೆಂದು ಹೆಣಗಾಡುತ್ತಲೇ ಬಂದ ಹನುಮಂತಗೌಡನ ಮುನಿಸು ಈಗ ಜೆಡಿಎಸ್ ತೊರೆದು ಕಾಂಗ್ರೆಸ್ ಕದ ತಟ್ಟುವ ತನಕ ಬಂದು ನಿಂತಿದೆ.

ದೀಪಾಂಜಲಿ ನಗರಕ್ಕೆ ನಿನ್ನೆಮೊನ್ನೆಯ ತನಕ ಬಿಜೆಪಿಯ ಕೌನ್ಸಿಲರ್ ಆಗಿದ್ದದ್ದು ಮಾಲತಿ ವೆಂಕಟಸ್ವಾಮಿ. ಈ ಬಾರಿ ಸೋಮಣ್ಣ ಹೊಸಬರಿಗೆ ಅವಕಾಶ ಕಲ್ಪಿಸ ಹೊರಟು ಅನುಪಮಾ ಧನಪಾಲ್‌ಗೆ ಬಿಜೆಪಿ ಟಿಕೆಟ್ ಕೊಟ್ಟರು. ಬಂಡೆದ್ದ ವೆಂಕಟಸ್ವಾಮಿ ಈಗ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಇದೇ ದಾರಿ ಹಿಡಿದವನು ಹಂಪಿನಗರದ ಚಂದ್ರಶೇಖರಯ್ಯ, ಹುಟ್ಟಾ ಆರೆಸ್ಸೆಸ್ ಕಾರ್ಯಕರ್ತ. ಆದರೆ ಸೋಮಣ್ಣ ಈ ಬಾರಿ ಆನಂದ್ ಹೊಸೂರ್ ಎಂಬ ತನ್ನ ಹಳೇ ಶಿಷ್ಯನನ್ನು ಬಿಜೆಪಿಯಿಂದ ಅಖಾಡಕ್ಕಿಳಿಸಿದ್ದಾರೆ. ಚಂದ್ರಶೇಖರಯ್ಯನ ಬಿಜೆಪಿ ನಿಷ್ಠೆ ಈಗ ಕಾಂಗ್ರೆಸ್‌ಗೆ ಸ್ಥಳಾಂತರಗೊಂಡಿದೆ.

ಈತನಕ ಬಿಬಿಎಂಪಿಯನ್ನು ಮೇಯ್ದು ಅಧಿಕಾರದ ರುಚಿ ಕಂಡ ಬಿಜೆಪಿಯ ಅನೇಕ ಪಾಲಿಕೆ ಸದಸ್ಯರು, ಟಿಕೆಟ್ ಆಕಾಂಕ್ಷಿಗಳೆಲ್ಲ ಬಂಡೆದ್ದು ಕಾಂಗ್ರೆಸ್ ಕದ ತಟ್ಟುತ್ತಿರುವುದನ್ನು ನೋಡುತ್ತಿದ್ದರೆ ರೇವಣ್ಣನ ಚಮತ್ಕಾರಕ್ಕೆ ಪೂರಕವಾಗೇ ಗಾಳಿ ಬೀಸುತ್ತಿರುವಂತಿದೆ.







...ವರದ್ದು ಒತ್ತುವರಿ ಪಕ್ಷವಾದರೆ ನಮ್ಮದು ಕೆರೆ ಕುಂಟೆಗಳನ್ನು ಕಾಪಾಡುವ ಪಕ್ಷ!

...ಸಿದ್ದ ಮಹಾಲಕ್ಷ್ಮಿ ಲೇಔಟ್ ವ್ಯಾಪ್ತಿಯ ನಾಗಪುರದ ರೇವಣ್ಣನ ಮನೆ ಮುಂದೆ ...ದ ಯಾವ ಗಳಿಗೆಯಲ್ಲೂ ಜನಜಾತ್ರೆಯೆ. ಬಿಜೆಪಿ ಷಡ್ಯಂತ್ರದ ವಿರುದ್ಧ ಕಾಂಗ್ರೆಸ್ ...ತಂತ್ರ ಕುರಿತಂತೆ ರೇವಣ್ಣ ತನ್ನದೇ ರೀತಿಯಲ್ಲಿ ಹೇಳುವ ಪರಿಯಿದು.

...ಯಾರು ಹೇಳಿದ್ದು ನಿಮಗೆ.... ನಾನು ಪಾಲಿಕೆ ಚುನಾವಣೆಯ ಸಿಎಂ ಡಾರ್ಕ್‌ಹಾರ್ಸ್ ...? ಮೊನ್ನೆ ವಿಧಾನಸಭೆಯಲ್ಲಿ ಬಿಜೆಪಿ ನಾಯಕರೆಲ್ಲ ಸೇರಿಕೊಂಡು ಇಂಥದ್ದೇ ...ಪ ಮಾಡಿದ್ದಾರೆ. ಮುಖ್ಯಮಂತ್ರಿಯಿಂದಾಗದ ಕೆಲಸವೆಲ್ಲ ಈ ರೇವಣ್ಣ ...ಕೊಡೋದಾದ್ರೆ ಸರ್ಕಾರ, ಪಕ್ಷ, ನಾಯಕರೆಲ್ಲ ಏಕಿರಬೇಕು? ಇದು ನನ್ನ ವಿರುದ್ಧ [illegible] ಅಪಪ್ರಚಾರವಷ್ಟೆ. ನಾನೊಬ್ಬ ನಿಷ್ಠಾವಂತ ಕಾರ್ಯಕರ್ತ ಮಾತ್ರ. [illegible] ಮಾಡುವುದಷ್ಟೇ ನನ್ನ ಕೆಲಸ.

[illegible] ಕೊಂಚಮಟ್ಟಿಗೆ ನಾನು ಸಮರ್ಥಿಸಿಕೊಂಡಿರ ...ದು. ಮುಖ್ಯಮಂತ್ರಿಗಳ ಪರವಾಗಿ ಕೆಳಜಾತಿಗಳನ್ನು ಸಂಘಟಿಸುವಲ್ಲಿ ನನ್ನ ಶ್ರಮ [illegible]. ಅಷ್ಟಕ್ಕೇ ನಾನು ಪಂದ್ಯದ ಕುದುರೆ ಹೇಗಾಗುತ್ತೇನೆ? [illegible] ರೆಡ್ಡಿ ಇದ್ದಾರೆ. ಮುಖ್ಯಮಂತ್ರಿಗಳಿದ್ದಾರೆ. ಮಂತ್ರಿಗಳಿದ್ದಾರೆ. ಹುಚ್ಚಪ್ಪ, [illegible] ಮಾಜಿ ಮೇಯರ್‌ಗಳಿದ್ದಾರೆ. ಈ ಪೈಕಿ ನಾನೂ ಒಬ್ಬನೇ ಹೊರತು [illegible] ಏನು ತಾನೇ ಮಾಡಲು ಸಾಧ್ಯ?

[illegible] ಕೂರಿಸುತ್ತಿರುವ ರೀತಿಯೇ ಹೊರತು ಹಾಗೇನಿಲ್ಲ. [illegible] ಮಾಡಿರೋ ಅಭ್ಯರ್ಥಿಗಳ ಪಟ್ಟಿ ನೋಡಿದ್ರಾ? [illegible] ಒಂದಲ್ಲ ಒಂದು ಆರೋಪ ಹೊತ್ತವರು. ಕೆಲವರು ಕ್ರಿಮಿನಲ್‌ಗಳು, [illegible] ಉಳಿದಂತೆ [illegible] ಮುಂದಿ ಈಗಾಗಲೇ ಪಾಲಿಕೆಯನ್ನು [illegible]....!

[illegible] ಬೆಂಗಳೂರನ್ನು ಆಳಿದ್ದು ಬಿಜೆಪಿಯೇ ಅಲ್ಲವೆ? ಕೃಷ್ಣ [illegible] ಅಂತಾರಾಷ್ಟ್ರೀಯ ಏರ್‌ಪೋರ್ಟ್‌ಗೆ ಚಾಲನೆ ಕೊಟ್ಟರು. [illegible] ದಿನ್ನೆಗೆ ಗಾರ್ಬೇಜ್ ಡಂಪಿಂಗ್ ಯಾರ್ಡ್‌ಗೆಂದು ಭೂಮಿ [illegible] ನಾವು ಆಗ ಮೂಲಸೌಕರ್ಯ ಸಚಿವನಾಗಿದ್ದೆ, ಅವತ್ತು ಬೆಂಗಳೂರಿಗೆಂದು ನಾವು ಕಾಯ್ದಿರಿಸಿದ್ದ ಭೂಮಿಯನ್ನೂ ಈ ಮಂದಿಯಿಂದ ಕಾಪಾಡಲಾಗಲಿಲ್ಲ. ಒಂದೇ ಒಂದು ಕೆರೆಯನ್ನು ಉಳಿಸಿದ್ರಾ? ಬೆಂಗಳೂರಿಗೆಂದು ಹೊಸದೊಂದು ಸ್ಮಶಾನ ಬಂತಾ? ಬೆಂಗಳೂರಿನ ಮೂಲಸೌಕರ್ಯಕ್ಕೆಂದು ಬಳಕೆಯಾಗಬೇಕಿದ್ದ ಸರ್ಕಾರಿ ಭೂಮಿಯನ್ನೆಲ್ಲ ಕಬಳಿಸಿದ್ದು ಯಾರು?


ಬೆಂಗಳೂರನ್ನು ತ್ರಿಭಾಗವಾಗಿ ವಿಭಜಿಸುವುದು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದೇ ಹೊರತು ಹೊಸ ಸಂಗತಿಯೇನಲ್ಲ. ಪ್ರತಿಷ್ಠಿತ ಲಂಡನ್ ನಗರವನ್ನೇ ಐದು ಭಾಗಗಳಾಗಿ ವಿಂಗಡಿಸಿದ್ದಾರೆ.ಹಾಗಂತ ಲಂಡನ್ ಏನು ಛಿದ್ರವಾಗಿ ಹೋಯ್ತಾ? ಜನರಿಗೆ ಒಳ್ಳೇ ಆಡಳಿತ ಕೊಡೋದು ಮುಖ್ಯ. ನೀವೇ ನೋಡಿದ್ರಲ್ಲಾ ಹೇಗೆ ಬೆಂಗಳೂರು ಪೂರ್ತಿ ಕಸದ ತಿಪ್ಪೆಯಾಗಿ ದೇಶವಿದೇಶಗಳಲ್ಲೆಲ್ಲಾ ನಮ್ಮೂರಿನ ಮಾನ ಹೋಯ್ತು ಅಂತ. ಕೆಂಪೇಗೌಡರ ಬೆಂಗಳೂರು ಎಂದು ಈಗ ಬೊಬ್ಬೆ ಹಾಕೋ ಈ ಜನಕ್ಕೆ ಕನಿಷ್ಠ ಕೆಂಪೇಗೌಡರ ಹೆಸರಿಗೆ ಮಸಿ ಬಳಿಯಕೂಡದು ಅನ್ನೋ ಕಾರಣಕ್ಕಾದರೂ ಊರನ್ನು ತಿಪ್ಪೆ ಗುಂಡಿ ಮಾಡಬಾರದಿತ್ತಲ್ಲವೆ?

ಈಗ ನೋಡಿ ಸಿಎಂ ಸಿದ್ದರಾಮಯ್ಯ ಬೆಂಗಳೂರು ಸುತ್ತಮುತ್ತಲು ಅದೆಷ್ಟು ಕೆರೆಗಳನ್ನು [illegible] ಯಾವ ರೀತಿ ರಕ್ಷಿಸುತ್ತಿದ್ದಾರೆ ಅಂತ. ಕೆರೆಗಳನ್ನು ನಾವು [illegible] ಕಾಪಾಡಿದ ರೀತಿಯೇ ಸಾಕು. ಅದೊಂದನ್ನೇ ನೆನಪಿಟ್ಟರೂ ಸಾಕು ಬೆಂಗಳೂರಿನ ಜನ ಕಾಂಗ್ರೆಸ್ಸಿಗೆ ಓಟು ಕೊಟ್ಟೇ ಕೊಡ್ತಾರೆ. ನಾವು ಬೆಂಗಳೂರಿನ ಸರ್ಕಾರಿ ಭೂಮಿಯನ್ನು [illegible] ನೆಲಗಳ್ಳರಿಂದ ವಶಪಡಿಸಿಕೊಂಡಿದ್ದನ್ನು ಜನ ಮರೆಯುವುದಿಲ್ಲ. ಎಷ್ಟು [illegible] ಎಕರೆ ಸರ್ಕಾರಿ ಭೂಮಿ ಉಳಿಸಿದ್ದೇವೆಂದು ಸರ್ಕಾರ ಇವತ್ತಿಗೂ ಲೆಕ್ಕ ಕೊಡುತ್ತಿದೆ. ನೀವೂ ನೋಡಿದ್ದೀರಲ್ಲ. ಬೆಂಗಳೂರನ್ನು ಉಳಿಸೋರು ಯಾರು ಕಬಳಿಸೋರು ಯಾರು ಎಂಬುದನ್ನು ಇಲ್ಲಿನ ಜನರೇ ನಿರ್ಧರಿಸುತ್ತಾರೆ. ಹಿಂದಿನ ಯಾವ ಸರ್ಕಾರಗಳೂ ಮಾಡಲಾಗದ ಕೆರೆ ಒತ್ತುವರಿ ತೆರವು, ಸರ್ಕಾರಿ ಭೂಮಿ ಅತಿಕ್ರಮಣ ವಿರುದ್ಧದ ಕಾರ್ಯಾಚರಣೆಯನ್ನು ಸಿಎಂ ಸಿದ್ದರಾಮಯ್ಯ ನಿರ್ದಾಕ್ಷಿಣ್ಯವಾಗಿ ನಿಭಾಯಿಸಿದ್ದೇ ಬೆಂಗಳೂರಿಗೆ ನಾವು ಮಾಡಿರುವ ಸೇವೆ. ಜನಕ್ಕಿದು ಅರ್ಥವಾಗಬೇಕಷ್ಟೇ....!

ಇದು ರೇವಣ್ಣನ ಎದೆಯಾಳದ ಮಾತುಗಳು.

ಎರಡು ಸಾವುಗಳಿಗೆ ಸಾಕ್ಷಿಯಾದ ಭಾರತ

ಗುರುವಾರ, ಜುಲೈ 30, 2015, ಇನ್ನೂ ಎಳೆಯ ಹರೆಯದ ಒಂದು ರಾಷ್ಟ್ರವಾಗಿರುವ ಇಂಡಿಯಾದ ಬದುಕಿನಲ್ಲಿ ಅತ್ಯಂತ ನೋವಿನ ದಿನ. ಅವತ್ತು ನಾವು ಎರಡು ಸಾವುಗಳಿಗೆ ಸಾಕ್ಷಿಯಾದೆವು; ತೀರಾ ಭಿನ್ನ ಮುಸ್ಲಿಮರಿಬ್ಬರ ಸಾವು. ನಾಗಪುರ ಜೈಲಿನಲ್ಲಿ ಬೆಳ್ಳಂಬೆಳಗ್ಗೆ ನಾವು ಯಾಕೂಬ್ ಅಬ್ದುಲ್ ರಜಾಕ್ ಮೆಮನ್ ಎಂಬವನನ್ನು ನೇಣಿಗೇರಿಸಿದೆವು; ಅದನ್ನು ಮೌನವಾಗಿ ಮತ್ತು ಎಲ್ಲರೂ ಒಟ್ಟು ಸೇರಿ ಆನಂದಿಸಿದೆವು. ಕೆಲವೇ ಗಂಟೆಗಳ ಬಳಿಕ ರಾಮೇಶ್ವರಂನಲ್ಲಿ ನಾವು ಇನ್ನೊಬ್ಬ ವ್ಯಕ್ತಿಯನ್ನು ಸಮಾಧಿ ಮಾಡಿದೆವು; ಅವರೇ ಅವುಲ್ ಪಕೀರ್ ಜೈನಾಲುಬ್ದೀನ್ ಅಬ್ದುಲ್ ಕಲಾಂ. ಸಂಪೂರ್ಣ ಸರಕಾರಿ ಗೌರವದ ಗೌಜಿ ಗದ್ದಲ ಮತ್ತು ವಿಧಿವಿಧಾನಗಳೊಂದಿಗೆ ಅದು ನಡೆಯಿತು. ನಾಗಪುರದ ಸಾವನ್ನು ದಾಖಲಿಸಲು ಯಾವ ಸುದ್ದಿ ಕ್ಯಾಮರಾಗಳಿಗೂ ಅವಕಾಶ ಇರಲಿಲ್ಲ. ಆದರೆ, ರಾಮೇಶ್ವರದ ಕಾರ್ಯಕ್ರಮವು ಮಾಧ್ಯಮ ಕ್ಯಾಮರಾಗಳ ಕಣ್ಣುಕೋರೈಸುವ ಬೆಳಕಿನ ಮುಂದೆಯೇ ನಡೆಯಿತು. ಅಚ್ಚರಿಯೆಂಬಂತೆ, ಒಂದು ರಾಷ್ಟ್ರವಾಗಿ ಈ ಎರಡೂ ವಿಷಯಗಳಲ್ಲಿ ನಾವು ಸಂತೃಪ್ತಿಯ ಭಾವದ ಹಕ್ಕುದಾರರಾಗಿದ್ದೇವೆಂದು ಯೋಚಿಸುತ್ತಿರುವಂತೆ ಕಾಣುತ್ತದೆ.



ನಾಗಪುರದಲ್ಲಿ, ಒಂದು ಸರಳವಾದ, ಆದರೆ ದ್ವಂದ್ವಕ್ಕೆ ಎಡೆಯಿಲ್ಲದ ಅತ್ಯಂತ ಜರೂರಿನ ಹೇಳಿಕೆಯೊಂದನ್ನು ವ್ಯಕ್ತಪಡಿಸುತ್ತಿರುವಂತೆ ನಾವು ನಟಿಸಿದೆವು. ಒಂದು ಆಧುನಿಕ ಪ್ರಭುತ್ವವು ಶಾಂತಿಯನ್ನು ಕಾಪಾಡುವ ಹಾಗೂ ಆಂತರಿಕ ಮತ್ತು ಬಾಹ್ಯ ಎರಡೂ ಮೂಲಗಳಿಂದ ಎದುರಾಗುವ ಭೌತಿಕ ಹಾನಿ ಮತ್ತು ಸಾವಿನ ವಿರುದ್ಧ ಪ್ರಜೆಗಳನ್ನು ರಕ್ಷಿಸಲು ಕರ್ತವ್ಯಬದ್ಧವಾಗಿದೆ. ಇದನ್ನು ಹಿಂಬಾಲಿಸಿ ಇನ್ನೊಂದು ಹೇಳಿಕೆ ಬರುತ್ತದೆ - ಸುವ್ಯವಸ್ಥೆ ಕಾಪಾಡುವ ಹೊಣೆಗಾರನಾಗಿ ತನ್ನ ಸಹಪ್ರಜೆಗಳಿಗೆ ಹಾನಿ ಮಾಡುವವರನ್ನು ಅಥವಾ ಅವರನ್ನು ಕೊಲ್ಲುವವರನ್ನು ದಂಡಿಸುವುದು ಪ್ರಭುತ್ವ ಮತ್ತು ಅದರ ಸಿಬ್ಬಂದಿಗಳ ಕರ್ತವ್ಯ. ಯಾಕೂಬ್ ಮೆಮನ್‌ನನ್ನು ನೇಣಿಗೇರಿಸಬೇಕು ಎಂದು ಹೇಳುವ ಮೂಲಕ ಮೂಲಭೂತ ತತ್ತ್ವವೊಂದನ್ನು ಎತ್ತಿಹಿಡಿದ ಮತ್ತು ಪ್ರಾಥಮಿಕ ಕರ್ತವ್ಯ ಪಾಲಿಸಿದ ತೃಪ್ತಿಯ ಭಾವನೆಯನ್ನು ನಾವು ಅನುಭವಿಸಬಹುದು. ಇಲ್ಲಿ ಯಾಕೂಬನ ಧಾರ್ಮಿಕ ಅಸ್ಮಿತೆಯು ಕೇವಲ ಒಂದು ಆಕಸ್ಮಿಕ ಎಂದು ನಾವು ನಂಬಬಯಸುತ್ತೇವೆ!


ರಾಮೇಶ್ವರದಲ್ಲಿ, ನಾವು ಇನ್ನೊಂದು ಹೇಳಿಕೆಯನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ನಿರ್ವಹಿಸಿದೆವು: ಇಂಡಿಯಾ ಒಂದು ಸೆಕ್ಯುಲರ್ ರಾಷ್ಟ್ರ. ಅಲ್ಲದೆ, ಅದರ ಅತ್ಯುನ್ನತ ಸ್ಥಾನ ಕೂಡಾ ಅಲ್ಪಸಂಖ್ಯಾತ ಸಮುದಾಯದ ಪುರುಷ ಮತ್ತು ಮಹಿಳೆಯರಿಗೆ ಮುಕ್ತವಾಗಿದೆ ಎಂದು ನಾವು ಹೆಮ್ಮೆ ಪಡಬಹುದು. ಪ್ರತಿಫಲ ಮತ್ತು ಶಿಕ್ಷೆಯ ವಿಷಯದಲ್ಲಿ ಗುಣವಿಶೇಷ ಮತ್ತು ಸಾಧನೆ ಮಾತ್ರ ಮುಖ್ಯವೇ ಹೊರತು ಅವರು ಯಾವ ಧರ್ಮಕ್ಕೆ ಸೇರಿದವರು ಎನ್ನುವುದಲ್ಲ ಎಂದು ನಾವು ನಟಿಸಬಹುದು. ಮೆರಿಟ್ ಆಧಾರಿತ ನಾಗರಿಕ ಸಮಾಜವನ್ನು ಮತ್ತು ಒಂದು ಸೆಕ್ಯುಲರ್ ರಾಜಕೀಯ ವ್ಯವಸ್ಥೆಯನ್ನು ನಾವು ಕಟ್ಟಿದ್ದೇವೆ ಎಂದು ನಿರುಮ್ಮಳರಾಗಿರಬಹುದು.

ನಾಗಪುರದಲ್ಲಿನ ನಮ್ಮ ಕಥಾನಕವು ರಾಷ್ಟ್ರದ ತಾಕತ್ತನ್ನು ಸಾರಿಹೇಳುವಂತೆ ಆಗ್ರಹಿಸಿತು. ಇಂಡಿಯಾ ಒಂದು ದುರ್ಬಲ ರಾಷ್ಟ್ರವಲ್ಲ; ನಾವೇನೂ ಬಾಳೇಕಾಯಿ ಗಣತಂತ್ರವಲ್ಲ; ನಮ್ಮ ಕಾನೂನುಗಳನ್ನು ಮತ್ತು ಸುವ್ಯವಸ್ಥೆಗಳನ್ನು ಲಘುವಾಗಿ ತೆಗೆದುಕೊಳ್ಳುವವರು ಯಾರೇ ಇರಲಿ ಅವರಿಗೆ ಪಾಠ ಕಲಿಸುವ ಎಲ್ಲ ಸಾಮರ್ಥ್ಯವನ್ನೂ ಹೊಂದಿದ್ದೇವೆ. ರಾಮೇಶ್ವರಂನಲ್ಲಿ ನಮ್ಮದು ಸೆಕ್ಯುಲರ್ ರಾಷ್ಟ್ರ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುವ ಅವಕಾಶವನ್ನು ಬಳಸಿಕೊಂಡಿದ್ದೇವೆ. ಈ ಎರಡೂ ವಾದಗಳು ಒಂದು ತೆರನಾದ ವಿಪರೀತ ಹೇಳಿಕೆಗಳು. ಯಾಕೆಂದರೆ ಇವುಗಳ ಮುಖ್ಯ ಉದ್ದೇಶವೇ ರಾಜಕೀಯ ಒಳ ಲೆಕ್ಕಾಚಾರಗಳನ್ನು ಮರೆಮಾಚುವುದು. ಈ ಎರಡು ಅಂತ್ಯಗಳು (ಯಾಕೂಬ್‌ನ ಸಾವಿನ ಸಂದರ್ಭದಲ್ಲಿ ಇದ್ದುದು ಕೇವಲ ನೇಣಿಗೇರಿಸುವವನ ಸಲಕರಣೆಗಳು; ಆದರೆ ಕಲಾಂರನ್ನು ಸಮಾಧಿಮಾಡುವ ಕಾರ್ಯದಲ್ಲಿ ಸೇನಾ ವಾದ್ಯಕಾರರ ವಾದನವಿತ್ತು) ನಮ್ಮಲ್ಲಿ ಇಂದಿಗೂ ಹಸಿರಾಗಿರುವ, ಹೆಚ್ಚುಕಡಿಮೆ ಸಾಂಸ್ಥೀಕರಣಗೊಂಡ ಒಂದು ಸಂಕುಚಿತ ಮನೋಭಾವವನ್ನು ನೆನಪಿಸುತ್ತವೆ.

ಯಾಕೂಬ್‌ನ ಪ್ರಕರಣದಲ್ಲಿ ಆತನ ಅಪರಾಧದ ಹಿಂದಿನ ಸಂದರ್ಭದ ಸಾಮೂಹಿಕ ನೆನಪನ್ನು ನಾವು ಅಳಿಸಿಹಾಕಬಯಸುತ್ತೇವೆ. ಬಾಬರಿ ಮಸೀದಿ ಧ್ವಂಸ ಪ್ರಕರಣದ ಆ ಸಂದರ್ಭವನ್ನು ಮತ್ತೆ ನೆನಪಿಗೆ ತಂದುಕೊಳ್ಳೋಣ. ಆ ಧ್ವಂಸ ಕಾರ್ಯ ಅದೇನೂ ಆಕಸ್ಮಿಕವಾಗಿ ನಡೆದ ಘಟನೆಯೇನಲ್ಲ. ಅದು ತಮ್ಮ ರಾಜಕೀಯ ಬೇರುಗಳನ್ನು ಗಟ್ಟಿಗೊಳಿಸುವ ಅತ್ಯಂತ ವ್ಯವಸ್ಥಿತ ಲೆಕ್ಕಾಚಾರದ ಮತ್ತು ಅತ್ಯಂತ ವ್ಯವಸ್ಥಿತವಾಗಿ ಕಾರ್ಯಗತಗೊಳಿಸಿದ ಒಂದು ಕಾರ್ಯತಂತ್ರವಾಗಿತ್ತು. ಸೋಮನಾಥದಿಂದ ಅಯೋಧ್ಯೆಗೆ ರಥಯಾತ್ರೆ ನಡೆಸಿದ, ಆ ಮೂಲಕ ವ್ಯಾಪಕ ಹಿಂಸಾಚಾರ ಮತ್ತು ಭೀತಿಯ ಪರಿಸ್ಥಿತಿಗೆ ಕಾರಣರಾದ ಎಲ್.ಕೆ.ಅಡ್ವಾಣಿಯವರು ಅದರ ಪ್ರಧಾನ ಪುರೋಹಿತರು. ಸರಳವಾಗಿ ಹೇಳಬೇಕೆಂದರೆ, 'ಅವರನ್ನು' (ಅಂದರೆ, ಅಡ್ವಾಣಿಯವರು ಕರೆಕೊಡುವ ನುಡಿಗಟ್ಟಿನಲ್ಲಿ ಹೇಳುವುದಾದರೆ 'ಬಾಬರ್‌ನ ಸಂತಾನ'ವನ್ನು) ಸೂಕ್ತ ಜಾಗದಲ್ಲಿ ಕೂರಿಸಲು, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅವರಿಗೆ ಒಂದು ಪಾಠ ಕಲಿಸಲು ಹಿಂದೂ ಬಹುಸಂಖ್ಯಾತರನ್ನು ಸಂಘಟಿಸಿ ಪ್ರಚೋದಿಸುವ ಕಾರ್ಯತಂತ್ರದ ಭಾಗವಿದು. ಇದರ ಉಪ ಪಠ್ಯ - ಬಹುಸಂಖ್ಯಾತರ ಬೇಡಿಕೆಗಳು ಮತ್ತು ಆದ್ಯತೆಗಳನ್ನು ಒಪ್ಪಿಕೊಳ್ಳುವಂತೆ ಅಲ್ಪಸಂಖ್ಯಾತರಿಗೆ ಸೂಚಿಸುವುದು. ಅಡ್ವಾಣಿಯ ಮುನ್ನಡೆಯನ್ನು ತಾವು ಹಿಂಸಾತ್ಮಕ ಮಾರ್ಗಗಳ ಮೂಲಕ ತಡೆಯಬಲ್ಲೆವು ಎಂದು ಯೋಚಿಸುವ ಮೂಲಕ ಯಾಕೂಬ್ ಮತ್ತು ಆತನ ಸಹ ಪಿತೂರಿಗಾರರೂ ಎಡವಿದರು. ಪರಿಣಾಮವಾಗಿ ಯಾಕೂಬ್ ಮತ್ತು ಆತನ ಗ್ಯಾಂಗ್ ಅಪಾರ ಸಂಖ್ಯೆಯಲ್ಲಿ ಅಮಾಯಕ ಪ್ರಜೆಗಳ ಸಾವು ನೋವಿಗೆ ಕಾರಣವಾಯಿತು. ಈ ಎರಡು ಅಪರಾಧದ ತಕ್ಕಡಿಯನ್ನು (ಒಂದು ಬದಿಯಲ್ಲಿ ಅಡ್ವಾಣಿ ಮತ್ತಿತರರು ಹಾಗೂ ಇನ್ನೊಂದೆಡೆಯಲ್ಲಿ ಮೆಮನ್‌ಗಳು ಮತ್ತವರ ಪಡೆ, ಇವರಿಬ್ಬರ ನಡುವಿನ) ಮಾತ್ರ ಯಾವತ್ತೂ ಸರಿಯಾಗಿ ತೂಗಿನೋಡಲೇ ಇಲ್ಲ.

ಇಂಡಿಯಾ ಗಣರಾಜ್ಯದ ಅತ್ಯುನ್ನತ ಪದಕ್ಕೆ ಕಲಾಂರನ್ನು ಏರಿಸಿದ್ದಕ್ಕೂ ಒಂದು ಸಂದರ್ಭವಿದೆ. ಅದೆಂದರೆ, ಗುಜರಾತ್‌ನಲ್ಲಿ 2002 ರ ಭಯಾನಕ ಮುಸ್ಲಿಂವಿರೋಧಿ ಗಲಭೆಗಳ ಹಿನ್ನೆಲೆಯಲ್ಲಿ ಅಟಲ್ ಬಿಹಾರಿ ವಾಜಪೇಯಿಯವರ ಅಸಹಾಯಕತೆ. ಮುಖ್ಯಮಂತ್ರಿ ನರೇಂದ್ರ ಮೋದಿ ತನ್ನ ರಾಜಧರ್ಮ ಪಾಲನೆಯಲ್ಲಿ ಸಂಪೂರ್ಣ ವಿಫಲರಾಗಿದ್ದರು ಎಂದು ಪ್ರತಿಪಾದಿಸಲು ಪ್ರಧಾನಿ ವಾಜಪೇಯಿ ಯತ್ನಿಸಿದಾಗ ಅವರದೇ ಹಿರಿಯ ಪಕ್ಷ ಸಹೋದ್ಯೋಗಿಗಳ ಕೈ ಮೇಲಾಗಿತ್ತು ಮತ್ತು ವಾಜಪೇಯಿಯವರ ಬಾಯಿಯನ್ನು ಅವರು ಮುಚ್ಚಿಸಿಬಿಟ್ಟಿದ್ದರು. ವಾಜಪೇಯಿಯವರು ರಾಜಕೀಯ ಉತ್ತರದಾಯಿತ್ವದ ತತ್ತ್ವವನ್ನು ಎತ್ತಿ ಹಿಡಿಯಬಯಸಿದ್ದರು. ಅವರು ಉಲ್ಲೇಖಿಸಿದ 'ರಾಜಧರ್ಮ' ತತ್ತ್ವವನ್ನು ಸಾರಾಸಗಟಾಗಿ ತಿರಸ್ಕರಿಸಲಾಗಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಇಂಡಿಯಾಕ್ಕೆ ಅಂಟಿದ ಕಳಂಕವನ್ನು ತೊಳೆಯುವ ಮಾರ್ಗವಾಗಿ ವಾಜಪೇಯಿ ಬಣವು ಅಬ್ದುಲ್ ಕಲಾಂರನ್ನು ರಾಷ್ಟ್ರಪತಿ ಸ್ಥಾನಕ್ಕೆ ತಂದಿತು. ಕಲಾಂರಂತೂ ಎಲ್ಲಾ ರೀತಿಯಲ್ಲೂ ಅದಕ್ಕೆ ಸರಿಹೊಂದುವಂತಿದ್ದರು. ಗುಜರಾತ್ ಗಲಭೆಗಳನ್ನು ಕುರಿತ ಸಾಮೂಹಿಕ ಅಪರಾಧಿಭಾವದಿಂದ ನಮ್ಮನ್ನು ಮುಕ್ತಗೊಳಿಸುವ ಒಂದು ವಿಸ್ತೃತ ತಂತ್ರದ ಭಾಗವಾಗಲು ಅವರು ಹಿಂದೆಮುಂದೆ ನೋಡದೆ ತಯಾರಾಗಿದ್ದರು. ಎನ್‌ಡಿಎ ಆಡಳಿತದ ಅವಧಿಯಲ್ಲಿ ಅವರು ರಾಷ್ಟ್ರಪತಿಭವನದ ಜೀ ಹುಜೂರ್ ರಾಷ್ಟ್ರಪತಿಯಾಗಿದ್ದರು. ನಿದರ್ಶನಕ್ಕೆ ಹೇಳುವುದಾದರೆ, ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ವಿ.ಡಿ.ಸಾವರ್ಕರ್ ಭಾವಚಿತ್ರವನ್ನು ಅನಾವರಣ ಮಾಡಲು ಕಲಾಂರ ಪೂರ್ವಾಧಿಕಾರಿ ಕೆ.ಆರ್.ನಾರಾಯಣನ್ ಸ್ಪಷ್ಟವಾಗಿ ನಿರಾಕರಿಸಿದ್ದರೆ, ಕಲಾಂ ಈ ಕೆಲಸವನ್ನು ಮಾಡಲು ಸಂತೋಷದಿಂದ ಒಪ್ಪಿಕೊಂಡರು!

ಕಲಾಂ ಅವರು ಹಿಂದಿನಿಂದಲೂ ಸಂಘಪರಿವಾರಕ್ಕೆ ಇಷ್ಟವಾಗಲು ಅನೇಕ ಕಾರಣಗಳಿವೆ. ಕ್ಷಿಪಣಿ ಮತ್ತು ಅಣ್ವಸ್ತ್ರ ಹೊಂದುವ ಹಿಂದೂ ಬಹುಸಂಖ್ಯಾತ ರಾಷ್ಟ್ರದ ಬಯಕೆಯನ್ನು ಈಡೇರಿಸುವಲ್ಲಿ ಒಬ್ಬ ಮುಸ್ಲಿಂ ಬಾಹ್ಯಾಕಾಶ ವಿಜ್ಞಾನಿಯು ಮುಂಚೂಣಿಯಲ್ಲಿದ್ದುದು ರಾಷ್ಟ್ರೀಯವಾದಿಗಳ ಗುಂಪಿಗೆ ಚೆನ್ನಾಗಿ ಒಗ್ಗಿತ್ತು. 2002 ಫೆಬ್ರವರಿಯಲ್ಲಿ ಗುಜರಾತ್‌ನಲ್ಲಿ ನಡೆದ ಮುಸ್ಲಿಮ್ ವಿರೋಧಿ ಹತ್ಯಾಕಾಂಡದ ವಿಚಾರದಲ್ಲಿ ಅವರು ಗಾಢ ಮೌನ ವಹಿಸಿದ್ದರು. ಕಳೆದ ವರ್ಷ ಅವರು ನಾಗಪುರದಲ್ಲಿರುವ ಆರೆಸ್ಸೆಸ್ ಮುಖ್ಯ



ಕಚೇರಿಗೆ ತೆರಳಿ ಸಂಘಟನೆಯ ಸ್ಥಾಪಕ ಕೇಶವ ಬಲಿರಾ[m]
ಹೆಡಗೆವಾರ್ ಅವರಿಗೆ ನಮನವನ್ನೂ ಸಲ್ಲಿಸಿದ್ದರು. ಪ್ರತಿ
ಕರ್ನಾಟಕ ಸಂಗೀತ ಕೇಳುವ ಅವರನ್ನು ಶಶಿ ತರೂ[ರ್]
ಅವರು "ಹಿಂದೂ ಸಂಸ್ಕೃತಿ ತುಂಬಿ ತುಳುಕುವ ಮುಸ್ಲಿಮ
ಎಂದು ಬಣ್ಣಿಸಿದ್ದರು. ಚೆನ್ನೈನ ಮೈಲಾಪುರದಲ್ಲಿ
ಬ್ರಾಹ್ಮಣರ ಭದ್ರಲೋಕದಲ್ಲಿ ನಡೆಯುವ ತಾಳ ವ
ಕಚೇರಿಗಳಲ್ಲಿ ಭಾಗವಹಿಸುತ್ತಾ ಕಲಾಂ ಅವರು ತ
ಬ್ರಾಹ್ಮಣರಿಗಿಂತಲೂ ಬ್ರಾಹ್ಮಣ ಎಂ
ಬಿಂಬಿಸಿಕೊಂಡಿದ್ದರು.

ಒಂದು ನ್ಯಾಯಪೂರ್ಣ ಸಮಾಜದ ತತ್ತ್ವಗಳು ವ
ಕ್ರಮಗಳನ್ನು ಎತ್ತಿ ಹಿಡಿಯುವ ವಿಚಾರದಲ್ಲಿ ನಮ್ಮಲ್ಲಿ
ನ್ಯಾಯಾಂಗ ಪ್ರಕ್ರಿಯೆಯು ಅತ್ಯಂತ ಕ್ರಿಯಾಶೀಲವಾ
ಮತ್ತು ಉದಾರವಾಗಿದೆ ಎಂದು ನಾವು ಖುಷಿಪಡುತ್ತ
ನಿಜವಾಗಿಯೂ ಯಾಕೂಬ್ ಮತ್ತು ಆತನ ವಕೀಲ
ನ್ಯಾಯ ದಕ್ಕಿಸಿಕೊಳ್ಳುವ ಪ್ರತಿಯೊಂದು ಅವಕಾಶ
ನೀಡಲಾಯಿತು. ನಮ್ಮ ನ್ಯಾಯವ್ಯವಸ್ಥೆಯ ಗಟ್ಟಿತ
ವಿಚಾರದಲ್ಲಿ ಎರಡು ಮಾತಿಲ್ಲ. ಇಲ್ಲಿ ಪ್ರಶ್ನೆ ಇರುವ
ಇಂಡಿಯಾದ ಆಡಳಿತ ವ್ಯವಸ್ಥೆಯ ನ್ಯಾಯಪರತೆ, ಅ
ನೈತಿಕ ಪ್ರಜ್ಞೆ ಮತ್ತು ಗುಣಗಳ ಬಗ್ಗೆ. ಇನ್ನೊ
ಪ್ರಕರಣದಲ್ಲಿ, ಅಂದರೆ ಅಡ್ವಾಣಿ ಮತ್ತಿತರರ ವಿರು
ಬಾಬ್ರಿ ಮಸೀದಿ ಪ್ರಕರಣದಲ್ಲಿ, ಅದೇ 'ಬಹಳ ಅಗ
ಕಾನೂನು ಪ್ರಕ್ರಿಯೆ' ಇನ್ನೂ ಪೂರ್ಣಗೊಂಡೇ
ಎನ್ನುವುದನ್ನು ನಾವು ಮರೆಯುತ್ತಿರುವಂತೆ ಕಾಣು
ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಅಪರಾಧ
ಹೆಚ್ಚೆಂದರೆ ಒಂದು ರಾಜಕೀಯ ಅಚಾತುರ್ಯ ಎ
ಬಣ್ಣಿಸಲಾಗಿದೆ; ಸಂಭ್ರಮಿಸಲಾಗಿದೆ ಕೂಡಾ. ಯಾಕೂ
ಅಪರಾಧವನ್ನು ವ್ಯಕ್ತಿಗತ ಅಪರಾಧದ ಗುದ್ದಿನಿಂದ ಪ್ರತ್ಯೇ
ಆತನನ್ನು ಶಿಕ್ಷಿಸಲಾಯಿತು. ಆತನ ಪ್ರತಿನಾಯಕ (ಕನಿ
ಸಾಂಕೇತಿಕವಾಗಿ) ಅಡ್ವಾಣಿಯನ್ನು ಬ್ಲಾಕ್ ಕ
ಕಮಾಂಡೋಗಳು ರಕ್ಷಿಸುತ್ತಿದ್ದರು ಮತ್ತು ಈಗ
ರಕ್ಷಿಸುತ್ತಿದ್ದಾರೆ! ಇದು ದೇಶದಲ್ಲಿ ವ್ಯಾಪಕವಾಗಿ ಕಾಣಸಿ
ಇಂಡಿಯಾ ಪ್ರಭುತ್ವದ ಒಂದು ಸಂಕೇತ.

ಯಾಕೂಬ್ ಗಲ್ಲು ಶಿಕ್ಷೆಯಲ್ಲಿ, ಬಹಿರಂಗ
ಹೇಳಿರದ, ಆದರೆ ಸುಲಭದಲ್ಲಿ ಗ್ರಹಿಕೆಗೆ ದ
ಭಾವನಾತ್ಮಕ ಬಿಡುಗಡೆಯ ಅಂಶವೊಂದಿದೆ. ನಾಗ
ಜೈಲಿನ ಆ ಕ್ರೂರ ಹತ್ಯಾ ವಿಧಿವಿಧಾನದಲ್ಲಿ ನಿ
ಇತಿಹಾಸವೊಂದು ಮರಳಿ ಪಡೆಯಲಾಗದ
ಮಿಶ್ರವಾಗಿಹೋಗಿದೆ. ಯಾಕೂಬ್ ನಮ್ಮನ್ನು ನ
ಪರಿವರ್ತಿಸಿಕೊಳ್ಳಲು ಒಂದು ಅವಕಾಶ ಕೊಟ್ಟಿದ್ದ ನಾವ
ತಿರಸ್ಕರಿಸಿದೆವು. ಬದಲಿಗೆ, ದ್ವೇಷಸಾಧನೆಯ
ಪ್ರತೀಕಾರವನ್ನು ಆಗ್ರಹಿಸುವ ಹೊರನೋಟದ ಥಳು
ಹೊರಳಾಡಲು ನಮಗೆ ನಾವು ಅವಕಾಶ ಮಾಡಿಕೊ
ಗರಿಷ್ಠ ದಂಡಾತ್ಮಕ ಪ್ರತಿಕ್ರಿಯೆಯನ್ನು ಪ್ರತಿಪಾದಿ
ಉಜ್ವಲ್ ನಿಕ್ಕಂ ಚಿಂತನಧಾರೆಯು, ಅಷ್ಟೇ
ಪರಿಪೂರ್ಣವಲ್ಲದ ನಮ್ಮ ಉದಾರವಾದ
ಪೂರ್ತಿಯಾಗಿ ಸೋಲಿಸಿಬಿಟ್ಟಿತು.

ನಾಗಪುರದಲ್ಲಿ, ಬಹುಸಂಖ್ಯಾತರ ವ
ಅಲ್ಪಸಂಖ್ಯಾತರ ನಡುವಣ ಸಹಬಾಳ್ವೆಯ ಅತ್ಯಂತ ಕ
ಸಮೀಕರಣವೊಂದನ್ನು ಇತ್ಯರ್ಥಪಡಿಸಿಕೊಳ್ಳುವ ಅ
ಅವಕಾಶವೊಂದನ್ನು ನಾವು ಕಳೆದುಕೊಂಡೆವು.
ಸಮೀಕರಣವು ನಮ್ಮ ವ್ಯವಸ್ಥೆ ಮತ್ತು ರಾಷ್ಟ್ರದ ಸಭ
ಅತ್ಯಂತ ನಿರ್ಣಾಯಕವಾಗಿ ಉಳಿದುಕೊಂಡಿ
ಉಳಿದುಕೊಂಡಿದೆ ಮತ್ತು ಉಳಿದುಕೊಳ್ಳುತ್ತದೆ. ರಾಮೇ
ಸಮಾರಂಭದಲ್ಲಿನ 'ಸೇನಾ ಸೆಲ್ಯೂಟು' ವ
ಶಿಷ್ಟಾಚಾರಗಳು ನಾಗಪುರದ ರಕ್ತದಾ
ಬದಲಿಯಾಗಲಾರದು. ಒಂದು ರಾಷ್ಟ್ರವಾಗಿ ಈಗ
ಇನ್ನಷ್ಟು ಬಡವಾಗಿದ್ದೇವೆ ಮತ್ತು ಒಂದು ಪ್ರಭುತ್ವ
ನಮ್ಮನ್ನು ನಾವು ಮತ್ತಷ್ಟು ದುರ್ಬಲಗೊಳಿಸಿಕೊಂಡಿ
ಎಂಬುದು ನಮಗೆ ಅರ್ಥವಾಗಬೇಕು.

■ ಇಂಗ್ಲಿಷ್ ಮೂಲ : ಎನ್. ಜಯರಾ

ಕನ್ನಡಕ್ಕೆ : ಶ್ರೀನಿವಾಸ್ ಕಾಕ

ಮರಣದಂಡನೆ ಯಾಕಿರಬೇಕು?

ಒಂದು ನಿರ್ದಿಷ್ಟ ಸಮುದಾಯದ ಬಗ್ಗೆ ದ್ವೇಷಭಾವನೆ ಹೊಂದಿದ್ದಾರೆ ಎಂಬ ಆರೋಪ ಹೊತ್ತಿರುವ ನಮ್ಮ ಪ್ರಧಾನಿಗಳು ಹಠಾತ್ ಮಧ್ಯಪ್ರವೇಶಿಸಿ ಯಾಕೂಬ್ ಮೆಮನ್‌ನ ಗಲ್ಲು ಶಿಕ್ಷೆಯನ್ನು ತಡೆಯುತ್ತಿದ್ದರೆ, ಆ ಮೂಲಕ ಹಿಂದೂ, ಸಿಖ್, ಮುಸ್ಲಿಂ ಎಂಬ ಭೇದವಿಲ್ಲ, ನಮಗೆ ಸಂತನ್, ಮುರುಗನ್, ಪೇರಾರಿವೇಲನ್, ಬಲವಂತಸಿಂಗ್ ರಾಜೋನಾ, ಯಾಕೂಬ್ ಮೆಮನ್ ಎಲ್ಲರೂ ಒಂದೇ ಎನ್ನುವ ಒಂದು ಸಂದೇಶ ರವಾನಿಸುತ್ತಿದ್ದರೆ ಒಂದು ಸಣ್ಣ ಹೆಜ್ಜೆಯ ಮೂಲಕ ಅವರು ಅದೆಂತಹ ಅದ್ಭುತ ಜನಪ್ರಿಯತೆಯನ್ನು ಸಂಪಾದಿಸುತ್ತಿದ್ದರು!

ಅದೆಲ್ಲ ಸರಿ, ಶಿಕ್ಷೆಯೊಂದರ ಪ್ರಧಾನ ಉದ್ದೇಶವೇನು? ಸುಧಾರಣೆಯೇ? ಪ್ರತೀಕಾರವೇ? ಅಪರಾಧಿಯನ್ನು ಶಿಕ್ಷಿಸುವ ಮೂಲಕ ಮುಂದೆ ಅಪರಾಧ ಎಸಗಬಹುದಾದವರಿಗೆ ಕಠಿಣ ಸಂದೇಶ ರವಾನಿಸಲಾಗುತ್ತದೆ ಎನ್ನಲಾಗುತ್ತದೆ. ಇದು ನಿಜವೇ ಆದರೆ, ದೇಶದಲ್ಲಿ ಕೊಲೆಯಂತಹ ಗಂಭೀರ ಅಪರಾಧಗಳಿಗೆ ಗರಿಷ್ಠ ಶಿಕ್ಷೆಯನ್ನು ವಿಧಿಸುತ್ತಿದ್ದರೂ ಆ ಅಪರಾಧ ಕೃತ್ಯಗಳು ಇಂದಿಗೂ ಮುಂದುವರಿದೇ ಇರುವುದನ್ನು ಹೇಗೆ ವ್ಯಾಖ್ಯಾನಿಸೋಣ? ಇನ್ನು, ಸೊಂಟಕ್ಕೆ ಬಾಂಬ್ ಬಿಗಿದುಕೊಂಡು ತಮ್ಮನ್ನು ತಾವು ಸ್ಫೋಟಿಸಿಕೊಳ್ಳಲು ಸದಾ ಸಿದ್ಧರಿರುವ ಭಯೋತ್ಪಾದಕರು ಮರಣದಂಡನೆಗೆ ಹೆದರಿ ತಮ್ಮ ಕೃತ್ಯ ನಿಲ್ಲಿಸುತ್ತಾರೆ ಎಂಬ ಮಾತನ್ನು ನಾವು ನಂಬಬೇಕೇ?

ಅಪರಾಧಿಗೆ ಶಿಕ್ಷೆ ನೀಡುವ ಮೂಲಕ ಸಂತ್ರಸ್ತರಿಗೆ ಸಮಾಧಾನ ಒದಗಿಸಲಾಗುತ್ತದೆ ಎಂದು ಕೆಲವರು ವಾದಿಸುತ್ತಾರೆ. ಸತ್ತವರು ಮರಳಿ ಬರುವುದಿಲ್ಲ ಎನ್ನುವುದು ನಮಗೆ ಗೊತ್ತು, ಅವರನ್ನು ಮರಳಿ ತಂದುಕೊಡುವುದು ಸಾಧ್ಯವಾದರೆ ಅದು ಮಾತ್ರ ನಾವು ಅವರಿಗೆ ಒದಗಿಸಿಕೊಡಬಹುದಾದ ಪರಿಪೂರ್ಣ ನ್ಯಾಯ ಮತ್ತು ಪರಿಹಾರ. ಇನ್ನು, ಮಾನಸಿಕ ಸಮಾಧಾನದಿಂದ ಏನು ಪ್ರಯೋಜನ (ಏಕಾಂತದಲ್ಲಿ ಸಂತ್ರಸ್ತರನ್ನು ಕೇಳಿದರೆ ಅವರೂ ಇದನ್ನೇ ಅಂದಾರು)? ಅವರಿಗೆ ಬೇಕಾದುದು, ಆರ್ಥಿಕ ಅರ್ಥಾತ್ ಜೀವನಾಧಾರ ಇತ್ಯಾದಿ ಸಮಾಧಾನಗಳು. ಅಪರಾಧಿಯ ಎಲ್ಲ ಸಂಪತ್ತನ್ನೂ ಮುಟ್ಟುಗೋಲು ಹಾಕಿ ಅದನ್ನು ಸಂತ್ರಸ್ತರಿಗೆ ಹಂಚುವುದು. ಅಲ್ಲದೆ ಕೊನೆಯುಸಿರು ಇರುವವರೆಗೂ ಆತ ಜೈಲಿನೊಳಗಿದ್ದು ದುಡಿಯುವುದು, ಆ ಮೂಲಕ ಆತ ಸಂಪಾದಿಸಿದ ಹಣವೆಲ್ಲ ಸಂತ್ರಸ್ತರ ಖಾತೆಗೆ ಜಮೆಯಾಗುವಂತೆ ಮಾಡುವುದು ಮೊದಲಾದವು ತಕ್ಕಮಟ್ಟಿನ ಮತ್ತು ಹೆಚ್ಚು ಉತ್ತಮತರ ಪರಿಹಾರವಾದೀತೋ ಏನೋ.

ಮರಣದಂಡನೆಯನ್ನು ಶಿಕ್ಷೆಗಳಲ್ಲೇ ಗರಿಷ್ಠ ಶಿಕ್ಷೆ ಎನ್ನಲಾಗುತ್ತದೆ. ಆದರೆ ಮರಣದಂಡನೆ ಅನುಭವಿಸಲಿರುವ ವ್ಯಕ್ತಿ ದಶಕ ದಶಕಗಳ ಕಾಲ ಏಕಾಂತದ ನರಕವಾಸ ಅನುಭವಿಸುತ್ತಿರುತ್ತಾನೆ. ಒಮ್ಮೆ ಸತ್ತು, ಆ ಮೂಲಕ ಯಾತನೆಗಳಿಂದ ಬಿಡುಗಡೆಯಾದರೆ ಸಾಕು ಎಂದು ನಿತ್ಯವೂ ಹಾರೈಸುತ್ತಿರುತ್ತಾನೆ. ಅಪರಾಧಕ್ಕೆ ತಕ್ಕ ಶಿಕ್ಷೆ ನೀಡಿ ಆತನಿಗೆ ಪಾಠ ಕಲಿಸಬೇಕೆಂಬುದು ನಮ್ಮ ಇರಾದೆಯಾದರೆ, ಆತನನ್ನು ಕೊಲ್ಲಬಾರದು. ಕೊನೆಯುಸಿರು ಇರುವವರೆಗೆ ಜೈಲಿನಲ್ಲಿ ಸತ್ರಮ ಶಿಕ್ಷೆ ಅನುಭವಿಸುತ್ತಾ ಕ್ಷಣ ಕ್ಷಣವೂ ಪಶ್ಚಾತ್ತಾಪ ಪಡುತ್ತಿರಬೇಕು. ಅಲ್ಲದೆ ಆತನನ್ನು ದೇಶದ ಆಸ್ತಿಪಾಸ್ತಿ ನಿರ್ಮಾಣದ ಕೆಲಸಗಳಲ್ಲಿ ಬಳಸಿಕೊಳ್ಳಬೇಕು. ಇದರಿಂದ ದೇಶಕ್ಕೂ ಲಾಭವಿದೆ. ಇದು ನಿಜವಾದ ಗರಿಷ್ಠ ಶಿಕ್ಷೆ. ಮರಣದಂಡನೆ ಸಂದರ್ಭದಲ್ಲಿ ಎಲ್ಲ ರೀತಿಯ ಯಾತನೆಗಳಿಂದ ಆತನಿಗೆ ಮುಕ್ತಿಯಲ್ಲವೇ?

ಅವಿವೇಕಿ ಉಗ್ರಗಾಮಿಗಳು ಅನ್ಯಾಯವಾಗಿ ನೂರಾರು ಮಂದಿಯನ್ನು ಕೊಲ್ಲುತ್ತಾರೆ. ನಾವು (ಅಕಸ್ಮಾತ್ ಜೀವಂತ ಸಿಕ್ಕ) ಒಬ್ಬ ಉಗ್ರಗಾಮಿಯನ್ನು ನ್ಯಾಯದಾನದ ಹೆಸರಿನಲ್ಲಿ ಕಾನೂನುಬದ್ಧವಾಗಿ ಕೊಲ್ಲುತ್ತೇವೆ. ಪ್ರತೀಕಾರವಾಗಿ ಅವರು ಸಾವಿರಾರು ಅಮಾಯಕರನ್ನು ಕೊಲ್ಲುತ್ತಾರೆ. ಪ್ರತೀಕಾರವಾಗಿ ಮತ್ತೆ ನಾವು ಕೊಲ್ಲುತ್ತೇವೆ. ಈ ವರ್ತುಲ ತುಂಡರಿಯುವುದು ಯಾವಾಗ? ಆ ವರ್ತುಲವನ್ನು ಎಲ್ಲಾದರೂ ತುಂಡರಿಸದಿದ್ದರೆ ಮತ್ತು ಇದು ಹೀಗೆಯೇ ಮುಂದುವರಿಯುತ್ತಾ ಹೋದರೆ ನಮಗೂ ಉಗ್ರಗಾಮಿಗಳಿಗೂ, ನಾಗರಿಕತೆಗೂ ಅನಾಗರಿಕತೆಗೂ ಏನು ವ್ಯತ್ಯಾಸವಿದ್ದಂತಾಯಿತು? ಈ ನಡುವೆ ಸಾಯುವವರೆಲ್ಲರೂ ಈ ಸಂಘರ್ಷಕ್ಕೆ ಏನೇನೂ ಸಂಬಂಧವಿಲ್ಲದ ಅಮಾಯಕರು ಎನ್ನುವುದನ್ನು ಮರೆಯದಿರೋಣ.

ಈ ಎಲ್ಲ ಹಿನ್ನೆಲೆಯಲ್ಲಿ ನೋಡುವಾಗ, ಸುಧಾರಣೆಗಿಂತಲೂ ಪ್ರತೀಕಾರವೇ ಶಿಕ್ಷೆಯ ಉದ್ದೇಶ ಎಂಬುದು ಪದೇ ಪದೇ ಸಾಬೀತಾಗುತ್ತಿರುವ ಹಿನ್ನಲೆಯಲ್ಲಿ ದೇಶದ ಅಪರಾಧಿಕ ನ್ಯಾಯ ಸ್ವರೂಪವನ್ನು ಆಮೂಲಾಗ್ರವಾಗಿ ಪರಿಷ್ಕರಿಸುವ ಬಗ್ಗೆ ಯೋಚಿಸಲು ಕಾಲ ಪಕ್ವವಾಗಿದೆ ಎನಿಸುತ್ತಿಲ್ಲವೇ?

ಮೈಸೂರು ಲೈಬ್ರರಿಯ 'ನೂರು' ಹೆಜ್ಜೆಯ ನೆನಪು



ಆಗಸ್ಟ್ 12 ರಂದು ಮೈಸೂರಿನಲ್ಲಿ ಒಂದು ಅರ್ಥಪೂರ್ಣ ಸಮಾರಂಭ ಜರುಗಲಿದೆ. ಅಂದು ರಾಬಿನ್‌ಸನ್ ಕ್ರೂಸೊ, ಶೇಕ್ಸ್‌ಪಿಯರ್, ಡಾನಿಯಲ್ ಡಿಫೊ, ಎಡ್ವರ್ಡ್ ಮಾರನ್, ಅಲೆಕ್ಸಾಂಡರ್ ಬೀಟ್ಸ್‌ರಂತಹ ಘಟಾನುಘಟಿ ಆಂಗ್ಲ ಬರಹಗಾರರು, ಕುವೆಂಪು-ಬೇಂದ್ರೆ-ಮಾಸ್ತಿ- ಬಿಎಂಶ್ರೀಯಂತಹ ಕನ್ನಡದ ಕಣ್ಮಣಿಗಳು ಒಂದೇಕಡೆ ಕಲೆತು ನಲಿಯಲಿದ್ದಾರೆ! ಭೌತಿಕವಾಗಿ ಬದುಕಿರದ ಇವರೆಲ್ಲ ಒಂದೆಡೆ ಕಲೆಯುವುದೆಂದರೆ, ನಂಬಲಿಕ್ಕೆ ಕಷ್ಟ ಆಗಬಹುದಲ್ಲವೆ?

ಒಬ್ಬ ವ್ಯಕ್ತಿ ತನ್ನ ದೇಹದ ಹೊರತಾಗಿಯೂ ಇಲ್ಲಿ ಜೀವಿಸಬಲ್ಲ; ತನ್ನ ಅನುಪಸ್ಥಿತಿಯಲ್ಲೂ ಧ್ವನಿಗಿಂತ ಸ್ಪಷ್ಟವಾಗಿ ಮತ್ತೊಬ್ಬರೊಂದಿಗೆ ಸಂವಹಿಸಬಲ್ಲ, ಅದು ಸಾಧ್ಯವಾಗುವುದು ಆತನ ಕೃತಿಗಳ ಮೂಲಕ. ಶೇಕ್ಸ್‌ಪಿಯರ್ ಇಲ್ಲವಾಗಿ ನೂರಾರು ವರ್ಷಗಳೇ ಗತಿಸಿದರು ಅವನ ಕೃತಿಗಳು ಈಗಲೂ ಅವನನ್ನು ನಮ್ಮ ನಡುವೆ ಜೀವಂತವಾಗಿರಿಸಿವೆ. 'ನೆನಪಿನ ದೋಣಿ'ಯಲ್ಲಿ ಕುಳಿತು ಯಾನ ಆರಂಭಿಸುತ್ತಿದ್ದಂತೆಯೇ ಕುವೆಂಪು ನಮ್ಮೊಟ್ಟಿಗೆ ಕಲೆತು ತಮ್ಮ ಬದುಕನ್ನು ತೆರೆದಿಡುತ್ತಾ ಸಾಗುತ್ತಾರೆ. ಪುಸ್ತಕಗಳ ಅಂತಃಶಕ್ತಿಯೇ ಅಂತದ್ದು. ಒಂದೊಂದು ಪುಸ್ತಕವೂ ಒಂದೊಂದು ಲೋಕವನ್ನು ನಮ್ಮ ಮುಂದೆ ಕಟ್ಟಿಕೊಡುತ್ತದೆ. ಇನ್ನು, ಅಂತಹ ಸಹಸ್ರಾರು ಪುಸ್ತಕಗಳನ್ನು ತನ್ನ ಒಡಲೊಳಗಿಟ್ಟುಕೊಂಡು ಓದುಗ ಮನಸ್ಸನ್ನು ತಣಿಸುವ 'ಗ್ರಂಥಾಲಯ'ವೆಂಬ ಸಾಗರದ ದಿವ್ಯಾನುಭವ ಎಂಥದ್ದಿರಬೇಡ ಅಲ್ಲವೆ. ಆಗಸ್ಟ್ 12ರಂದು ಜರುಗಲಿರುವುದೂ ಅದೇ ಗ್ರಂಥಾಲಯಕ್ಕೆ ಸಂಬಂಧಿಸಿದ ಒಂದು ಕಾರ್ಯಕ್ರಮ.

ಮೈಸೂರಿನಲ್ಲಿರುವ ಕೃಷ್ಣರಾಜ ಆಸ್ಪತ್ರೆಯ ಎದುರಿಗಿರುವ ಕೆಂಪು ಕಟ್ಟಡ ನಗರ ಕೇಂದ್ರ ಗ್ರಂಥಾಲಯಕ್ಕೆ ಇಲ್ಲಿಗೆ ಸರಿಯಾಗಿ ನೂರು ವರ್ಷ ತುಂಬಿದೆ. ಅಂದು ನಡೆಯಲಿರುವುದು ಅದರ ಶತಮಾನೋತ್ಸವ ಸಮಾರಂಭ. 1915 ಅಕ್ಟೋಬರ್ 10 ರಂದು ಜನ್ಮತಳೆದ ಈ ಗ್ರಂಥಾಲಯ ಸುಮಾರು 11,20,000ಕ್ಕೂ ಹೆಚ್ಚು ಅತ್ಯಮೂಲ್ಯ ಪುಸ್ತಕಗಳಿಗೆ ಆಶ್ರಯನೀಡಿ, ಓದುಗರಿಗೆ ಉಣಿಸುತ್ತಲೇ ಬರುತ್ತಿದೆ. ತನ್ನ ಈ ನೂರು ವರ್ಷಧ ಹಾದಿಯಲ್ಲಿ ಅದು ಹಾದುಬಂದ ಪುಟ್ಟ ಪರಿಚಯ ಇಲ್ಲಿದೆ.

ಮೈಸೂರು ನಗರ ಕರ್ನಾಟಕದ ಸಾಂಸ್ಕೃತಿಕ ನಗರಿಯಾಗಿ ಹೆಸರು ಪಡೆದಂತಹುದು. ಸಾಹಿತಿಗಳು, ವಿದ್ವಾಂಸರು, ಕಲಾವಿದರು, ಸಂಗೀತಜ್ಞರ ಮೇಳೈಸುವಿಕೆಯಿಂದಾಗಿ ಜ್ಞಾನದ ಹೊಳೆಯಿಂದ ತೊಯ್ದಂತಹ ನಗರಿ. ಅಂತಹ ನಗರಿಗೆ ಒಂದು ಸಮೃದ್ಧ ಗ್ರಂಥಾಲಯದ ಕನಸು ಕಂಡವರು ಆಗ ಮಹಾರಾಜಾ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಬಿ.ಎಂ. ಶ್ರೀಕಂಠಯ್ಯನವರು. ಅವರ ಜೊತೆಗೂಡಿದ ಎಂ. ಹಿಸ್ಮತುಸೇನ್, ರಾವ್ ಬಹದ್ದೂರ್ ರಂಗ ಅಯ್ಯಂಗಾರ್, ಎಂ. ವೆಂಕಟಕೃಷ್ಣಯ್ಯ, ರೆವರೆಂಡ್ ಇ.ಡಬ್ಲ್ಯೂ ಥಾಮ್ಸನ್, ಎಚ್.ಎಸ್. ಸುಬ್ಬರಾವ್, ಬಿ.ಜಿ. ಲಕ್ಷ್ಮಣರಾವ್ ಮೊದಲಾದವರ ಕಲ್ಪನೆಯ ಕೂಸಾಗಿ 20.07.1914ರಂದು ಗ್ರಂಥಾಲಯದ ಪ್ರಸ್ತಾವನೆ ಸರ್ಕಾರದ ಕೈಸೇರಿತ್ತು, ಇದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್‌ರ ಸಹಮತವೂ ಇದ್ದುದರಿಂದ ಅನುಮತಿ ದೊರೆಯುವುದೇನು ಕಷ್ಟವಾಗಲಿಲ್ಲ.


15.10.1915ರಲ್ಲಿ ಯುವರಾಜ ನರಸಿಂಹರಾಜ ಒಡೆಯರ್ ಈ ಗ್ರಂಥಾಲಯವನ್ನು ಉದ್ಘಾಟಿಸಿ ಲೋಕಾರ್ಪಣೆ ಮಾಡಿದ್ದರು. ಆರಂಭದಿಂದಲೂ ಇದರ ಏಳ್ಗೆಗೆ ವಿಶೇಷ ಆಸಕ್ತರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರು 1919 ರಿಂದ 1927ರ ಅವಧಿಯವರೆಗೆ ಗ್ರಂಥಾಲಯ ಆಡಳಿತ ಸಮಿತಿಯ ಕಾರ್ಯದರ್ಶಿಯಾಗಿದ್ದ ಸಮಯದಲ್ಲಿ [illegible] ಅಲ್ಲಿಯವರೆಗೆ [illegible], ಗೋಡೆಗಳಿಗೆ ಮಾತ್ರ ಸೀಮಿತವಾಗಿದ್ದ ಪರಂಪರೆಯನ್ನು ಮುರಿಯುವುದಕ್ಕೋಸ್ಕರ 'ಲೇಡಿಸ್ ಮ್ಯಾನೇಜಿಂಗ್ ಕಮಿಟಿ'ಯನ್ನು ರಚಿಸಿದ ಬಿ.ಎಂ.ಶ್ರೀ. ಮಹಿಳೆಯರೂ ಗ್ರಂಥಾಲಯಕ್ಕೆ ಹರಿದುಬರುವಂತೆ ಹುರಿದುಂಬಿಸಿದ್ದರು. ಇನ್ನು ಈ ಗ್ರಂಥಾಲಯದ ಅಭ್ಯುದಯದಲ್ಲಿ ನಮ್ಮ ಮಾಜಿ ರಾಷ್ಟ್ರಪತಿ ಡಾ॥ ಎಸ್. ರಾಧಾಕೃಷ್ಣನ್‌ರವರ ಕೊಡುಗೆಯೂ ಅಪಾರ. ಮಹಾರಾಜ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಅವರು ಗ್ರಂಥಾಲಯದ ಸದಸ್ಯರಾಗುವ ಮೂಲಕ ಅದರ ಏಳುಬೀಳಿನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಅಂದಿನ ಕಾಲಘಟ್ಟಕ್ಕೆ ತಕ್ಕಂತೆ ಈ ಗ್ರಂಥಾಲಯದ ಸದಸ್ಯತ್ವ ಸ್ವರೂಪವೂ ವಿಭಿನ್ನವಾಗಿತ್ತು. ಎಲ್ಲರಿಗೂ ಸದಸ್ಯರಾಗುವ ಮುಕ್ತ ಅವಕಾಶ ಇತ್ತಾದರು ಅವುಗಳನ್ನು ಎ, ಬಿ ಮತ್ತು ಸಿ ಎಂಬ ಮೂರು ಶ್ರೇಣಿಗಳಾಗಿ ವಿಂಗಡಿಸಲಾಗಿತ್ತು. ದರ್ಜೆಗೆ ತಕ್ಕಂತೆ ಶುಲ್ಕ, ಪ್ರವೇಶಧನ ಮತ್ತು ಸೌಲಭ್ಯಗಳೂ ನಿರ್ಧರಿತವಾಗುತ್ತಿದ್ದವು. ಯಾರಿಗೆ ಯಾವ ಶ್ರೇಣಿ ನೀಡಬೇಕೆಂಬ ವಿಚಾರ ಅವರ ಘನತೆಗೆ ತಕ್ಕಂತಿತ್ತು. ಗ್ರಂಥಾಲಯದ ವಿಶೇಷ ಓದುವ ಕೋಣೆ ಎ ಮತ್ತು ಬಿ ವರ್ಗದವರಿಗೆ ಮಾತ್ರ ಮೀಸಲಾಗಿತ್ತು. ಸಿ ದರ್ಜೆಯ ಸದಸ್ಯರಿಗೆ ಆ ಕೋಣೆಗಳಿಗೆ ನಿಷೇಧವಿತ್ತು. ಆಗಿನ ಸಂದರ್ಭಕ್ಕೆ ಈ ಗ್ರಂಥಾಲಯದ ಪ್ರತಿಷ್ಠೆ ಯಾವ ಮಟ್ಟದ್ದಾಗಿತ್ತೆಂದರೆ, ಅದರ ಸದಸ್ಯತ್ವ ಪಡೆಯುವುದೇ ಒಂದು ಹೆಮ್ಮೆಯ ಸಂಗತಿಯಾಗಿತ್ತು. ಇನ್ನು ಎ ಮತ್ತು ಬಿ ದರ್ಜೆಯ ಸದಸ್ಯರೆಂದರೆ ಇವತ್ತಿನ ದುಬಾರಿ ಕ್ಲಬ್‌ಗಳ ಸದಸ್ಯರಿಗಿದ್ದಷ್ಟೇ ಗೌರವಿರುತ್ತಿತ್ತಂತೆ.


ಗ್ರಂಥಾಲಯದ ಆಡಳಿತವೂ ಅಷ್ಟೇ ಅಚ್ಚುಕಟ್ಟಾಗಿತ್ತು. ಸಂಸ್ಥೆಯ ಸಂಪೂರ್ಣ ಉಸ್ತುವಾರಿ ನೋಡಿಕೊಳ್ಳಲು ಹದಿನೈದು ಸದಸ್ಯರ ಒಂದು ಸಮಿತಿಯನ್ನು ರಚಿಸಲಾಗುತ್ತಿತ್ತು. ಈ ಹದಿನೈದು ಜನರಲ್ಲಿ ಏಳು ಜನರನ್ನು ವರ್ಷಕ್ಕೊಮ್ಮೆ ಗ್ರಂಥಾಲಯ ಚಂದಾದಾರರು ನೇಮಕ ಮಾಡುತ್ತಿದ್ದರೆ, ಉಳಿದವರನ್ನು ಚಂದಾದಾರರ ವರ್ಗದಿಂದಲೇ ಸರ್ಕಾರ ನೇಮಕ ಮಾಡುತ್ತಿತ್ತು. ಈ ಸಮಿತಿಗೆ ಅಧ್ಯಕ್ಷ ಯಾರಾಗಬೇಕೆನ್ನುವುದನ್ನು ಸರ್ಕಾರವೇ ನಿರ್ಧರಿಸಿದರೆ, ಕಾರ್ಯದರ್ಶಿಯನ್ನು ಮಾತ್ರ ಸಾಮಾನ್ಯ ಸಮಿತಿಯಲ್ಲಿ ಸದಸ್ಯರೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈ ಸಮಿತಿಯ ಕಾರ್ಯಭಾರವನ್ನು ತಗ್ಗಿಸಿ, ದೈನಂದಿನ ಕಾರ್ಯಗಳ ಸುಗಮ ನಿರ್ವಹಣೆಯನ್ನು ನೋಡಿಕೊಳ್ಳುವಂತೆ ಒಂದು ಉಪ ಸಮಿತಿಯನ್ನೂ ರಚಿಸಲಾಗುತ್ತಿತ್ತು. ಈ ಎಲ್ಲಾ ಸಮಿತಿಗಳನ್ನು ನಿಯಂತ್ರಿಸುವ ಹಕ್ಕು ಸರ್ಕಾರದ ಕೈಯಲ್ಲಿ ಇರುತ್ತಿತ್ತು.

ಇವತ್ತಿಗೂ ಈ ಗ್ರಂಥಾಲಯದಲ್ಲಿ ಸುಮಾರು 18 ಮತ್ತು 19ನೇ ಶತಮಾನದಲ್ಲಿ ರಚಿಸಲಾದ ಐತಿಹಾಸಿಕ ಮಹತ್ವದ, ವೈಜ್ಞಾನಿಕ ಹಿನ್ನೆಲೆಯ ಅಪರೂಪದ ಅತ್ಯಮೂಲ್ಯ ಕೃತಿಗಳ ಸಂಗ್ರಹವಿದೆ. ಅವುಗಳಲ್ಲಿ 1794ರಲ್ಲಿ ಎಡ್ವರ್ಡ್ ಮಾರನ್‌ನಿಂದ ರಚಿಸಲ್ಪಟ್ಟ 'ನೆರೇಟಿವ್ ಎಕ್ಸ್‌ಪ್ಲನೇಟರಿ ಆಫ್ ದ ಆಪರೇಷನ್ ಆಫ್ ವಾರ್', ಅಲೆಕ್ಸಾಂಡರ್ ಬೀಟ್ಸನ್‌ನಿಂದ 1800ರಲ್ಲಿ ರಚಿಸಲ್ಪಟ್ಟ 'ವಾರ್ ವಿತ್ ಟಿಪ್ಪು ಸುಲ್ತಾನ್', 1818ರಲ್ಲಿ ಬರೆಯಲ್ಪಟ್ಟ 'ದಿ ಡಿಸ್‌ಪ್ಯಾಚರ್ ಆಫ್ ಮಾರ್ಷಲ್ ದಿ ಡ್ಯೂಕ್ ಆಫ್ ವೆಲ್ಲಿಂಗ್ಟನ್', 1865ರಲ್ಲಿ ರಚನೆಗೊಂಡ ಎಲ್.ಡಬ್ಲ್ಯು. ಬೌರಿಂಗ್‌ರವರ 'ಹೈದರಾಲಿ ಅಂಡ್ ಟಿಪ್ಪು ಸುಲ್ತಾನ್', 'ಹೋಲಿ ಬೈಬಲ್' ಪ್ರಮುಖವಾದವು. ಸಂಶೋಧಕರಿಗೆ, ಆಸಕ್ತ ಓದುಗರಿಗೆ ಉಪಯೋಗವಾಗಬಲ್ಲ ಇಂತಹ ನೂರಾರು ಅಮೂಲ್ಯ ಕೃತಿಗಳ ಸಂಗ್ರಹವೇ ಇಲ್ಲಿನ ರ್‍ಯಾಕ್‌ನಲ್ಲಿ ಅಡಗಿದೆ.

ಈ ಗ್ರಂಥಾಲಯದ ಗರಿಮೆಯನ್ನು ಸ್ವತಃ ಕುವೆಂಪು ರವರೇ ತಮ್ಮ ನೆನಪಿನ ದೋಣಿಯಲ್ಲಿ ದಾಖಲಿಸಿದ್ದಾರೆ. ಅವರು ಓದಲೆಂದು ಮೈಸೂರಿಗೆ ಬಂದಾಗ, ಅವರ ಒಂಟಿತನವನ್ನು ತೊಡೆದು ಹಾಕಿದ್ದುದೇ ಈ ಗ್ರಂಥಾಲಯ. ಅವರ ಜ್ಞಾನದ, ಓದಿನ ದಾಹವನ್ನು ಇಂಗಿಸಿದ ನಗರ ಕೇಂದ್ರ ಗ್ರಂಥಾಲಯದೊಂದಿಗಿನ ತನ್ನ ಒಡನಾಟವನ್ನು ಅವರು ಹೀಗೆ ಸ್ಮರಿಸಿಕೊಂಡಿದ್ದಾರೆ, 'ಕೃತಿ ರಾಬಿನ್‌ಸನ್ ಕ್ರೂಸೊ, ಕೃತಿಕಾರ ಡಾನಿಯಲ್ ದೀಫೊ, ಆ ಪುಸ್ತಕ ಎಲ್ಲಿ ಸಿಗುತ್ತದೆ? ನನ್ನ ಮಿತ್ರರು ಪಬ್ಲಿಕ್ ಲೈಬ್ರರಿಯಲ್ಲಿ ದೊರೆಯಬಹುದು ಎಂದರು. ಹಳ್ಳಿಯಿಂದ ಬಂದಿದ್ದ ನನಗೆ ದೊಡ್ಡ ಕಟ್ಟಡಗಳಿಗೆ ಪ್ರವೇಶಿಸುವುದೆಂದರೆ ದಿಗಿಲು. ಕೃಷ್ಣರಾಜೇಂದ್ರ ಆಸ್ಪತ್ರೆಗೆ ಎದುರಿದ್ದ ದೊಡ್ಡ ಕಟ್ಟಡದ ಉಪ್ಪರಿಗೆಗೆ ನನ್ನನ್ನು ಕರೆದೊಯ್ದರು. ಎದುರಿನ ವಿಭಾಗದಲ್ಲಿ ಸ್ಟ್ಯಾಂಡ್‌ಗಳ ಮುಂದೆ ನಿಂತು ಪತ್ರಿಕೆಗಳನ್ನು ಓದುತ್ತಿದ್ದರು ಕೆಲವರು. ಮತ್ತೆ ಕೆಲವರು ಅಲ್ಲಿಯೆ ಬಳಿಯಲ್ಲಿ ಹಾಕಿದ್ದ ದೊಡ್ಡ ಮೇಜಿನ ಸುತ್ತ ಇದ್ದ ಕುರ್ಚಿಗಳ ಮೇಲೆ ಕುಳಿತು ಮಾಸಪತ್ರಿಕೆಗಳನ್ನೋದುತ್ತಿದ್ದರು. ಅವರನ್ನೆಲ್ಲ ಹಾಯ್ದು ಒಳಗೆ ಹೋದೆವು. ನಾನು ಬೆರಗು ಬಡಿದಂತಾಗಿ ನಿಂತೆ, ಉನ್ನತವಾದ ಬೀರುಗಳಲ್ಲಿ ಕನ್ನಡಿ ಬಾಗಿಲುಗಳ ಹಿಂದೆ ಸಾಲ್ಗೊಂಡು ನಿಂತಿದ್ದ ಗ್ರಂಥರಾಶಿಗಳ ಮುಂದೆ! ಆ ಗ್ರಂಥಗಳೊ ಎಂತೆಂತಹ ಬಣ್ಣದ ಕ್ಯಾಲಿಕೊ ರಟ್ಟುಗಳಿಂದ ಶೋಭಾಯಮಾನವಾಗಿ ಮನಮೋಹಿಸುತ್ತಿವೆ? ಅವುಗಳ ಹೆಸರುಗಳೋ ಚಿನ್ನದ ಅಕ್ಷರಗಳಲ್ಲಿ ರಂಜಿಸುತ್ತಿವೆ! ಇಂಗ್ಲಿಷ್ ಅಕ್ಷರಗಳು ಕವಾತುಮಾಡುವ ಸೈನಿಕರಂತೆ ಮಿಂಚುತ್ತಿವೆ. **The Poetical works of Tennyson! The Dramas of Shakespeare! Milton`s Paradise Lost!** ಇತ್ಯಾದಿ, ಇತ್ಯಾದಿ, ಇತ್ಯಾದಿ, ಬುಡದಿಂದ ನೆತ್ತಿಯವರೆಗೆ, ನೋಡಿದಷ್ಟೂ ಸಾಲದು; ನೋಡಿದಷ್ಟೂ ಕಣ್ಣು ತಣಿಯದು. ವಿಪುಲೈಶ್ವರ್ಯಮಯಿಯಾದ ಸಾಕ್ಷಾತ್ ತಾಯಿ ಸರಸ್ವತಿದೇವಿಯೆ, ಸೆರಗು ಓಸರಿಸಿ, ಸ್ವರ್ಣ ಕಲಶಸದೃಶಗಳಾದ ತನ್ನ ದುಗ್ಧಪೀನ ಪಯೋಧರಗಳನ್ನು ತನ್ನ ಮುಗ್ಧ ಕವಿಕಂದನ ಮುಂದೆ ಚಾಚಿ ನಿಂತಂತಿತ್ತು, "ಬಾ ಪೀಯುಷ ಪಾನಗೈ!" ಎಂದು'.



ಕುವೆಂಪುರವರು ದೀರ್ಘಕಾಲ ಈ ಸಾರ್ವಜನಿಕ ಗ್ರಂಥಾಲಯದೊಂದಿಗೆ ಒಡನಾಟವನ್ನು ಉಳಿಸಿಕೊಂಡಿದ್ದರು. 1965ರಲ್ಲಿ ಕರ್ನಾಟಕ ಸರ್ಕಾರದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಸ್ತಿತ್ವಕ್ಕೆ ಬಂದ ನಂತರ ಇದನ್ನು ಮೈಸೂರು ಪಾಲಿಕೆಯಿಂದ ಇಲಾಖೆಯ ಸುಪರ್ದಿಗೆ ಒಪ್ಪಿಸಲಾಯಿತು. ಮೈಸೂರಿನ ಬಹುಪಾಲು ಕಟ್ಟಡಗಳಂತೆಯೇ ಇದು ಕೂಡಾ ನೂರು ವರ್ಷಗಳ ನಂತರವೂ ತನ್ನ ಪಾರಂಪರಿಕ ಘನತೆ ಮತ್ತು ಸೌಂದರ್ಯವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ರಾಜ್ಯ ಗ್ರಂಥಾಲಯ ಪ್ರಭಾರ ನಿರ್ದೇಶಕ ಹೊಸಮನೆ ಮತ್ತು ಮೈಸೂರು ವಿಭಾಗೀಯ ಗ್ರಂಥಾಲಯ ಉಪ ನಿರ್ದೇಶಕ ಮಂಜುನಾಥ್, ಈ ಇಬ್ಬರೂ ಶತಮಾನೋತ್ಸವದ ಈ ಸಂದರ್ಭದಲ್ಲಿ ಗ್ರಂಥಾಲಯಕ್ಕೆ ಮತ್ತಷ್ಟು ಪಾರಂಪರಿಕ ಮೆರುಗು ನೀಡುವ ಕಾರ್ಯವನ್ನು ಮುತುವರ್ಜಿಯಿಂದ ಮುನ್ನಡೆಸುತ್ತಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕ ಗ್ರಂಥಾಲಯ ನಿಧಿಯಿಂದ ಸುಮಾರು 40 ಲಕ್ಷ ವೆಚ್ಚದಲ್ಲಿ ಗ್ರಂಥಾಲಯದ ಒಳಾಂಗಣದ ಸಂರಚನೆಯನ್ನು ಪಾರಂಪರಿಕ ಶೈಲಿಗೊಳಿಸಲು ಮರದ ಪೀಠೋಪಕರಣಗಳು, ಒಳಾಂಗಣ ವಿನ್ಯಾಸಕ್ಕೆ ಕಾರ್ಯಯೋಜನೆ ಸಿದ್ಧವಾಗಿದ್ದು ಗ್ರಂಥಾಲಯಕ್ಕೆ ಆಟೋಮೇಷನ್, ಸಿಸಿ ಟಿವಿ ಅಳವಡಿಕೆ, ಬಯೋಮೆಟ್ರಿಕ್ ಸಿಸ್ಟಂ ಮೊದಲಾದ ತಂತ್ರಜ್ಞಾನ ಅಳವಡಿಕೆಯ ಸುಮಾರು 30 ಲಕ್ಷದ ಪ್ರಸ್ತಾಪಕ್ಕೂ ಒಪ್ಪಿಗೆ ದೊರೆತಿದೆ. ಅಲ್ಲದೇ ತಮ್ಮ 'ನೆನಪಿನ ದೋಣಿ'ಯಲ್ಲಿ ಕುವೆಂಪುರವರು ದಾಖಲಿಸಿರುವಂತೆ ಅವರು ಲೈಬ್ರರಿಯ ಹೆಚ್ಚು ಜನಸಂದಣಿ ಇರದ [illegible] ತಮ್ಮ ಓದಿಗಾಗಿ ಕಾಯಂ ಮಾಡಿಕೊಂಡಿದ್ದರು. ಅದನು ಪ್ರತ್ಯೇಕ ಕೋಣೆಯಾಗಿ



'ಕುವೆಂಪು ಕಾರ್ನರ್' ಎಂಬುದಾಗಿ ನಾಮಕರಣ ಮಾಡಿ, ಅಲ್ಲಿ ಕುವೆಂಪುರವರಿಗೆ ಸಂಬಂಧಿಸಿದ ಕೃತಿಗಳನ್ನು ಪೇರಿಸುವ ಮತ್ತು ಅವರ ಹುಟ್ಟೂರು ಕುಪ್ಪಳಿಯನ್ನು ಪ್ರತಿಫಲಿಸುವಂತಹ ಕಲಾಕೃತಿಗಳಿಂದ ಅಲಂಕರಿಸುವ ಕಾರ್ಯವೂ ನಡೆಯುತ್ತಿದೆ.

ಮೈಸೂರು ನಗರ ಪಾಲಿಕೆಯು ಬಹಳ ಹಿಂದೆಯೇ ಪೀಪಲ್ಸ್ ಉದ್ಯಾನದಲ್ಲಿ ಗ್ರಂಥಾಲಯಕ್ಕೆಂದು 300x400 ಚದರಡಿ ವಿಶಾಲದ ನಿವೇಶನವನ್ನು ನೀಡಿದೆ. 1990ರಲ್ಲಿ ಗ್ರಂಥಾಲಯದ 75ನೇ ವರ್ಷದ ಅಮೃತಮಹೋತ್ಸವ ನಡೆದಾಗಲೇ ಅಲ್ಲೊಂದು ಸುಸಜ್ಜಿತ ಗ್ರಂಥಾಲಯ ನಿರ್ಮಿಸಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದಿತ್ತು, ಆದರೆ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಆದರೆ ಈಗ ಸುಮಾರು ಐದು ಕೋಟಿ ವೆಚ್ಚದ ನೂತನ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ದೊರಕಿದ್ದು ಕೆಲ ದಿನಗಳಲ್ಲೇ ನಿರ್ಮಾಣ ಕಾರ್ಯ ಆರಂಭ ವಾಗುವ ನಿರೀಕ್ಷೆ ಇದೆ. ಹಾಗೇನಾದರು ಹೊಸ ಕಟ್ಟಡ ನಿರ್ಮಾಣ ಆದದ್ದೇ ಆದಲ್ಲಿ, ಈಗಿರುವ ಶತಮಾನದ ಗ್ರಂಥಾಲಯ ಕಟ್ಟಡವನ್ನು ಕುವೆಂಪು ಸ್ಮಾರಕ ಪರಾಮರ್ಶನ ಗ್ರಂಥಾಲಯ ಮಾಡುವ ಆಲೋಚನೆ ಇಲಾಖೆಯ ಮುಂದಿದೆ.

ನೂರು ವರ್ಷಗಳ ಹಿಂದೆ ಕೇವಲ ಒಂದು ಸಂಸ್ಥೆಯಾಗಿ ಆರಂಭವಾದ ಮೈಸೂರು ನಗರ ಕೇಂದ್ರ ಗ್ರಂಥಾಲಯ ಇಂದು 17 ಶಾಖೆಗಳು, 10 ಸೇವಾ ಕೇಂದ್ರಗಳು, ಐದು ವಾಚನಾಲಯಗಳಿಂದ ಸಮೃದ್ಧವಾಗಿ ಬೆಳೆದುನಿಂತಿದೆ. ತನ್ನ ನೂರು ವರ್ಷದ ಹಾದಿಯಲ್ಲಿ ಜ್ಞಾನದ ಸಾವಿರಾರು ಟಿಸಿಲುಗಳನ್ನೊಡೆಸಿರುವ ಈ ಗ್ರಂಥಾಲಯದ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಇಲಾಖೆ ಸಜ್ಜಾಗಿದೆ. ಆಗಸ್ಟ್ 12, ಗ್ರಂಥಪಾಲಕರ ದಿನಾಚರಣೆ (ಭಾರತ ಗ್ರಂಥಾಲಯ ಪಿತಾಮಹ ಡಾ॥ ಶೈಯಾಲಿ ರಾಮಾಮೃತಮ್ ರಂಗನಾಥನ್‌ರ ಜನ್ಮದಿನ) ಆಗಿರುವುದರಿಂದ ಈ ವರ್ಷದ ಆಚರಣೆಯನ್ನು ಮೈಸೂರಿನಲ್ಲೇ ಆಯೋಜಿಸುವ ಮೂಲಕ ಶತಮಾನೋತ್ಸವ ಕಾರ್ಯಕ್ರಮವನ್ನು ರಾಜ್ಯಮಟ್ಟದ ಕಾರ್ಯಕ್ರಮವನ್ನಾಗಿಸಲಾಗಿದೆ. ಅಂದು ನವೀಕರಣಗೊಂಡ ನಗರ ಕೇಂದ್ರ ಗ್ರಂಥಾಲಯ ಕಟ್ಟಡ, ಪಾರಂಪರಿಕ ಪೀಠೋಪಕರಣಗಳು, ಗ್ರಂಥಾಲಯ ಗಣಕೀಕರಣ ಯೋಜನೆಗಳ ಲೋಕಾರ್ಪಣೆಯ ಜೊತೆಜೊತೆಗೆ ಸ್ತಬ್ಧಚಿತ್ರ, ಸಾಂಸ್ಕೃತಿಕ ಕಲಾತಂಡ ಮತ್ತು ಗ್ರಂಥಪಾಲಕರುಗಳ ಮೆರವಣಿಗೆ, ಪುಸ್ತಕ ಮೇಳ/ಪುಸ್ತಕ ಪ್ರದರ್ಶನ, ಅಂತಾರಾಷ್ಟ್ರೀಯ ಗ್ರಂಥಾಲಯಗಳ ಛಾಯಾ ಚಿತ್ರ ಪ್ರದರ್ಶನ, ರಾಜ್ಯಮಟ್ಟದ ಗ್ರಂಥಪಾಲಕರ ದಿನಾಚರಣೆ ಉದ್ಘಾಟನೆ, ಮೈಸೂರು ನಗರ ಕೇಂದ್ರ ಗ್ರಂಥಾಲಯದ ಶತಮಾನೋತ್ಸವಕ್ಕೆ ಚಾಲನೆ, ಸ್ಮರಣಸಂಚಿಕೆ, ಸಾಕ್ಷ್ಯಚಿತ್ರದ ಸಿಡಿ, ಇಲಾಖೆಯ ಕಿರುಹೊತ್ತಿಗೆಗಳ ಬಿಡುಗಡೆ ಮತ್ತು ಉತ್ತಮ ಗ್ರಂಥಪಾಲಕರುಗಳಿಗೆ ಸೇವಾಪುರಸ್ಕಾರ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಸುಮಾರು 10 ಸಾವಿರ ಜನ ಭಾಗವಹಿಸುವ ನಿರೀಕ್ಷೆ ಇರುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರಾಜ್ಯ ಗ್ರಂಥಾಲಯ ಪ್ರಭಾರ ನಿರ್ದೇಶಕ ಹೊಸಮನೆ ಮತ್ತು ಮೈಸೂರು ವಿಭಾಗೀಯ ನಿರ್ದೇಶಕ ಮಂಜುನಾಥ್ ಅವರೊಟ್ಟಿಗೆ ಇತರೆ ವಿಭಾಗೀಯ ನಿರ್ದೇಶಕರಾದ ಚಂದ್ರಶೇಖರ್, ಸರಸ್ವತಿ, ಪಾರ್ವತಮ್ಮ, ದಿವಾಕರ್ ಮತ್ತು ಪುಷ್ಪಲತಾ ಮೊದಲಾದವರ ಟೀಮು ಟೊಂಕಕಟ್ಟಿ ತಯಾರಿ ನಡೆಸುತ್ತಿದೆ. ಒಟ್ಟಿನಲ್ಲಿ ಏಕಾಏಕಾಗ್ರತೆಯ ಓದಿನ ಪರಂಪರೆಯೇ ಕ್ಷೀಣಿಸುತ್ತಿರುವ ಈ ಹೊತ್ತಿನಲ್ಲಿ ಓದಿನ ಮೂಲ ನೆಲೆಗಳಾದ ಗ್ರಂಥಾಲಯಗಳ ಪ್ರಾಮುಖ್ಯತೆಯನ್ನು ಈ ನೆಪದಲ್ಲಾದರು ಪುನರ್‌ಮನನ ಮಾಡುತ್ತಿರೋದು ಸ್ವಾಗತಾರ್ಹ.

– ಗಿರೀಶ್ ತಾಳಿಕಟ್ಟೆ

ಅಂದಿನಿಂದ ಅವನು ಜಮೀನಿನ ಮೇಲೆ ಕಣ್ಣಿಟ್ಟ. ಕೊನೆಗೆ ಒಬ್ಬ ರೈತ ಸಿಕ್ಕ. ಅವನು ಒಂದು ಸಾವಿರ ಎಕರೆ ಭೂಮಿ ಖರೀದಿಸಿದ್ದ. ಇತ್ತೀಚೆಗೆ ಅವನ ಪರಿಸ್ಥಿತಿ ಹದಗೆಟ್ಟಿತ್ತು. ಈಗ ಕಷ್ಟದಲ್ಲಿ ಸಿಲುಕಿಕೊಂಡಿದ್ದರಿಂದ ಅವನು ಭೂಮಿಯನ್ನು ಕಡಿಮೆ ಬೆಲೆಗೆ ಕೊಡಲು ಸಿದ್ಧನಾದ. ದೀನಾ ಅವನೊಂದಿಗೆ ಮಾತುಕತೆ ನಡೆಸಿದ. ವ್ಯವಹಾರ ಕುದುರಿಸಲು ಮುಂದಾದ. ಆ ಮನುಷ್ಯ ಕಷ್ಟದಲ್ಲಿದ್ದ. ಹೀಗಾಗಿ ಬೆಲೆ ಕಡಿಮೆ ಮಾಡತೊಡಗಿದ. ಕಡೆಗೆ ಬೆಲೆ ಒಂದು ಸಾವಿರ ಎಂದು ನಿಗದಿಯಾಯಿತು. ಒಂದಷ್ಟು ನಗದು ಕೊಟ್ಟು ಉಳಿದಿದ್ದನ್ನು ಅನಂತರ ಕೊಡಬೇಕಾಯಿತು. ವ್ಯವಹಾರ ಕುದುರಿದಂತಾಗಿತ್ತು, ಅಷ್ಟರಲ್ಲಿ ಒಬ್ಬ ವ್ಯಾಪಾರಿ ತನ್ನ ಕುದುರೆಗಾಗಿ ಕಾಳು-ನೀರು ದೊರಕಿಸಿಕೊಳ್ಳಲು ಅವನ ಮನೆ ಮುಂದೆ ನಿಂತುಕೊಂಡ. ಅವನು ದೀನಾ ಜೊತೆ ಮಾತಿಗೆ ಮೊದಲು ಮಾಡಿದ. ತಾನು ನರ್ಮದಾ ದಡದಿಂದ ಬಂದಿರುವುದಾಗಿ ವ್ಯಾಪಾರಿ ಹೇಳಿದ. ಅಲ್ಲಿ ತಾನು 1500 ಎಕರೆ ಉತ್ಕೃಷ್ಟ ಜಮೀನನ್ನು ಕೇವಲ ಐದು ನೂರು ರೂಪಾಯಿಗೆ ಖರೀದಿಸಿರುವುದಾಗಿಯೂ ತಿಳಿಸಿದ. ಈ ಮಾತು ಕೇಳಿದ ದೀನಾ ಅವನಿಗೆ ಇನ್ನಷ್ಟು ಪ್ರಶ್ನೆ ಕೇಳಿದ.

ವ್ಯಾಪಾರಿ ಹೇಳಿದ "ಅಧಿಕಾರಿಗಳು-ಜಮೀನ್ದಾರರೊಂದಿಗೆ ಸಲಿಗೆ-ಸಂಬಂಧ ಬೆಳೆಸಲು ಚಾಣಾಕ್ಷತನ ಬೇಕು. ನೂರಕ್ಕೂ ಹೆಚ್ಚು ರೂಪಾಯಿಗಳನ್ನು ನಾನು ರೇಶ್ಮೆ ಬಟ್ಟೆ ಮತ್ತು ಕಂಬಳಿಗಳಿಗಾಗಿ ಖರ್ಚು ಮಾಡಿದ್ದೇನೆ. ನಂತರ ಮದ್ಯ ಹಣ್ಣು-ಮಿಠಾಯಿ, ಚಹದ ಸೆಟ್ ಇತ್ಯಾದಿಗಳನ್ನು ಕಾಣಿಕೆಯಾಗಿ ಕೊಟ್ಟಿದ್ದೇನೆ. ಅದರ ಪ್ರತಿಫಲವಾಗಿ ನನಗೆ ಎಕರೆ ಭೂಮಿ ಆಣೆಗಳ ಬೆಲೆಯಲ್ಲಿ ಸಿಕ್ಕಿತು."

ಇಷ್ಟು ಹೇಳಿದ ವ್ಯಾಪಾರಿ ಕಾಗದ-ಪತ್ರಗಳನ್ನು ದೀನಾ ಮುಂದೆ ಇರಿಸಿದ.

ಮತ್ತೆ "ಇಡೀ ಭೂಮಿ ನದಿ ದಡದಲ್ಲಿದೆ. ಎಲ್ಲ ಒಂದೇ ಡಾಗಿನ ಭೂಮಿ. ಅದೆಷ್ಟು ಫಲವತ್ತಾಗಿದೆಯೆಂದರೆ ಹೇಳುವುದೇ ಬೇಡ" ಎಂದ.

ದೀನಾ ಈ ವಿಷಯವಾಗಿ ಕುತೂಹಲದಿಂದ ಒಂದರ ನಂತರ ಒಂದು ಪ್ರಶ್ನೆ ಕೇಳತೊಡಗಿದ. ಮುಂದೆ ಅವನು "ಅಲ್ಲಿ ಅದೆಷ್ಟು ಜಮೀನಿದೆ. ಅದೆಷ್ಟು ಭೂಮಿ ಎಂದರೆ ನೀನು ತಿಂಗಳುಗಟ್ಟಲೆ ನಡೆದರೂ ಅದು ಕೊನೆಗೊಳ್ಳುವುದಿಲ್ಲ, ಅಲ್ಲಿಯವರು ತುಂಬ ಸರಳ ಜನ. ಕುರಿಗಳಂತಿದ್ದಾರೆ. ಜಮೀನನ್ನು ಪುಕ್ಕಟೆ ಪಡೆದುಕೊಳ್ಳಬಹುದೇನೋ ಎನ್ನುವಂತಿದೆ" ಎಂದು ತಿಳಿಸಿದ.

ಸರಿ, ಇದು ಸೂಕ್ತ ವಿಚಾರವೆಂದು ದೀನಾ ಭಾವಿಸಿದ. ಸಾವಿರ ಎಕರೆಗಾಗಿ ನಾನು ಏಕೆ ಸಾವಿರ ರೂಪಾಯಿ ಹಾಕಬೇಕು?

ಅಲ್ಲಿ ಹೋಗಿ ಇಷ್ಟೊಂದು ಹಣವನ್ನು ಜಮೀನಿನಲ್ಲಿ ತೊಡಗಿಸಿದೆನೆಂದರೆ ಇಲ್ಲಿಗಿಂತ ಎಷ್ಟೋ ಪಟ್ಟು ಭೂಮಿ ಸಿಕ್ಕಂತಾಗುವುದು. ಆ ಸ್ಥಳಕ್ಕೆ ಹೇಗೆ ತಲುಪಬೇಕೆಂದು ದೀನಾ ಮಾಹಿತಿ ಪಡೆದ. ವ್ಯಾಪಾರಿ ಎಲ್ಲ ತಿಳಿಸಿದ. ಅವನು ಹೊರಟುಹೋಗುತ್ತಲೇ ದೀನಾ ಸಹ ತನ್ನ ಸಿದ್ಧತೆ ಮಾಡಿಕೊಳ್ಳತೊಡಗಿದ. ಮನೆ ನೋಡಿಕೊಳ್ಳು ಎಂದು ಹೆಂಡತಿಗೆ ಹೇಳಿದ. ಜೊತೆಗೆ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಪ್ರಯಾಣ ಆರಂಭಿಸಿದ. ದಾರಿ ಮಧ್ಯ ಒಂದು ಪಟ್ಟಣದಲ್ಲಿ ವಾಸ್ತವ್ಯ ಹೂಡಿದ. ವ್ಯಾಪಾರಿ ತಿಳಿಸಿದಂತೆ ಅಲ್ಲಿ ಚಹದ ಡಬ್ಬಿ, ಮದ್ಯ ಮತ್ತು ಇದೇ ತರಹದ ಇತರ ಕಾಣಿಕೆಗಳನ್ನು ಖರೀದಿಸಿದ. ನಂತರ ಇಬ್ಬರೂ ಮುಂದೆ ಸಾಗಿದರು, ಸಾಗುತ್ತಲೇ ಇದ್ದರು. ನಡೆದು ನಡೆದು ಕಡೆಗೆ ಏಳನೆಯ ದಿನ ಆ ಸ್ಥಳ ತಲುಪಿದರು. ಅಲ್ಲಿಂದ ಕೋಲ್ ಜನರ ಪ್ರದೇಶ ಆರಂಭವಾಗುತ್ತಿತ್ತು, ವ್ಯಾಪಾರಿ ಹೇಳಿದ್ದೆಲ್ಲ ಸರಿ ಎನಿಸಿತು. ನದಿ ದಡದಲ್ಲಿ ಅಪಾರ ಭೂಮಿ ಇತ್ತು, ಎಲ್ಲ ಬೀಳು ಬಿದ್ದಿತ್ತು, ಈ ಜನ ಅದನ್ನು ಉಪಯೋಗಿಸಿರಲಿಲ್ಲ, ಬಟ್ಟೆ ಇಲ್ಲವೆ ಹುಲ್ಲಿನ ಚಾಪೆಯ ಡೇರೆಯಲ್ಲಿ ವಾಸ್ತವ್ಯ ಹೂಡಿದ್ದರು, ಬೇಟೆ ಆಡುತ್ತಿದ್ದರು, ದನಕರು ಸಾಕಿಕೊಂಡಿದ್ದರು. ಹೀಗೇ ಮೋಜು ಮಾಡುತ್ತಿದ್ದರು. ಅವರಿಗೆ ರೊಟ್ಟಿ ಮಾಡುವುದೂ ಗೊತ್ತಿರಲಿಲ್ಲ, ಆಹಾರ ಧಾನ್ಯ ಬೆಳೆಯುವುದೂ ಗೊತ್ತಿರಲಿಲ್ಲ, ಹಾಲಿನಿಂದ ಮಜ್ಜಿಗೆ ಸಾರು ತಯಾರಿಸುತ್ತಿದ್ದರು, ಪನ್ನೀರ ತಯಾರಿಸುತ್ತಿದ್ದರು ಹಾಗೂ ಅದರಿಂದಲೇ ಒಂದು ಬಗೆಯ ಮದ್ಯ ತಯಾರಿಸಿಕೊಳ್ಳುತ್ತಿದ್ದರು. ಇದೆಲ್ಲ ಹೆಂಗಸರು ಮಾಡುತ್ತಿದ್ದರು. ಗಂಡಸರು ಉಣ್ಣುವುದು ಕುಡಿಯುವುದರ ಜೊತೆಗೆ ವಿಶ್ರಾಂತಿಯ ಸಮಯದಲ್ಲಿ ತನ್ಮಯರಾಗಿ ಕೊಳಲು ಊದುತ್ತಿದ್ದರು. ಆ ಜನ ಕಟ್ಟುಮಸ್ತಾಗಿದ್ದರು, ಆರೋಗ್ಯವಂತರಾಗಿದ್ದರು. ಕೆಲಸ-ಕಾರ್ಯವೆಂದರೆ ಏನೂ ಮಾಡದೆ ಕಾಲ ಕಳೆಯುತ್ತಿದ್ದರು. ತಮ್ಮನ್ನು ಬಿಟ್ಟು ಅವರಿಗೆ ಏನೂ ಗೊತ್ತಿರಲಿಲ್ಲ, ಓದುಬರಹ ಅವರಿಗೆ ಗೊತ್ತಿರಲಿಲ್ಲ, ಹಿಂದಿ ಸಹ ಅವರಿಗೆ ತಿಳಿದಿರಲಿಲ್ಲ, ಆದರೆ ತುಂಬ ಸರಳ ಸ್ವಭಾವದವರಾಗಿದ್ದರು. ದೀನಾನನ್ನು ನೋಡುತ್ತಲೇ ಅವರು ತಮ್ಮ ಡೇರೆಯಿಂದ ಹೊರಬಂದರು. ಅವನನ್ನು ನಾಲ್ಕೂ ಕಡೆಯಿಂದ ಸುತ್ತುವರಿದು ನಿಂತುಕೊಂಡರು. ಅವರಲ್ಲೊಬ್ಬ ದುಭಾಷಿ ಮೂಲಕ ತಾನು ಭೂಮಿ ಖರೀದಿಸುವುದಕ್ಕಾಗಿ ಬಂದಿದ್ದೇನೆ ಎಂದು ತಿಳಿಸಿದ. ಅವರಿಗೆ ತುಂಬ ಸಂತೋಷವಾದಂತಿತ್ತು, ಬಹಳ ಗೌರವದೊಂದಿಗೆ ಅವರು ಅವನನ್ನು ಒಂದು ಅತ್ಯುತ್ತಮ ಡೇರೆಗೆ ಕರೆದೊಯ್ದರು. ಅಲ್ಲಿ ಕಂಬಳಿ ಮೇಲೆ ಹರಡಿದ್ದ ಗಾದಿಯಲ್ಲಿ ಕೂರಿಸಿದರು. ಅವರು ಮಾತ್ರ ಕೆಳಗೆ ನಾಲ್ಕೂ ಕಡೆ ಒಬ್ಬರ ಪಕ್ಕ ಒಬ್ಬರು ಕುಳಿತುಕೊಂಡರು. ಅವರು ಅವನಿಗೆ ಕುಡಿಯಲು ಚಹ ಮತ್ತು ಸೇಂದಿ ನೀಡಿದರು. ಅವನಿಗೆ ನಾ ಮುಂದೆ ತಾ ಮುಂದೆ ಎಂದು ಆಹ್ವಾನಿಸಿದರು. ದೀನಾ ಸಹ ಕಾಣಿಕೆಗಳನ್ನು ಗಾಡಿಯಿಂದ ತಂದ. ಎಲ್ಲರಿಗೂ ಸ್ವಲ್ಪ ಸ್ವಲ್ಪ ಚಹ ಪುಡಿ ವಿತರಿಸಿದ. ಅವರು ತಮ್ಮತಮ್ಮೊಳಗೇ ಆಗಂತುಕನ ಬಗ್ಗೆ ಮಾತಾಡಿಕೊಂಡರು. ನಂತರ ದುಭಾಷಿ ಮೂಲಕ ಅತಿಥಿಗೆ ಎಲ್ಲ ತಿಳಿಸಲು ಹೇಳಿದರು.

ನಿಮ್ಮ ಆಗಮನದಿಂದ ತುಂಬ ಸಂತೋಷಗೊಂಡಿದ್ದೇವೆ ಎಂದು ಈ ಜನ ಹೇಳಬಯಸಿದ್ದಾರೆ ಎಂದು ದುಭಾಷಿ ತಿಳಿಸಿದ. ಅತಿಥಿಗೆ ನಾವು ನಮ್ಮ ಕೈಲಾದ ಮಟ್ಟಿಗೆ ಉಪಚರಿಸಬೇಕೆನ್ನುವುದು ನಮ್ಮಲ್ಲಿಯ ನಿಯಮ. ನಿಮ್ಮ ಕೃಪೆಗೆ ಕೃತಜ್ಞರಾಗಿದ್ದೇವೆ. ನಮ್ಮ ಬಳಿ ಇರುವ ಯಾವ ವಸ್ತು ನಿಮಗೆ ಇಷ್ಟವೆಂದು ಹೇಳಿದರೆ ನಾವು ಅದನ್ನೇ ಸಲ್ಲಿಸಿ ನಿಮಗೆ ಉಪಚರಿಸುತ್ತೇವೆ ಎಂದು ಅವರು ಹೇಳಿದರು.

"ನಿಮ್ಮಲ್ಲಿ ಲಭ್ಯವಿರುವ ವಸ್ತುಗಳಲ್ಲಿ ನನಗೆ ಬಹಳ ಇಷ್ಟವೆನಿಸಿದ್ದು ಇಲ್ಲಿನ ಭೂಮಿ. ನಮ್ಮಲ್ಲಿ ಜಮೀನಿನ ಅಭಾವವಿದೆ. ಅದು ಇದರಷ್ಟು ಫಲವತ್ತಾಗಿ ಸಹ ಇಲ್ಲ, ಆದರೆ ಇಲ್ಲಿ ಅದಕ್ಕೆ ಕೊರತೆಯೇನೂ ಇಲ್ಲ, ಅದು ಸಾಕಷ್ಟು ಫಲವತ್ತಾಗಿಯೂ ಇದೆ. ಇಲ್ಲಿಯಂತಹ ಜಮೀನನ್ನು ನಾನು ಬೇರೆಡೆ ಎಲ್ಲಿಯೂ ನೋಡಿಲ್ಲ" ಎಂದು ದೀನಾ ಉತ್ತರಿಸಿದ.

ದುಭಾಷಿ ದೀನಾನ ಅಭಿಪ್ರಾಯವನ್ನು ತನ್ನ ಜನರಿಗೆ ತಿಳಿಸಿದ. ಕೆಲ ಹೊತ್ತು ಅವರು ಪರಸ್ಪರ ಸಮಾಲೋಚನೆಗೆ ತೊಡಗಿದರು. ಅವರು ಏನನ್ನುತ್ತಿದ್ದಾರೆ ಎನ್ನುವುದು ದೀನಾಗಿ ಗೊತ್ತಾಗಲಿಲ್ಲ, ಆದರೆ ಅವರು ತುಂಬ ಸಂತೋಷವಾಗಿದ್ದಾರೆ ಎಂದು ಅನ್ನಿಸಿತು. ಅವರು ನಗುತ್ತಿದ್ದರು. ಜೋರಾಗಿ ಮಾತಾಡತೊಡಗಿದ್ದರು. ಅನಂತರ ಅವರು ಮೌನವಾಗಿ ಬಿಟ್ಟರು ಹಾಗೂ ಅವನನ್ನು ನೋಡತೊಡಗಿದರು.

ಕತೆ

ಮತ್ತೆ ಪರಸ್ಪರ ಮಾತಾಡಿಕೊಂಡರು. ಅವರಿಗೆ ಏನೋ ಸಮಸ್ಯೆ ಆಗಿದೆ ಎಂದು ಕಂಡುಬಂದಿತು. ಆ ಜನರಿಗೆ ಯಾವ ವಿಷಯವಾಗಿ ತೊಂದರೆ ಉಂಟಾಗಿದೆ ಎಂದು ಅವನು ಕೇಳಿದ. ಭೂಮಿ ಕೊಡುವುದರ ಕುರಿತು ಮುಖ್ಯಸ್ಥನೊಂದಿಗೆ ಇನ್ನೂ ಹೆಚ್ಚಿಗೆ ವಿಚಾರವಿಮರ್ಶೆ ಮಾಡಬೇಕು ಹಾಗೂ ಅವನ ಅನುಪಸ್ಥಿತಿಯಲ್ಲಿ ಏನಾದರೂ ಮಾಡಿಬಿಡುವುದು ಸೂಕ್ತವಲ್ಲವೆಂದು ಇವರಲ್ಲಿ ಕೆಲವರ ಅಭಿಪ್ರಾಯವಾಗಿದೆ; ಆದರೆ ಈ ವಿಷಯವಾಗಿ ಮುಖ್ಯಸ್ಥನ ಬರವಿಗಾಗಿ ಕಾಯುವುದು ಅವಶ್ಯವಿಲ್ಲ, ಇದು ಕ್ಷಣ್ಣ ವಿಷಯವೆಂದು ಇತರರು ಅಭಿಪ್ರಾಯಪಟ್ಟಿದ್ದಾರೆ ಎಂದು ದುಭಾಷಿ ಹೇಳಿದ.

ಈ ಕುರಿತು ಚರ್ಚೆ ನಡೆದಿತ್ತು, ಅಷ್ಟರಲ್ಲಿ ರೋಮಭರಿತ ದೊಡ್ಡ ಟೋಪಿ ಧರಿಸಿದ್ದ ಒಬ್ಬ ವ್ಯಕ್ತಿ ಅಲ್ಲಿಗೆ ಆಗಮಿಸಿದ. ಎಲ್ಲರೂ ಮೌನವಾಗಿ ಅವನಿಗೆ ಗೌರವ ಸೂಚಿಸಿ ಎದ್ದು ನಿಂತರು. ಇವರೇ ನಮ್ಮ ಸರ್ದಾರ ಎಂದು ದುಭಾಷಿ ಹೇಳಿದ.

ದೀನಾ ತಕ್ಷಣ ತನ್ನ ಸಾಮಾನುಗಳನ್ನು ತುಂಬಿದ್ದ ಸಂದೂಕಿನೊಳಗಿಂದ ಒಂದು ಉತ್ಕೃಷ್ಟ ವಸ್ತುಗಳ ಮೂಟೆ ಹೊರಗೆ ತೆಗೆದ. ಚಹ ಪುಡಿಯ ಒಂದು ದೊಡ್ಡ ಡಬ್ಬಿ ಮತ್ತಿತರ ವಸ್ತುಗಳನ್ನು ಸರ್ದಾರನಿಗೆ ಕಾಣಿಕೆಯಾಗಿ ನೀಡಿದ. ಸರ್ದಾರ ಉಡುಗೊರೆಯನ್ನು ಸ್ವೀಕರಿಸಿ ತನ್ನ ಆಸನದಲ್ಲಿ ವಿರಾಜಮಾನನಾದ. ಅವನು ಕುಳಿತುಕೊಂಡ ಮೇಲೆ ಕೋಲ್ ಜನ ಅವನೊಂದಿಗೆ ಏನೋ ಹೇಳತೊಡಗಿದರು. ಸರ್ದಾರ ಸ್ವಲ್ಪ ಹೊತ್ತು ಅವರ ಮಾತು ಕೇಳಿದ. ಅನಂತರ ಅವರಿಗೆ ಸುಮ್ಮನಿರುವಂತೆ ಸೂಚಿಸಿದ. ನಂತರ ದೀನಾನನ್ನುದ್ದೇಶಿಸಿ ಹಿಂದೂಸ್ತಾನಿಯಲ್ಲಿ ಹೇಳಿದ "ಈ ಸೋದರರು ಹೇಳಿದ್ದು ಸರಿ ಇದೆ. ನಿಮಗೆ ಎಷ್ಟು ಬೇಕೋ ಅಷ್ಟು ಜಮೀನು ಆಯ್ಕೆ ಮಾಡಿಕೊಳ್ಳಿರಿ. ಅದಕ್ಕೇನೂ ಕೊರತೆ ಇಲ್ಲ."

ನನಗೆ ಬೇಕಾದಷ್ಟು ಜಮೀನನ್ನು ಹೇಗೆ ಪಡೆದುಕೊಳ್ಳಲಿ ಎಂದು ದೀನಾ ಯೋಚಿಸತೊಡಗಿದ. ಕಬ್ಜಾ ಪಕ್ಕಾ ಆಗಬೇಕೆಂದರೆ ಕಾಗದಪತ್ರಗಳ ಅವಶ್ಯಕತೆ ಇದೆ. ಇಲ್ಲವಾದರೆ ಇಂದು ಇವರು ಇದು ನಿನ್ನದು ಎಂದು ಹೇಳಿದಂತೇ ಅನಂತರ ಇದನ್ನು ವಾಪಸು ಪಡೆದುಕೊಳ್ಳಲೂಬಹುದು. ಪ್ರಕಟವಾಗಿ ಅವನು ಅಂದ "ನಿಮ್ಮ ಕೃಪೆಗೆ ಕೃತಜ್ಞ, ನಿಮ್ಮ ಬಳಿ ಸಾಕಷ್ಟು ಜಮೀನಿದೆ. ನನಗೆ ಬೇಕಿರುವುದು ಸ್ವಲ್ಪ ಅಷ್ಟೇ. ಆದರೆ ನನ್ನ ಪಟ್ಟ ಜಮೀನಿನ ತುಂಡು ಯಾವುದು ಮತ್ತು ಅದು ನನ್ನದೇ ಎನ್ನುವುದರ ಬಗ್ಗೆ ನನಗೆ ಭರವಸೆ ಬೇಕು. ಜಮೀನನ್ನು ಅಳತೆ ಮಾಡಿ ನನಗೆ ನನ್ನ ತುಂಡು ಜಮೀನನ್ನು ನನ್ನ ಕಬ್ಜಾಕ್ಕೆ ಕೊಡುವುದು ಸಾಧ್ಯವಾಗಲಾರದೆ? ಬದುಕಿರುವುದು ಮತ್ತು ಸಾಯುವುದು ದೇವರ ಕೈಯಲ್ಲಿದೆ. ಜಗತ್ತಿನಲ್ಲಿ ಇದೇ ದೊಡ್ಡ ವಿಷಯವಾಗಿದೆ. ಕೃಪಾಳುವಾದ ನೀವು ಇದನ್ನು ನನಗೆ ಕೊಡುವಿರಿ, ಆದರೆ ಮುಂದೆ ನಿಮ್ಮ ಮಕ್ಕಳು ಇದನ್ನು ವಾಪಸು ಪಡೆಯಬಹುದು. ಆಗ?"

"ನೀನು ಹೇಳುವುದು ಸರಿ ಇದೆ. ನಿನ್ನ ಜಮೀನನ್ನು ನಿನ್ನ ವಶಕ್ಕೆ ಕೊಡಲಾಗುವುದು" ಎಂದ ಸರ್ದಾರ.

"ಇಲ್ಲಿ ಒಬ್ಬ ವ್ಯಾಪಾರಿ ಬಂದಿದ್ದನೆಂದು ಕೇಳಿದೆ. ಅವನಿಗೂ ನೀವು ಭೂಮಿ ಕೊಟ್ಟರಿ. ಅದಕ್ಕೆ ಪುರಾವೆಯಾಗಿ ಕಾಗದಪತ್ರ ಮಾಡಿಕೊಟ್ಟಿರಂತೆ. ಹಾಗೆಯೇ ನನಗೂ ಕಾಗದಪತ್ರ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ" ಎಂದು ದೀನಾ ಹೇಳಿದ.

ಸರ್ದಾರನಿಗೆ ಅರ್ಥವಾಯಿತು.

ಅವನೆಂದ "ಅವಶ್ಯವಾಗಿ. ಇದು ಸುಲಭವಾಗಿ ಆಗಬಲ್ಲದು. ನಮ್ಮ ಬಳಿ ಒಬ್ಬ ಮುನ್ಶಿ ಇದ್ದಾನೆ. ಪಟ್ಟಣಕ್ಕೆ ಹೋಗಿ ಮಾತುಕತೆ ಇತ್ಯರ್ಥ ಮಾಡಿಕೊಳ್ಳಬಹುದು, ನೋಂದಣಿ ಮಾಡಿಸಬಹುದು."

ದೀನಾ ಕೇಳಿದ "ಬೆಲೆ ಎಷ್ಟಾಗಬಹುದು?"

"ನಮ್ಮ ಬೆಲೆ ಒಂದೇ. ದಿನವೊಂದಕ್ಕೆ ಸಾ[illegible] ರೂಪಾಯಿ."

ದೀನಾಗೆ ಅರ್ಥವಾಗಲಿಲ್ಲ, ಅವನು ಕೇಳಿದ "ದಿ[illegible] ಲೆಕ್ಕ ಏನಿದು? ಎಷ್ಟು ಎಕರೆ ಎಂದು ಹೇಳಿರಿ."

ಸರ್ದಾರ "ಎಣಿಕೆ ಗಿಣಿಕೆ ಮಾಡುವುದು ನನ್ನಿಂದಾಗ[illegible] ನಾನಂತೂ ದಿನದ ಲೆಕ್ಕದ ಮೇಲೆ ಮಾರಾಟ ಮಾಡು[illegible] ಒಂದು ದಿನದಲ್ಲಿ ನೀನು ನಡೆದು ಎಷ್ಟು ಭೂಮಿ ಅ[illegible] ಮಾಡುವಿಯೋ ಅದು ನಿನ್ನದು. ಇಡೀ ದಿನಕ್ಕೆ ಒಂ[illegible] ಸಾವಿರ ಮಾತ್ರ ಬೆಲೆ" ಎಂದ.

ದೀನಾನಿಗೆ ದಿಗಿಲಾಯಿತು. "ಒಂದು ದಿನದಲ್ಲಿ ಸಾಕ[illegible] ಜಮೀನನ್ನು ಅಳತೆ ಮಾಡಬಹುದು" ಎಂದ.

ಸರ್ದಾರ ನಕ್ಕ. "ಸಾಧ್ಯವಿದೆ. ಅದೆಲ್ಲ ನಿನ್ನದಾಗುವುದ[illegible] ಆದರೆ ಒಂದು ಷರತ್ತು ನೀನು ಎಲ್ಲಿಂದ ನಡಿಗೆ ಆರಂಭಿ[illegible] ಮೇಲೆ ಅದೇ ದಿನ ಅದೇ ಜಾಗೆಗೆ ಬರದೇಹೋ[illegible] ಬೆಲೆ ವಸೂಲು ಆಯಿತೆಂದು ತಿಳಿಯಲಾಗುವುದು."

"ಆದರೆ ಯಾವ ಜಾಗೆಯಿಂದ ನಡಿ[illegible] ಆರಂಭಿಸಿದೆಯೆನ್ನುವುದು ನನಗೆ ತಿಳಿಯುವುದಾದ[illegible] ಹೇಗೆ?"


"ಅದೇಕೆ? ನಾವೂ ಜೊತೆಗೆ ಇರುತ್ತೇವೆ. ಎಲ್ಲಿ ನಿ[illegible] ಎನ್ನುವೆಯೋ ನಾವು ನಿಂತು ಬಿಡುತ್ತೇವೆ. ಯಾ[illegible] ಜಾಗೆಯಿಂದ ನಡಿಗೆ ಶುರು ಮಾಡುವೆಯೋ ಅಲ್ಲಿ[illegible] ಮರಳಿ ಬರಬೇಕು. ಕೈಯಲ್ಲಿ ಸಲಿಕೆ ಹಿಡಿದುಕೊಂಡಿರಬೇ[illegible] ಅವಶ್ಯವೆನಿಸಿದಲ್ಲಿ ಗುರುತು ಮಾಡು. ಒಂದೊಂ[illegible] ತಿರುವಿನಲ್ಲಿ ಒಂದು ಕುಣಿ ತೋಡು. ಅದರಲ್ಲಿ ಎತ್ತ[illegible] ಹುಲ್ಲು ಸಿಕ್ಕಿಸು. ಹಿಂದಿನಿಂದ ನಾವು ರೆಂಟೆ ಮೂ[illegible] ಒಂದು ಕುಣಿಯಿಂದ ಇನ್ನೊಂದರವರೆಗೆ ಹದ್ದನ್ನು ನಿ[illegible] ಮಾಡುತ್ತೇವೆ. ಇಡೀ ದಿನದಲ್ಲಿ ಎಷ್ಟು ದೀರ್ಘವೋ ಅ[illegible] ದೊಡ್ಡ ಸುತ್ತು ಹಾಕಬಹುದು. ಆದರೆ ಸೂ[illegible] ಮುಳುಗುವುದರೊಳಗೆ ಎಲ್ಲಿಂದ ಹೊರಡುವೆಯೋ ಅ[illegible] ಮರಳಬೇಕು. ಹೀಗೆ ನಿನಗೆ ಬೇಕೆನಿಸಿದಷ್ಟು ಜಮೀನ[illegible] ಅಳತೆ ಮಾಡಿಕೊಳ್ಳಬಹುದು."

ದೀನಾ ಹಿಗ್ಗಿದ. ಮರುದಿನ ಬೆಳಗ್ಗೆಯೇ ನಡಿ[illegible] ಆರಂಭಿಸುವುದಾಗಿ ತೀರ್ಮಾನಿಸಿದ. ನಂತರ ಒಂದ[illegible] ಹರಟೆ ಹೊಡೆದರು. ಊಟ ಮಾಡಿದರು. ಇದರ[illegible] ತಡರಾತ್ರಿಯಾಯಿತು. ಅವನಿಗೆ ಮತ್ತನೆ ಹಾಸಿಗೆ ಹಾ[illegible] ಕೊಡಲಾಯಿತು. ಉಳಿದವರೆಲ್ಲ ವಿದಾಯ ಹೇಳಿದ[illegible] ಬೆಳಕು ಹರಿಯುವ ಮೊದಲೇ ಬರುವುದಾಗಿಯ[illegible] ಸೂರ್ಯೋದಯಕ್ಕೆ ಮೊದಲು ನಿಗದಿತ ಸ[illegible] ತಲುಪಬಹುದೆಂದೂ ತಿಳಿಸಿದರು.

ದೀನಾ ಮೆತ್ತನೆ ಹಾಸಿಗೆಯಲ್ಲೇನೋ ಮಲಗಿದ್ದ, ಆ[illegible] ಅವನಿಗೆ ನಿದ್ರೆಯೇ ಬರಲಿಲ್ಲ. ಅವನು ನಿರಂತರ ಭೂ[illegible] ಕುರಿತೇ ಯೋಚಿಸತೊಡಗಿದ. "ನಡೆದು ನಾನು ಅದೆ[illegible] ಭೂಮಿ ಅಳೆಯುವೆನೋ ತಿಳಿಯದು. ಒಂದು ದಿನ[illegible] ಕನಿಷ್ಠ ಮೂವತ್ತೈದು ಮೈಲು ನಡೆಯಬಲ್ಲೆ. ಈಗಂ[illegible] ಹಗಲು ದೊಡ್ಡದು. ಮೂವತ್ತೈದು ಮೈಲು! ಅಷ್ಟ[illegible] ಎಷ್ಟು ಭೂಮಿ ನನ್ನದಾಗುವುದೋ ಅದರೊಳಗಿಂದ ಕ[illegible]

ಮನುಷ್ಯನಿಗೆ ಎಷ್ಟು ಭೂಮಿ ಬೇಕು?

ಭಾಗ 2



...ಮ ಮಾರಿ ಬಿಡುವೆ ಇಲ್ಲವೆ ಗೇಣಿಗೆ ಕೊಡುವೆ. ...ಜಮೀನಿನಲ್ಲಿ ಫಾರ್ಮ್ ನಿರ್ಮಿಸುವೆ. ಸದ್ಯಕ್ಕೆ ಎರಡು ...ಎತ್ತು ಸಾಕಾಗಬಹುದು. ಇಬ್ಬರು ಆಳುಗಳನ್ನು ...ಇಟ್ಟುಕೊಳ್ಳಬೇಕಾಗುವುದು. ಕನಿಷ್ಠ ಒಂದೂವರೆ ...ರು ಎಕರೆ ಸಾಗುವಳಿ ಮಾಡಿ ಉಳಿದದ್ದನ್ನು ...ಹುಲ್ಲುಗಾವಲಾಗಿ ಇರಿಸಬಹುದು."

...ರಾತ್ರಿ ಇಡೀ ಒರಗಿಕೊಂಡು ಭೂಮಿ ಆಕಾಶವನ್ನು ...ಒಗ್ಗೂಡಿಸಲು ಪ್ರಯತ್ನಿಸತೊಡಗಿದ. ತಡ ರಾತ್ರಿ ...ಸ್ವಲ್ಪ ನಿದ್ರೆ ಬಂದಂತಾಯಿತು. ಹೊರಗೆ ಅದ್ಯಾರೋ ...ಬಿದ್ದು ನಗುವ ಸದ್ದು ಕಿವಿ ಮೇಲೆ ಬಿದ್ದಿತು. ...ರೋ ಎಂದು ಆಶ್ಚರ್ಯವೆನಿಸಿತು. ಎದ್ದು ಹೊರಗೆ ...ಮ ನೋಡಿದರೆ ಕೋಲ್ ಜನರ ಮುಖ್ಯಸ್ಥ ಹೊರಗಡೆ ...ಆಗಿ ನಗುತ್ತಿದ್ದ ನಕ್ಕು ನಕ್ಕು ಹೊಟ್ಟೆ ಹಿಡಿದುಕೊಂಡಿದ್ದ ...ಹೋಗಿ "ಹೀಗೇಕೆ ನಗುತ್ತಿದ್ದೀರಿ?" ಎಂದು ಕೇಳಿದ. ...ಇನ್ನೂ ಕೇಳಿಯೇ ಇರಲಿಲ್ಲ, ಅಷ್ಟರಲ್ಲಿ ಅಲ್ಲಿ ...ಇದ್ದಿರಲಿಲ್ಲವೆಂದು ಗೊತ್ತಾಯಿತು. ಬದಲಾಗಿ ...ವ್ಯಾಪಾರಿ ಅಲ್ಲಿ ಕುಳಿತಿದ್ದ. ಕೆಲ ದಿನಗಳ ಹಿಂದೆ ಅದೇ ...ಪಾರಿ ತನ್ನ ದೇಶಕ್ಕೆ ಬಂದಿದ್ದ ಹಾಗೂ ಈ ಜಮೀನಿನ ...ಹೇಳಿದ್ದ. ಇಲ್ಲಿ ನೀನು ಹೇಗಿರುವೆ? ಯಾವಾಗ ...ವೆ ಎಂದು ಕೇಳಬೇಕೆನಿಸಿತು. ಆದರೆ ಅವನು ...ಪಾರಿಯೂ ಅಲ್ಲ, ಬದಲಾಗಿ ಅದೇ ಹಳೆಯ ರೈತನಾಗಿದ್ದ ...ವುದು ಗೊತ್ತಾಯಿತು. ಎಷ್ಟೋ ದಿನಗಳ ಹಿಂದೆ ...ಮ ಸಟ್ಲೆಜ್ ದಡದ ಭೂಮಿ ವಿಚಾರ ಹೇಳಿದ್ದ. ...ನೋಡಿದಾಗ ಅದು ಆ ರೈತನೂ ಆಗಿರಲಿಲ್ಲ. ...ಅವನು ಸೈತಾನ್‌ನಾಗಿದ್ದ ಅವನಿಗೆ ಉಗುರುಗಳಿದ್ದವು ...ತ್ತ ಕೋಡುಗಳಿದ್ದವು. ಅವನೇ ಅಲ್ಲಿ ಕುಳಿತುಕೊಂಡು ...ಹಾಸಗೈಯುತ್ತಿದ್ದ. ಅವನೆದುರು ಒಬ್ಬ ಮನುಷ್ಯ ...ಕೊಂಡಿದ್ದ ಬರಿಗಾಲು. ಮೈಮೇಲೆ ಹರಕು ಧೋತರ. ...ಮ ನೆಲದ ಮೇಲೆ ನಿತ್ರಾಣನಾಗಿ ಅಂಗಾತ ಬಿದ್ದಿದ್ದ. ...ಮನುಷ್ಯ ಯಾರು ಮತ್ತು ಯಾವ ಅವಸ್ಥೆಯಲ್ಲಿದ್ದಾನೆ ...ವುದನ್ನು ದೀನಾ ಕನಸಿನಲ್ಲೇ ಗಮನವಿಟ್ಟು ನೋಡಿದ್ದ. ...ಮ ಬೇರಾರೂ ಆಗಿರದೇ ಸ್ವತಃ ತಾನೇ ಆಗಿದ್ದ ಹಾಗೂ ...ಸ ಪ್ರಾಣ ಹೊರಟುಹೋಗಿತ್ತು. ಅದನ್ನು ನೋಡಿ ...ಮ ಗಾಬರಿಯಾದ. ಅಷ್ಟರಲ್ಲಿ ಅವನ ಕಣ್ಣು ತೆರೆದವು.

...ಎದ್ದವನೇ ಮನುಷ್ಯ ಕನಸಿನಲ್ಲಿ ಎಂತೆಂತಹ ಅರ್ಥಹೀನ ...ಕೃತಿಗಳನ್ನು ನೋಡಬಲ್ಲನೆಂದು ಯೋಚಿಸತೊಡಗಿದ. ...ಯೋಚಿಸುತ್ತಾ ಮುಖ ತಿರುಗಿಸಿ ಬಾಗಿಲ ಹೊರಗೆ ...ಕಿ ನೋಡಿದಾಗ ಬೆಳಕು ಹರಿದಿದೆ ಎಂದು ...ತ್ತಾಯಿತು. ಹೊತ್ತಾಯಿತು ಎಂದುಕೊಂಡ. ಇನ್ನು ...ವನ್ನು ಎಚ್ಚರಿಸಬೇಕೆನಿಸಿತು. ಹೊರಡುವುದರಲ್ಲಿ ...ಮಾಡುವುದು ಸರಿಯಲ್ಲವೆನಿಸಿತು. ಅವನು ಎದ್ದು ...ಗಾಡಿಯಲ್ಲಿ ಮಲಗಿದ್ದವನನ್ನು ಎಬ್ಬಿಸಿದ. ಗಾಡಿ ...ಯಾರು ಮಾಡು ಎಂದು ಹೇಳಿದ. ಸ್ವತಃ ತಾನು ಕೋಲ್ ...ನನ್ನು ಎಬ್ಬಿಸಲು ಹೊರಟ.

...ಹೋದವನೇ "ನಡೆಯಿರಿ, ಭೂಮಿ ಅಳೆಯುವುದಕ್ಕೆ ...ಹೋಗೋಣ" ಎಂದ. ಕೋಲ್ ಜನರೆಲ್ಲ ಎದ್ದರು ಹಾಗೂ ...ಒಂದೆಡೆ ಸೇರಿದರು. ಸರ್ದಾರ ಸಹ ಆಗಮಿಸಿದ. ಹೊರಡುವ ...ಮೊದಲು ಅವರು ಚಹ ತಯಾರಿಸಿದರು. ಆದರೆ ಚಹ ...ತಯಾರಿಸತೊಡಗಿದರೆ ತಡವಾದೀತೆಂದು ...ಹೋಗುವುದಾದರೆ ನೀವೆಲ್ಲ ಈಗಲೇ ಹೊರಟುಬಿಡಿರಿ. ...ಮ ತಡವಾಗಿ ಬಿಟ್ಟಿದೆ" ಎಂದ.

...ಕೋಲ್ ಜನ ಸಿದ್ಧವಾದರು ಹಾಗೂ ಎಲ್ಲರೂ ...ಹೊರಟುನಿಂತರು. ಕೆಲವರು ಕುದುರೆ ಹತ್ತಿದರು ಹಾಗೂ ...ಕೆಲವರು ಗಾಡಿ ಹತ್ತಿದರು. ದೀನಾ ತನ್ನ ನೌಕರನ ...ತೆ ತನ್ನ ಪುಟ್ಟ ಗಾಡಿ ಹತ್ತಿದ. ಸಲಿಕೆಯನ್ನು ಜೊತೆಗೆ ...ದಿದ್ದ. ಬಯಲು ಪ್ರದೇಶ ಪ್ರವೇಶಿಸುತ್ತಲೇ ಬೆಳಕು ...ಯಿತು. ಎದುರು ಒಂದು ದಿಬ್ಬವಿತ್ತು, ಅದರಾಚೆ ...ಬಯಲು ಪ್ರದೇಶ ಹರಡಿಕೊಂಡಿತ್ತು, ದಿಬ್ಬ ತಲುಪುತ್ತಲೇ ...ಕುದುರೆ ಮತ್ತು ಗಾಡಿಯಲ್ಲಿದ್ದವರೆಲ್ಲ ಇಳಿದರು. ಒಂದೆಡೆ ...ನಿಂದರು. ಸರ್ದಾರ ಎಷ್ಟೋ ದೂರದವರೆಗೆ ಹರಡಿದ್ದ ...ಬಯಲು ಪ್ರದೇಶದತ್ತ ಕೈಚಾಚಿ "ಇಗೋ ಕಣ್ಣಿಗೆ ಬೀಳುವ ...ಎಲ್ಲ ನಮ್ಮ ಜನರದ್ದು, ಅದರೊಳಗಿಂದ ನಿನಗೆ ...ಬೇಕಾದಷ್ಟನ್ನು ತೆಗೆದುಕೋ" ಎಂದು ದೀನಾಗೆ ಹೇಳಿದ.

...ದೀನಾನ ಕಣ್ಣು ಹೊಳೆಯತೊಡಗಿದವು. ಭೂಮಿ ...ಉಪಯೋಗವಾಗದೆ ಸಂಪೂರ್ಣ ಖಾಲಿ ಬಿದ್ದಿತ್ತು, ...ಅಂಗೈಯಷ್ಟೇ ಸಮತಟ್ಟು ಮತ್ತು ಮೃದುವಾಗಿತ್ತು, ...ಬೀಗೆಯೋ ಎನ್ನುವಷ್ಟು ಕಪ್ಪಾಗಿತ್ತು, ಅಲ್ಲಲ್ಲಿ ...ಎದೆಮಟ್ಟದಲ್ಲಿ ಬಗೆಬಗೆಯ ಹಸಿರು ಬೆಳೆದು ...ತ್ತು.

...ಸರ್ದಾರ ತನ್ನ ತಲೆ ಮೇಲಿನ ರೋಮಭರಿತ ಟೋಪಿ ...ದ, ನೆಲದ ಮೇಲೆ ಇರಿಸಿದ. "ಇದೇ ಗುರುತು. ...ಇಲ್ಲಿಂದ ಹೊರಡು. ಮತ್ತೆ ಇಲ್ಲಿಗೇ ಮರಳಿ ಬಾ. ಎಷ್ಟು ...ನ ಮೇಲೆ ನಡೆಯುವಿಯೋ ಅದೆಲ್ಲ ನಿನ್ನದು" ಎಂದು ...ದ.

...ನಾ ಹಣ ಎಣಿಸಿ ಟೋಪಿ ಮೇಲೆ ಇರಿಸಿದ. ...ಕೋಟು ಕಳಚಿದ. ನಂತರ ಧೋತರ ಸರಿಸಿಕೊಂಡ. ರುಮಾಲಿನಲ್ಲಿ ರೊಟ್ಟಿ ಇರಿಸಿದ. ತೋಳು ಏರಿಸಿದ. ನೀರಿನ ಬಂದೋಬಸ್ತ್ ಮಾಡಿಕೊಂಡ. ತನ್ನ ನೌಕರನಿಂದ ಸಲಿಕೆ ಇಸಿದುಕೊಂಡ. ನಡಿಗೆ ಆರಂಭಿಸುವುದಕ್ಕೆ ಸಿದ್ಧನಾಗಿ ನಿಂತ. ಯಾವ ಕಡೆ ಹೊರಟರೆ ಸೂಕ್ತವಾದೀತೆಂದು ಕೆಲಕ್ಷಣ ಯೋಚಿಸಿದ. ಎಲ್ಲೆಡೆ ಲೋಭವಿತ್ತು.

ಮುಂದೆ ನೋಡಿದರಾಯಿತು, ಸದ್ಯ ಎದುರು ಇದ್ದ ಸೂರ್ಯನತ್ತ ಹೊರಡುವುದೇ ವಾಸಿ ಎಂದುಕೊಂಡ. ಒಮ್ಮೆ ಪೂರ್ವದತ್ತ ಮುಖ ಮಾಡಿ ನಿಂತುಕೊಂಡ. ಆಕಳಿಸಿ ಮೈಯೊಳಗಿನ ಸುಸ್ತನ್ನು ಹೊಡೆದೋಡಿಸಿದ. ಭೂಮಿಯ ಅಂಚಿನಲ್ಲಿ ಸೂರ್ಯ ಮಿಂಚುವುದನ್ನು ಎದುರು ನೋಡತೊಡಗಿದ.

ಹೊತ್ತು ಕಳೆಯುವುದು ಸರಿಯಲ್ಲ; ಚಳಿ ಚಳಿ ಎನಿಸುತ್ತಿರುವಾಗ ದಾರಿ ಕ್ರಮಿಸುವುದು ಸುಲಭವೆಂದು ಭಾವಿಸಿದ. ಸೂರ್ಯನ ಮೊದಲ ಕಿರಣ ಅವರ ಮೇಲೆ ಬೀಳುತ್ತಲೇ ಹೆಗಲ ಮೇಲೆ ಸಲಿಕೆ ಇರಿಸಿಕೊಂಡ ದೀನಾ ಬಯಲು ಪ್ರದೇಶದಲ್ಲಿ ಹೆಜ್ಜೆ ಹಾಕತೊಡಗಿದ.

ಆರಂಭದಲ್ಲಿ ಅವನು ವೇಗವಾಗಿಯೂ ನಡೆಯಲಿಲ್ಲ ಇಲ್ಲವೆ ಮೆಲ್ಲಗೆ ಸಹ ನಡೆಯಲಿಲ್ಲ. ಸಾವಿರ ಗಜ ನಡೆದ ಮೇಲೆ ನಿಂತುಕೊಂಡ. ಅಲ್ಲಿ ಒಂದು ಕುಣಿ ತೋಡಿದ. ಎತ್ತರವಾಗಿ ಹುಲ್ಲು ನೆಟ್ಟ. ಕಾರಣ ಸುಲಭವಾಗಿ ಗುರುತಿಸಲು ಸಾಧ್ಯವಾಗಲಿ ಎನ್ನುವುದಾಗಿತ್ತು. ಮತ್ತೆ ಮುನ್ನಡೆದ. ಅವನ ಶರೀರದಲ್ಲಿ ಅಭೂತಪೂರ್ವ ಚೈತನ್ಯ ಬಂದಿತ್ತು. ಅವನು ನಡಿಗೆ ತೀವ್ರಗೊಳಿಸಿದ. ಸ್ವಲ್ಪ ಹೊತ್ತಿನ ನಂತರ ಬೇರೊಂದು ಕುಣಿ ತೋಡಿದ.

ಈಗ ಹಿಂದಿರುಗಿ ನೋಡಿದ. ಸೂರ್ಯನ ಬೆಳಕಿನಲ್ಲಿ ದಿಬ್ಬ ಸ್ಪಷ್ಟವಾಗಿ ಕಾಣತೊಡಗಿತ್ತು. ಅದರ ಮೇಲೆ ಜನ ನಿಂತಿದ್ದರು. ಗಾಡಿಯ ಚಕ್ರಗಳ ಕೀಲುಗಳು ಸಹ ಮಿಂಚುತ್ತಿರುವುದನ್ನು ನೋಡಬಹುದಿತ್ತು. ಬಹುಶಃ ಮೂರು ಮೈಲಿಯಾದರೂ ಅವನು ನಡೆದಿರಬಹುದು. ಬಿಸಿಲಿನ ಉಷ್ಣತೆ ಹೆಚ್ಚುಕಡಿಮೆ ಆಗತೊಡಗಿತ್ತು. ಅಂಗಿ ಕಳಚಿ ಹೆಗಲ ಮೇಲೆ ಹಾಕಿಕೊಂಡು ಮತ್ತೆ ನಡೆಯತೊಡಗಿದ. ಈಗ ತುಂಬ ಸೆಕೆ ಎನಿಸತೊಡಗಿತ್ತು. ಅವನು ಸೂರ್ಯನತ್ತ ನೋಡಿದ. ಒಂದಷ್ಟು ಉಂಡು ನೀರು ಕುಡಿಯಬೇಕೆನ್ನುವ ಹೊತ್ತಾಗಿತ್ತು.

"ಒಂದು ಪ್ರಹರವಂತೂ ಕಳೆದಿತ್ತು, ಆದರೆ ದಿನದ ನಾಲ್ಕು ಪ್ರಹರಗಳಿರುತ್ತವೆ. ಊಂ ಹೂಂ. ಇದು ತೀರ ಬೇಗವೆನಿಸುತ್ತದೆ. ಆದರೆ ಪಾದರಕ್ಷೆಗಳನ್ನಾದರೂ ತೆಗೆಯಬಹುದು" ಎಂದು ದೀನಾ ಯೋಚಿಸಿದ. ಪಾದರಕ್ಷೆ ತೆಗೆದ ಮೇಲೆ ಮುಖ ಒರೆಸಿಕೊಂಡ. ಮತ್ತೆ ಮುನ್ನಡೆದ. ಈಗ ನಡೆಯುವುದು ಸುಲಭವಾಯಿತು.

"ಇನ್ನೂ ಮೂರ್ನಾಲ್ಕು ಮೈಲು ನಡೆಯುವೆ. ಆಗ ಇನ್ನೊಂದು ದಿಕ್ಕಿನತ್ತ ಸಾಗುವೆ. ಎಂತಹ ಉತ್ಕೃಷ್ಟ ಭೂಪ್ರದೇಶವಿದು! ಇದನ್ನು ಕಳೆದುಕೊಳ್ಳುವುದು ಮೂರ್ಖತನವಾದೀತು. ವಿಚಿತ್ರವೆಂದರೆ ಮುಂದೆ ಸಾಗಿದಷ್ಟೂ ಭೂಮಿ ಒಂದಕ್ಕಿಂತ ಒಂದು ಉತ್ತಮವಾಗಿದೆ" ಎಂದು ಯೋಚಿಸತೊಡಗಿದ.

ಸ್ವಲ್ಪ ಹೊತ್ತು ಅವನು ನೇರ ನಡೆಯತೊಡಗಿದ. ನಂತರ ಹಿಂದಿರುಗಿ ನೋಡಿದರೆ ದಿಬ್ಬ ಕಾಣಿಸುವುದೇ ಕಷ್ಟವಾಯಿತು. ಅದರ ಮೇಲಿನ ಮನುಷ್ಯರು ತೆವಳುತ್ತಿರುವ ಇರುವೆಗಳಂತೆ ಕಂಡರು. ಬಿಸಿಲಲ್ಲಿ ಅಲ್ಲಿ ಏನು ನಡೆಯುತ್ತಿದೆಯೆನ್ನುವುದು ಗೊತ್ತೇ ಆಗುತ್ತಿರಲಿಲ್ಲ.

"ಓಹ್ ನಾನು ಇತ್ತ ತುಂಬ ದೂರ ಬಂದು ಬಿಟ್ಟಿದ್ದೇನೆ. ಇನ್ನು ಮರಳಲೇಬೇಕು" ಎಂದು ಅಂದುಕೊಂಡ. ಧಾರಾಕಾರವಾಗಿ ಬೆವರು ಹರಿಯುತ್ತಿತ್ತು. ನೀರಡಿಕೆ ಸಹ ಆಗತೊಡಗಿತ್ತು.

ಅವನು ಅಲ್ಲಿ ನಿಂತು ಕುಣಿ ತೋಡತೊಡಗಿದ. ಅದರ ಮೇಲೆ ಹುಲ್ಲಿನ ಸಿವುಡು ನಿಲ್ಲಿಸಿದ. ಅನಂತರ ನೀರು ಕುಡಿದು ಎಡಗಡೆ ತಿರುಗಿದ. ಮುಂದೆ ಸಾಗುತ್ತಲೇ ಇದ್ದ. ಹುಲ್ಲು ಎತ್ತರವಾಗಿತ್ತು, ನೀರಡಿಕೆಯೂ ತೀವ್ರವಾಗತೊಡಗಿತು. ಅವನು ದಣಿಯತೊಡಗಿದ. ಅವನು ಸೂರ್ಯನತ್ತ ನೋಡಿದ. ಸೂರ್ಯ ನೆತ್ತಿ ಮೇಲಿದ್ದ.


ದೀನಾನಿಗೆ ಇನ್ನು ಸ್ವಲ್ಪ ವಿಶ್ರಮಿಸಬೇಕು ಎನಿಸಿತು. ಅವನು ಕುಳಿತುಕೊಂಡ. ರೊಟ್ಟಿ ತೆಗೆದುಕೊಂಡು ತಿಂದ ಹಾಗೂ ಸ್ವಲ್ಪ ನೀರು ಕುಡಿದ. ನಿದ್ರೆ ಹತ್ತಿ ಬಿಟ್ಟೀತೆಂದು ಮಲಗಲಿಲ್ಲ, ಹೀಗೇ ಸ್ವಲ್ಪ ಹೊತ್ತು ಕುಳಿತುಕೊಂಡ. ಮತ್ತೆ ಮುಂದೆ ಸಾಗಿದ.

ಮೊದಲೇನೋ ನಡೆಯುವುದು ಸುಲಭವೆನಿಸಿತು. ಊಟ ಮಾಡಿದ್ದರಿಂದ ಅವನಲ್ಲಿ ಚೈತನ್ಯ ಮೂಡಿತು. ಆದರೆ ಸೆಕೆ ತೀವ್ರವಾಯಿತು. ಕಣ್ಣಿಗೆ ಮಂಪರು ಕವಿಯತೊಡಗಿತು. ಆದಾಗ್ಯೂ ಮುನ್ನಡೆಯುತ್ತಲೇ ಇದ್ದ. ದಣಿವು ಒಂದೆರಡು ಕ್ಷಣದ್ದು, ಆದರೆ ಜೀವನದುದ್ದಕ್ಕೂ ಆರಾಮದಿಂದ ಇರಬಹುದು ಎಂದು ಅವನಿಗೆ ಅನ್ನಿಸಿತು.

ಹಾಗೆಲ್ಲ ಅವನು ಸಾಕಷ್ಟು ದೂರ ಕ್ರಮಿಸಿದ್ದ. ಅವನು ಎಡಗಡೆ ತಿರುಗುವವನಿದ್ದ. ಮುಂದೆ ಭೂಮಿ ಫಲವತ್ತಾಗಿದೆಯೆನಿಸಿತು. ಈ ಭೂಪ್ರದೇಶ ಬಿಟ್ಟುಕೊಡುವುದು ಮೂರ್ಖತನವೆನಿಸೀತು ಎಂದುಕೊಂಡ. ಇಲ್ಲಿ ಉತ್ತಮ ಬೆಳೆ ತೆಗೆಯಬಹುದು. ಆ ಜಮೀನನ್ನು ಸಹ ತನ್ನ ಅಳತೆಗೆ ಸೇರಿಸಿಕೊಂಡ. ಕುಣಿ ತೋಡಿ ಗುರುತು ಮಾಡಿದ. ನಂತರ ಬೇರೆ ಕಡೆ ತಿರುಗಿದ. ದಿಬ್ಬದ ಕಡೆ ನೋಡಿದಾಗ ಬಿಸಿಲು ಕಂಪಿಸತೊಡಗಿದೆಯೇನೋ ಎನಿಸಿತು. ಆ ಕಂಪನದ ಅಲೆಗಳಿಂದಾಗಿ ದಿಬ್ಬವನ್ನು ಗುರುತಿಸುವುದು ದುಸ್ಸಾಧ್ಯವಾಯಿತು.

ಭೂಪ್ರದೇಶದ ಎರಡು ಮಗ್ಗುಲಗಳನ್ನು ನಾನು ಹೆಚ್ಚು ಆಯ್ದುಕೊಂಡೆನೇನೋ ಎಂದು ದೀನಾನಿಗೆ ಎನಿಸಿತು. ಇನ್ನು ಈ ಕಡೆ ಭೂಮಿ ಬಿಟ್ಟುಬಿಡುವುದೇ ವಾಸಿ ಎನಿಸಿತು. ಅವನು ದಾಪುಗಾಲು ಹಾಕುತ್ತ ಮೂರನೆ ದಿಕ್ಕಿನತ್ತ ನಡೆದ. ಅವನು ಸೂರ್ಯನನ್ನು ನೋಡಿದ. ಅವನು ತನ್ನ ಫೇರಿಯ ಮೂರನೆಯ ಎರಡು ಭಾಗ ಮುಗಿಸಿದ್ದ. ದೀನಾ ತನ್ನ ಗುರಿಯಿಂದ ಇನ್ನೂ ಹತ್ತು ಮೈಲು ದೂರ ಇದ್ದ. ಹೋಗಲಿ ಬಿಡು ಎಂದುಕೊಂಡ. ಆದರೆ ತನ್ನ ಆಯ್ಕೆಯ ಜಮೀನಿನ ಒಂದು ಮಗ್ಗುಲು ಚಿಕ್ಕದಾಗಿದ್ದರೂ ಪರವಾಗಿಲ್ಲವೆಂದು ಮರು ಆಲೋಚನೆ ಮಾಡಿದ. ಆದರೆ ನೇರವಾಗಿ ಹಿಂದಕ್ಕೆ ನಡೆಯುತ್ತಾ ಸಾಗಬೇಕೆನಿಸಿತು. ಅವನು ಹಾಗೆಯೇ ಎಷ್ಟೋ ದೂರ ನಡೆದುಬಿಟ್ಟ. ಪಣ ಸೋತಂತಾಯಿತಲ್ಲ, ಅರೆ, ಇಷ್ಟೊಂದು ಭೂಮಿ ಸಣ್ಣದಾಯಿತೆ?

ಹೀಗೆ ಯೋಚಿಸಿದ ದೀನಾ ಮೂರನೆಯ ಕುಣಿಯ ಗುರುತು ಮಾಡಿದ. ದಿಬ್ಬದ ಕಡೆ ಮುಖ ಮಾಡಿ ಆ ಕಡೆಯೇ ಸಾಗಿದ.



ಮೂಗಿನ ನೇರಕ್ಕೆ ನಡೆಯುತ್ತಾ ಬೆಳಗ್ಗೆ ನಡಿಗೆ ಆರಂಭಿಸಿದ್ದ ದಿಬ್ಬದ ಕಡೆ ಹೊರಟುನಿಂತ. ಆದರೆ ಈಗ ನಡೆಯುವುದು ಕಷ್ಟವೆನಿಸತೊಡಗಿತು. ಬಿಸಿಲಿನ ತಾಪ ಅವನ ಶಕ್ತಿಹರಣ ಮಾಡಿಬಿಟ್ಟಿತ್ತು, ಕಾಲುಗಳು ಹಲವೆಡೆ ಸುಲಿದು ಹೋಗಿತ್ತು, ಅಲ್ಲಲ್ಲಿ ಬಿರುಕುಗಳುಂಟಾಗಿದ್ದವು. ಕಾಲು ಶಕ್ತಿಹೀನವಾಗಿ ಬಿಟ್ಟಿದ್ದವು.. ಒಂದಷ್ಟು ವಿಶ್ರಮಿಸಬೇಕೆನಿಸಿತು. ಆದರೆ ಅದು ಹೇಗೆ ಸಾಧ್ಯವಿತ್ತು? ಸೂರ್ಯಾಸ್ತದೊಳಗೆ ಅವನು ಆ ಸ್ಥಳ ತಲುಪಬೇಕಿತ್ತು. ಸೂರ್ಯ ಯಾರ ದಾರಿ ನೋಡುತ್ತಾ ಕುಳಿತುಕೊಳ್ಳಲಾರ. ಅವನು ಕ್ಷಣಕ್ಷಣ ಕೆಳಗೆ ಸರಿಯುತ್ತಲೇ ಇದ್ದ.

ನನ್ನಿಂದ ದೊಡ್ಡ ತಪ್ಪಾಯಿತೆಂದು ದೀನಾ ತನ್ನಷ್ಟಕ್ಕೇ ಅಂದುಕೊಂಡ. ನಾನು ಇಷ್ಟೊಂದು ನಡೆದದ್ದೇಕೆ? ನಾನು ಸಮಯಕ್ಕೆ ಸರಿಯಾಗಿ ತಲುಪದಿದ್ದರೆ?

ಅವನು ಮತ್ತೆ ದಿಬ್ಬದ ಕಡೆ ನೋಡಿದ, ಮತ್ತೆ ಸೂರ್ಯನತ್ತ ನೋಡಿದ. ಗುರಿಯಿಂದ ಅವನು ಬಹಳ ದೂರ ಇದ್ದ ಹಾಗೂ ಸೂರ್ಯ ಭೂಮಿಯತ್ತ ವಾಲತೊಡಗಿದ್ದ.

ದೀನಾ ಪ್ರಯಾಸಪಟ್ಟು ನಡೆಯತೊಡಗಿದ. ನಡೆಯುವಾಗ ಉಸಿರುಗಟ್ಟಿದಂತಾಯಿತು ಹಾಗೂ ಸಮಸ್ಯೆ ತೀವ್ರವಾಯಿತು. ಆದರೂ ವೇಗವಾಗಿ ಹೆಜ್ಜೆ ಹಾಕತೊಡಗಿದ. ಮುಂದೆ ಸಾಗುತ್ತಲೇ ಇದ್ದ, ಆದರೆ ಇನ್ನೂ ಸ್ಥಳ ದೂರವೇ ಇತ್ತು, ಹೀಗಾಗಿ ಅವನು ಓಡಲಾರಂಭಿಸಿದ. ಹೆಗಲ ಮೇಲಿಂದ ಜಾಕೆಟ್ ಎಸೆದು ಬಿಟ್ಟ. ಪಾದರಕ್ಷೆ ಕಳಚಿ ಬಿಟ್ಟ. ಟೋಪಿ ಕಿತ್ತೆಸೆದ. ಗುರುತು ಮಾಡಲು ಬಳಸುತ್ತಿದ್ದ ಸಲಿಕೆ ಮಾತ್ರ ಹತ್ತಿರ ಇರಿಸಿಕೊಂಡ.

ನಾನೇನು ಮಾಡಲಿ ಎಂದು ತನ್ನಷ್ಟಕ್ಕೇ ಅಂದುಕೊಂಡ. ನನ್ನ ಅಳಿವಿಗೆ ಮೀರಿದ್ದನ್ನು ಕೈವಶ ಮಾಡಿಕೊಳ್ಳಬಯಸಿದೆ.

ಅವನಿಗೆ ಕೈಗೆ ಬಂದ ತುತ್ತು ಜಾರಿಹೋಗುತ್ತಿದೆ ಎನಿಸಿತು: ಸೂರ್ಯ ಮುಳುಗುವುದಕ್ಕೆ ಮೊದಲು ನಾನು ಅಲ್ಲಿಗೆ ಹೇಗೆ ಹೋಗಬಲ್ಲೆ? ಈ ಯೋಚನೆ ಮತ್ತು ಭಯದ ಕಾರಣ ಅವನು ಇನ್ನೂ ಏದುಸಿರುಬಿಡತೊಡಗಿದ. ಅವನು ಬೆವರಿನಲ್ಲಿ ಮುಳುಗಿದ್ದ, ಧೋತರ ಒದ್ದೆಯಾಗಿ ಮೈಗೆ ಅಂಟಿಕೊಂಡಿತು. ಬಾಯಿ ಒಣಗಿತು. ಆದಾಗ್ಯೂ ಅವನು ಓಡುತ್ತಲೇ ಇದ್ದ, ಅವನ ಎದೆ ಕಮ್ಮಾರನ ತಿದಿಯಾಗಿ ಬಿಟ್ಟಿತು. ಹೃದಯ ಒಳಗೆ ಸುತ್ತಿಗೆಯ ಪೆಟ್ಟು ತಿನ್ನುತ್ತಿದೆಯೇನೋ ಎನಿಸುತ್ತಿತ್ತು, ಅತ್ತ ಕಾಲುಗಳು ನಿತ್ರಾಣವಾಗಿದ್ದವು. ಈ ದಣಿವಿನಿಂದಾಗಿ ತಾನು ಹೆಣವಾಗಿ ಕುಸಿದು ಬಿಡುವೆನೇನೋ ಎನ್ನಿಸಿತು.

ಇದು ಅವನ ಅವಸ್ಥೆಯಾಗಿತ್ತು, ಆದರೆ ಅವನು ನಿಲ್ಲಲಿಲ್ಲ. ಇಷ್ಟೊಂದು ಓಡಿದ ನಂತರವೂ ನಾನು ನಿಂತುಬಿಟ್ಟರೆ ಈ ಜನ ತನ್ನನ್ನು ಅಪಹಾಸ್ಯ ಮಾಡುವರು, ಅವಮಾನಿಸುವರು. ಆದ್ದರಿಂದ ಓಡುವುದನ್ನು ನಿಲ್ಲಿಸಲಿಲ್ಲ, ಓಡುತ್ತಲೇ ಇದ್ದ. ಮುಂದೆ ಕೋಲ್ ಜನರ ದನಿ ಕೇಳತೊಡಗಿತು. ಅವರು ಅವನಿಗೆ ವೇಗವಾಗಿ ಧಾವಿಸು ಎಂದು ಕುಮ್ಮಕ್ಕು ನೀಡುತ್ತಿದ್ದರು. ಈ ದನಿಯಿಂದ ಅವನ ಮನಸ್ಸು ಚುರುಕುಗೊಂಡಿತು: ಇದ್ದಬಿದ್ದ ಶಕ್ತಿ ಒಗ್ಗೂಡಿಸಿ ಓಡಲಾರಂಭಿಸಿದ.

ಸೂರ್ಯ ಭೂಮಿಯ ಮೇಲೆ ಒರಗುವುದರಲ್ಲಿದ್ದ. ಓರೆ ಕಿರಣಗಳಿಂದಾಗಿ ಅವನು ಸಾಕಷ್ಟು ದೊಡ್ಡದಾಗಿ ಹಾಗೂ ರಕ್ತದಂತೆ ಕೆಂಪಾಗಿ ಬಿಟ್ಟಿದ್ದ ಅವನು ಮುಳುಗುವುದರಲ್ಲಿದ್ದ ಮುಳುಗಿಯೇ ಬಿಟ್ಟನೇನೋ ಎನಿಸತೊಡಗಿತು. ಸೂರ್ಯ ತುಂಬ ಕೆಳಗೆ ಬಂದುಬಿಟ್ಟಿದ್ದ. ಆದರೆ ದೀನಾ ಸಹ ಗುರಿ ಸಮೀಪ ಬಂದು ಬಿಟ್ಟಿದ್ದ. ದಿಬ್ಬದ ಮೇಲೆ ಕೈಬೀಸಿ ಹುರಿದುಂಬಿಸುತ್ತಿದ್ದ ಕೋಲ್ ಜನ ಕಣ್ಣೆದುರೇ ಕಾಣತೊಡಗಿದ್ದರು. ಈಗಂತೂ ನೆಲದ ಮೇಲೆ ಇರಿಸಿದ್ದ ಟೋಪಿ ಸಹ ಕಾಣತೊಡಗಿತು. ಅದರ ಮೇಲೆ ಅವನ ಹಣವನ್ನು ಇರಿಸಲಾಗಿತ್ತು, ಅಲ್ಲಿ ಕುಳಿತಿದ್ದ ಸರ್ದಾರ ಸಹ ಕಾಣತೊಡಗಿದ. ಅವನು ಹೊಟ್ಟೆ ಹಿಡಿದು ನಗುತ್ತಿದ್ದ.

ದೀನಾನಿಗೆ ಕನಸು ನೆನಪಾಯಿತು.

ಜಮೀನನ್ನೇನೋ ಸಾಕಷ್ಟು ಅಳೆದಾಯಿತು; ಆದರೆ ಅದನ್ನು ಉಪಭೋಗಿಸಲು ದೇವರು ನನ್ನನ್ನು ಜೀವಂತ ಇಡಬಲ್ಲನೆ ಎಂದು ಚಿಂತಿಸತೊಡಗಿದ. ನನ್ನ ಪ್ರಾಣ ಹೋಯಿತೆಂದುಕೊಂಡ. ನಾನು ಇನ್ನು ಗುರಿ ತಲುಪಲಾರೆ. ದೀನಾ ಆಸೆಗಣ್ಣಿಂದ ಸೂರ್ಯನತ್ತ ನೋಡಿದ. ಸೂರ್ಯ ನೆಲ ಮುಟ್ಟಿದ್ದ. ಅವನು ಅಳಿದುಳಿದ ಶಕ್ತಿ ಒಗ್ಗೂಡಿಸಿ ಓಡಲಾರಂಭಿಸಿದ. ಕಾಲು ಸಹಕರಿಸುತ್ತಿಲ್ಲವೇನೋ ಎನ್ನುವಂತೆ ಅವನು ಬಾಗಿಕೊಂಡೇ ಓಡತೊಡಗಿದ. ದಿಬ್ಬ ತಲುಪುವಷ್ಟರಲ್ಲಿ ಕತ್ತಲಾಗಿ ಬಿಟ್ಟಿತ್ತು. ಅವನು ಕಣ್ಣೆತ್ತಿ ನೋಡಿದ. ಸೂರ್ಯ ಮರೆಯಾಗಿ ಬಿಟ್ಟಿದ್ದ ಅವನ ಬಾಯಿಂದ ಚೀತ್ಕಾರ ಹೊರಬಿದ್ದಿತು. "ಓಹ್ ನನ್ನ ಎಲ್ಲ ಪ್ರಯತ್ನ ವ್ಯರ್ಥವಾಗಿ ಬಿಟ್ಟಿತು!" ಈ ಯೋಚನೆಯಿಂದಾಗಿ ನಿಂತು ಬಿಡುವವನಿದ್ದ ಅಷ್ಟರಲ್ಲಿ ಅವನಿಗೆ ಜನ ಇನ್ನೂ ನಿಂತಿದ್ದಾರೆ ಹಾಗೂ ಅವರಿಗೆ ಸೂರ್ಯ ಇನ್ನೂ ಕಾಣಿಸತೊಡಗಿದ್ದಾನೇನೋ ಎನಿಸಿತು. ಸೂರ್ಯ ಮುಳುಗಿಲ್ಲ; ಆದರೆ ನನಗೆ ಮಾತ್ರ ಕಾಣುತ್ತಿಲ್ಲ ಅಷ್ಟೇ. ಹೀಗೆ ಯೋಚಿಸಿ ಅವನು ದೀರ್ಘ ನಿಟ್ಟುಸಿರುಬಿಟ್ಟ. ಕಣ್ಣು ಮುಚ್ಚಿ ದಿಬ್ಬದ ಮೇಲೆ ಓಡತೊಡಗಿದ. ದಿಬ್ಬದ ಮೇಲೆ ಇನ್ನೂ ಬಿಸಿಲು ಇತ್ತು, ಹತ್ತಿರ ಬಂದ. ಎದುರಿಗೆ ಟೋಪಿ ಕಂಡಿತು. ಸರ್ದಾರ ಹೊಟ್ಟೆ ಹಿಡಿದು ನಗುತ್ತಲಿದ್ದ. ದೀನಾನಿಗೆ ಮತ್ತೆ ತನ್ನ ಕನಸು ನೆನಪಾಯಿತು. ಅವನ ಬಾಯಿಂದ ಚೀತ್ಕಾರ ಹೊರ ಬಿತ್ತು, ಅವನ ಕಾಲುಗಳು ನಿತ್ರಾಣಗೊಂಡವು.

ಅವನು ಬೋರಲಾಗಿ ಕುಸಿದು ಬಿದ್ದ, ಅವನ ಕೈಗಳು ಟೋಪಿ ಸ್ಪರ್ಶಿಸಿದವು.

"ಶಾಭಾಶ್! ಶಾಭಾಶ್! ನೋಡಿರಿ, ಅವನು ಎಷ್ಟು ಭೂಮಿ ಕೈವಶ ಮಾಡಿಕೊಂಡ!" ಎಂದ ಸರ್ದಾರ.

ದೀನಾನ ನೌಕರ ಓಡಿಬಂದ. ಅವನು ಮಾಲೀಕನನ್ನು ಎಬ್ಬಿಸಬಯಸಿದ. ಆದರೆ ಅವನ ಬಾಯಿಂದ ರಕ್ತ ಹರಿಯುತ್ತಿದ್ದುದನ್ನು ಕಂಡ.

ದೀನಾ ಸತ್ತು ಹೋಗಿದ್ದ. ಕೋಲ್ ಜನ ಮರುಕಪಟ್ಟು ಮತ್ತು ವ್ಯಂಗ್ಯವಾಗಿ ನಗತೊಡಗಿದರು. ನೌಕರ ಸಲಿಕೆ ತೆಗೆದುಕೊಂಡ. ದೀನಾನಿಗಾಗಿ ಕುಣಿ ತೋಡಿದ ಹಾಗೂ ಅದರಲ್ಲಿ ಅವನನ್ನು ಮಲಗಿಸಿದ. ತಲೆಯಿಂದ ಹಿಡಿದು ಪಾದದವರೆಗೆ ಅವನಿಗೆ ಆರು ಅಡಿ ಭೂಮಿ ಸಾಕಾಗಿತ್ತು.

ಮೂಲ: ಲಿಯೊ ಟಾಲ್‌ಸ್ಟಾಯ್

ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಕದಬಹಳ್ಳಿ ಸಂತೆಯನ್ನು ನುಂಗಿದ ಚತುಷ್ಪಥ

ಕದಬಹಳ್ಳಿ ಸಂತೆ ಮಂಡ್ಯ ಜಿಲ್ಲೆಯ ಸಂತೆಗಳಲ್ಲೇ ದೊಡ್ಡ ಸಂತೆ ಎಂದು ಹೆಸರು ಮಾಡಿತ್ತು. ನಾನು ಸತತವಾಗಿ ಮೂರು ವರ್ಷ ಈ ಸಂತೆಯಲ್ಲಿ ಸಂಜೆಯವರೆಗೂ ತಿರುಗಿ ಮನೆಗೆ ಹೋಗುತ್ತಿದ್ದೆ ಏಕೆಂದರೆ ನಮ್ಮ ಹೈಸ್ಕೂಲ್ ಇದ್ದುದು ಈ ಸಂತೆಯ ಪಕ್ಕದಲ್ಲಿ. ಹೈಸ್ಕೂಲಿಗೆ ಸರಿಯಾಗಿ ಮೂವ್ವತ್ತೆಂಟು ಹಳ್ಳಿಯಿಂದ ಹುಡುಗರು ಬರುತ್ತಿದ್ದರು. ನಮ್ಮ ತರಗತಿಯಲ್ಲಾಗ ಎಪ್ಪತ್ತು ಹುಡುಗರಿದ್ದರು. ಇದರಲ್ಲಿ ಎಂಟುತ್ತು ಹೆಣ್ಣುಮಕ್ಕಳೂ ಇದ್ದರು. ನಾವೆಲ್ಲಾ ಎಸ್ಎಸ್ಎಲ್ಸಿ ಮುಗಿಸಿ ಮುವ್ವತ್ತೆಂಟು ದಿಕ್ಕಿಗೆ ಹೋದನಂತರ ಅಕಸ್ಮಾತ್ ಭೇಟಿಯಾಗುತ್ತಿದ್ದುದು ಕದಬಹಳ್ಳಿ ಸಂತೆ ದಿವಸ. ನಾಗತಿಹಳ್ಳಿ ಚಂದ್ರಶೇಖರನೂ ಎರಡು ಬಾರಿ ಈ ಸಂತೆಯಲ್ಲಿ ಸಿಕ್ಕಿದ್ದ. ಓದುವಾಗಿನ ಖುಷಿ ಕಳೆದುಕೊಂಡಿದ್ದ ನಾವು ನಿರುದ್ಯೋಗದ ಹತಾಶೆಯಲ್ಲಿ ಭೇಟಿಯಾದರೂ ಅಸಾಮಾನ್ಯ ಸುಳ್ಳುಗಳನ್ನು ಸೇರಿಸಿ ಮಾತನಾಡಿ ಬಿಡುಗಡೆಯಾಗುತ್ತಿದ್ದವು. ನಾವಷ್ಟೇ ಅಲ್ಲ, ಇಡಿ ಸುತ್ತಲ ಹಳ್ಳಿಯ ಕಳ್ಳುಬಳ್ಳಿ ಸಂಬಂಧಿಕರು ಭೇಟಿಯಾದ ಕೂಡಲೇ ಮರದ ನೆರಳಲ್ಲಿ ಕುಳಿತು, ಬಂಗ ಬಡತನ ಮಾತನಾಡಿ, ಎಲೆಯಡಿಕೆ ಹಾಕಿಕೊಂಡು, ಸಂತೆ ಮಾಡಿಕೊಂಡು ಊರ ದಾರಿ ಹಿಡಿಯುತ್ತಿದ್ದರು.



ಈ ಸಂತೆ ಹಿಂದಿನ ದಿನದ ಸಂಜೆಯಿಂದಲೇ ಆರಂಭವಾಗುತ್ತಿತ್ತು. ಮಿಲಿಟರಿ ಹೋಟೆಲಿಗೆ ಟೆಂಟ್ ಹಾಕುವವರು ಬಂದು ಹಾರೆ ಗುದ್ದಲಿಯಿಂದ ದಡಿನೆಟ್ಟು, ಗೋಣೀ ಚೀಲದ ಪರದೆ ಕಟ್ಟಿ, ಒಲೆ ರಿಪೇರಿ ಮಾಡುತ್ತಿದ್ದರೆ ಮಿಲಿಟರಿ ಹೋಟೆಲಿನ ಪ್ರಚಾರಕ್ಕಾಗಿ ಹಾಕುತ್ತಿದ್ದ ಮೈಕಿನಿಂದ 'ಬಂಗಾರದ ಹೂವು', 'ಸತ್ಯ ಹರಿಶ್ಚಂದ್ರ', 'ನಮ್ಮ ಊರು' ಚಿತ್ರದ ಹಾಡುಗಳು ಮೊಳಗುತ್ತಿದ್ದವು. ಈ ಹಾಡುಗಳು ಸ್ಕೂಲಿನಲ್ಲಿ ಕುಳಿತ ಹುಡುಗರಿಗೆ ಉಂಟುಮಾಡುತ್ತಿದ್ದ ಸಂಭ್ರಮ ಅವರ್ಣನೀಯ.

ನಾಳೆ ಸೇರುವ ಸಂತೆಗೆ ಇವತ್ತಿನಿಂದಲೇ ತಯಾರಾಗುತ್ತಿದ್ದ ರೈತರು ತಮ್ಮ ದವಸ ಧಾನ್ಯ, ಕಾಯಿ ಕಸಿ, ದನಕರ ಎಮ್ಮೆಗಳೊಂದಿಗೆ ಅರ್ಧರಾತ್ರಿಯಿಂದಲೇ ಪ್ರಯಾಣ ಆರಂಭಿಸುತ್ತಿದ್ದರು. ಊರ ಮುಂದಿದ್ದ ನಮ್ಮ ಹೋಟೆಲ್ ಮನೆಯಲ್ಲಿ ಮಲಗಿಕೊಂಡು ಆಲಿಸಿದರೆ ಬೆಳಕು ಹರಿಯುವುದರಲ್ಲಿ ನಡೆದುಹೋದ ಜನ ಜಾನುವಾರುಗಳ ಲೆಕ್ಕ ಸಿಗುತ್ತಿತ್ತು. ಇದು ನನ್ನ ಊರ ಮುಂದಿನ ದಾರಿಯಾದರೆ ಸಂತೆಗೆ ದಶ ದಿಕ್ಕಿನಿಂದಲೂ ಇಂತದೇ ಪ್ರವಾಹ ಹರಿದುಬರುತ್ತಿತ್ತು, ಅದರ ಫಲವಾಗಿ ಹಲವಾರು ಆಸರುಗಳು ಬೀಡುಬಿಡುತ್ತಿದ್ದವು.

ಸಂತೆಯ ಪೂರ್ವಕ್ಕೆ ಅಂದರೆ ನಾಗತಿಹಳ್ಳಿ ಕಡೆಗೆ ದನಗಳ ಆಸರವಿರುತ್ತಿತ್ತು. ಅದರಲ್ಲಿ ಗಬ್ಬಾದ ಹಸುಗಳು, ಸಾಬರು ಕೊಳ್ಳುವಂತಹ ಗೊಡ್ಡುಗಳು, ಹೋರಿ ಕರುಗಳು ಮತ್ತು ಎತ್ತುಗಳ ವಿಭಾಗವೇ ಇರುತ್ತಿತ್ತು. ಅದರ ಪಕ್ಕದಲ್ಲೇ ಎಮ್ಮೆ ಆಸರ. ನಂತರ ಆಡು ಕುರಿ, ಕೋಳಿ, ಹೀಗೆ ಜಾನುವಾರುಗಳ ಜಾತ್ರೆಯೇ ಸೇರುತ್ತಿತ್ತು. ಅಲ್ಲಿ ಅಕಸ್ಮಾತ್ ವ್ಯಾಪಾರವಾಗದ ರಾಸುಗಳನ್ನು ಮರುದಿನ ನಡೆಯುವ ಚುಂಚನಗಿರಿ ಸಮೀಪದ ಜೋಡಗಟ್ಟೆ ಸಂತೆಗೆ ಹೊಡೆದುಕೊಂಡು ಹೋಗುತ್ತಿದ್ದರು. ತಮ್ಮ ದನಗಳನ್ನು ತಾವೇ ಮಾರಲಾಗುತ್ತಿರಲಿಲ್ಲ. ಅದಕ್ಕಾಗಿ ದಲ್ಲಾಳಿಗಳು ಇರುತ್ತಿದ್ದರು. ತಲೆದೂಗ, ಹೀನಸುಳಿ, ಸಿಡಿಗಾಲುಗಳನ್ನೆಲ್ಲಾ ಮರೆಮಾಚಿ "ಈ ದನಕೊಂಡಿದ್ದೆ ಆದರೆ ನೀನು ಬದುಕಿ ಹೋಗುತ್ತಿ" ಎಂದು ಸುಳ್ಳೇಳಿ ಮಾರಿಸುವವರ ಮಾತುಗಾರಿಕೆ ನೋಡಿದರೆ ಯಾವ ಕಲಾವಿದನೂ ಇವರಿಗೆ ಸಮನಲ್ಲ ಅನ್ನಿಸುತ್ತಿತ್ತು. ವ್ಯಾಪಾರವಾದ ಕೂಡಲೇ ಮಿಲಿಟರಿ ಹೋಟೆಲ್ ಕಡೆಗೆ ಹೋಗಿ ಮಾರಿದವನಿಗೆ ಸರಿಯಾದ ಚವುರ ಮಾಡಿ ಕಳಿಸುತ್ತಿದ್ದರು.

ದನದ ಆಸರದ ಪಕ್ಕದಲ್ಲೇ ದಿನಸಿ ಮಾರುವವರ ಸಾಲು. ನಂತರ ಬಟ್ಟೆ ಅಂಗಡಿಗಳು. ಎಲೆಯಡಿಕೆ ಸಾಲು. ಮಿಠಾಯಿ ಅಂಗಡಿಗಳ ಸಾಲು. ನಂತರದ್ದೇ ಬಹುದೊಡ್ಡ ಕಾಯಿಯಾಸರೆ. ಇದು ಕಾಯಿ ಸೀಮೆಯಾದ್ದರಿಂದ ರಾತ್ರಿಯೇ ಬಂದು ಲಾರಿಗಳು ನಿಲ್ಲುತ್ತಿದ್ದವು. ಸುತ್ತಲ ಹಳ್ಳಿಗಳಿಂದ ಕಾಯಿ ಹೊತ್ತುಕೊಂಡು ಬಂದ ಜನ ಕೊಳ್ಳುವವನು ಕೇಳಿದ ರೇಟಿಗೆ ಮಾರಿ ಸಂತೆ ಮಾಡಿಕೊಂಡು ಹೋಗುತ್ತಿದ್ದರು. ಇದೆಲ್ಲಕ್ಕಿಂತ ಕುತೂಹಲದ ದೃಶ್ಯವೆಂದರೆ ಎಳ್ಳು, ಹುಚ್ಚೆಳ್ಳು, ಕಡ್ಲೆಕಾಳು, ಉಳ್ಳಿಕಾಳು, ಅವರೆಕಾಳು ಮತ್ತು ಹುಣಸೇಹಣ್ಣು ಹೊತ್ತು ಬರುತ್ತಿರುವ ರೈತ ಮಹಿಳೆಯರನ್ನು ದೂರದಿಂದಲೇ ಪತ್ತೆಹಚ್ಚಿದ ಬೆಳ್ಳೂರು ಸಾಬರು ನಾಗಾಲೋಟದಿಂದ ಓಡಿ, ಕೊರೆಮೂಟೆಗಳನ್ನು ಕಿತ್ತು ಹೊತ್ತುಕೊಂಡು, ಅವರನ್ನು ಆತ್ಮೀಯವಾಗಿ ಮಾತನಾಡಿಸುತ್ತ ಅಗ್ಗದ ರೇಟಿಗೆ ಕೇಳುತ್ತಿದ್ದರು. ಅಷ್ಟು ದೂರ ಓಡಿಬಂದು ಹೊರೆ ಇಳಿಸಿದವನ ಜೊತೆ ಚೌಕಾಸಿ ಮಾಡದ ಅವ್ವಂದಿರು ಅವನು ಕೇಳಿದ ರೇಟಿಗೇ ಕೊಟ್ಟು ಗೋಣಗಿಕೊಂಡು ಸಂತೆ ಕಡೆ ಹೋಗುತ್ತಿದ್ದರು.

ಆಗ ಜಾತ್ರೆಯ ಖರ್ಚಿಗೆಂದು ದುಡ್ಡು ಕೂಡಿಸುತ್ತಿದ್ದ ಮಕ್ಕಳು ಕೂಡ ಇಪ್ಪೆಬೀಜ, ಹೊಂಗೆ ಬೀಜ, ಬೇವಿನ ಬೀಜಗಳನ್ನು ಸಂಗ್ರಹಿಸಿ ಸಾಬರಿಗೆ ಮಾರುತ್ತಿದ್ದವು. ಅಷ್ಟೇ ಅಲ್ಲ, ಬಾರೇಮೇಗಲ ಹಂಚಿಕಡ್ಡಿ ಕುಯ್ದು ಇಡಿಗಾತ್ರ ಪೊರಕೆ ಕಟ್ಟಿ ಮಾರುತ್ತಿದ್ದವು. ಎಲ್ಲದರಲ್ಲೂ ಕಾಸು ಮಾಡುವಂತಹ ಬದುಕಿನ ಬಣ್ಣ ಬೆರಗು ಹುಟ್ಟಿಸುವಂತಿತ್ತು.

ಇನ್ನು ಸಂತೆಗೆ ದೊಂಬರು, ಹಾವಾಡಿಗರು ಬಂದೇ ಬರುತ್ತಿದ್ದರು. ಜನನಿಬಿಡ ಜಾಗದಲ್ಲೊಬ್ಬ "ಥಮಾರ್ ಥಮಾರ್" ಎಂದು ಕೂಗಿ ಬಿಡುತ್ತಿದ್ದ. ಎಲ್ಲರೂ ತಿರುಗಿ ನೋಡಿದ ಕೂಡಲೇ ಚೀಲದಿಂದ ಸಣ್ಣ ಡಬ್ಬ ತೆಗೆದು, "ಇಲಿ ಹೆಗ್ಗಣ ಥಮಾರ್ ತಗೋಳಿ ಅಣ್ಣ" ಎಂದು ತೋರುತ್ತಿದ್ದ. ಹೆಚ್ಚಿಗೆ ಮಾತಾಡದೆ ಜನ ಕೊಳ್ಳುತ್ತಿದ್ದರು. ಇನ್ನ ಹಾವಾಡಿಗನ ಕಣ್ಕಟ್ಟಿನ ಮಾತಿಗೆ ಬೆರಗಾಗದವರೇ ಇಲ್ಲ, ಎಂತದೊ ತಾಯಿತ ತೆಗೆದು "ನಿಂದು ಹಸ ಯಮ್ಮೆ ಕಳದೋಗಿದೆ. ಯೋಚನೆ ಮಾಡಬೇಡ. ತಲೆ ದಿಂಬಿಂದು ಕೆಳಗಡೆ ತಾಯಿತ ಇಟ್ಟ ಮಲಗು. ಹಸ ಎಲ್ಲಿ ಹೋಗ್ತಾಯಿದೆ ಕಾಣ್ತದೆ, ನಿಂದು ಹೆಂಡ್ತಿ ವಡವೆ ಹೋಗಿದೆ" ಎಂದಾಗ ಡೋಲು ಬಡಿಯುವವ ಹಿನ್ನೆಲೆಯಾಗಿ 'ನೆಕ್ಲೆಸ್' ಎನ್ನುತ್ತಾನೆ. "ಅದು ಹೋಗಿದೆ. ಯೋಚ್ನೆ ಮಾಡಬೇಡ. ದಿಂಬಿಂದು ಕೆಳಗಡೆ ತಾಯಿತ ಮಡಗು ಕದ್ದವರು ಕಾಣಸ್ತರೆ" ಎಂದು ಹೇಳಿದ ಕೂಡಲೇ ರೈತರೆಲ್ಲಾ ವಶೀಕರಣಗೊಂಡವರಂತೆ ತಾಯಿತ ಕೊಳ್ಳಲು ಕೈಚಾಚುತ್ತಿದ್ದರು. "ಐದು ರೂಪಾಯಿ ಆಗ್ತದೆ ಅಣ್ಣ" ಎಂದು ಹಾವಾಡಿಗ ಮುಖ ನೋಡುತ್ತಿದ್ದ. "ಆಗಲಿ ಕೊಡು" ಎಂದು ಖರೀದಿಸುತ್ತಿದ್ದರು. ಈ ಮೊದಲು ಆತ ಹಾವು ಮುಂಗುಸಿಗೆ ಜಗಳಕ್ಕೆ ಬಿಡ್ತೀನಿ, ಹಾವು ನಾಲ್ಕು ಪೀಸಾಗ್ತದೆ ಎಂದು ಜನಗಳಿಗೆ ಹೇಳಿದ್ದನ್ನ ಜನಗಳೇ ಮರೆತುಹೋಗುವಂತೆ ಮಾಡುತ್ತಿದ್ದ.

ಇನ್ನ ಹಲ್ಲುಪುಡಿ ಮಾರುವವರು ಯಂತದೊ ಪುಡಿಕೊಟ್ಟು ಬಾಯಿ ಮುಕ್ಕಳಿಸಿದ ನಂತರ, ಕಡಲೇಕಾಳು ಗಾತ್ರದ ಕಲ್ಲು ಕೊಟ್ಟು ಕಡದು ನುಚ್ಚು ಮಾಡು ಎನ್ನುತ್ತಿದ್ದ. ಜನ ಹಾಗೇ ಮಾಡಿ ಬಾಯಿಗಾಕಿಕೊಂಡು ಕಲ್ಲು ಸಕ್ಕರೆಯಂತೆ ಹರಳು ಮಾಡಿ ಉಗಿದು, ಹೇಳಿದ ರೇಟಿಗೆ ಹಲ್ಲುಪುಡಿ ಕೊಂಡು ಹೋಗುತ್ತಿದ್ದರು. ಹೀಗೆ ಸಂತೆಯ ನಾನಾ ಮೂಲೆಗಳಲ್ಲಿ ಜನ ಮೆಚ್ಚುವಂತಹ ಜಾದೂಗಾರಿಕೆ ನಡೆಯುತ್ತಿದ್ದವು.

ಅಂಚೆ ಇಲಾಖೆಯ ಕೆಲಸಗಳೂ ನಡೆಯುತ್ತಿದ್ದವು. ಆ ಊರಿನಿಂದ ಇನ್ನೊಂದು ಊರಿಗೆ ತಲುಪುವ ಪತ್ರಗಳು ಸಂತೆ ದಿವಸ ವಿನಿಮಯಗೊಳ್ಳುತ್ತಿದ್ದವು. ಸಂತೆಗೆ ಬರುತ್ತಿದ್ದ ಜಯರಾಮ ಎಂಬ ಮೇಷ್ಟರು ನಮ್ಮೂರ ಪಟೇಲರ ಮಗಳಿಗೆ ಲವ್ ಲೆಟರ್ ಕೊಟ್ಟು ನನ್ನ ಕೈಗೆ ಹತ್ತು ಪೈಸೆಯನ್ನು ಕೊಟ್ಟು ಹೋಗುತ್ತಿದ್ದ. ನಾನು ಜೋಪಾನವಾಗಿ ಅದನ್ನು ಪಟೇಲರ ಮಗಳಿಗೆ ತಲುಪಿಸಿ ಕೊಬ್ಬರಿ, ಬೆಲ್ಲ, ಕಜ್ಜಾಯ ಇತ್ಯಾದಿ ಬಕ್ಷೀಸು ಪಡೆಯುತ್ತಿದ್ದೆ.

ರಸ್ತೆ ಬದಿಯಲ್ಲಿ ಕುಳಿತು ಅಂದಿನ ಸಿನಿಮಾ ಹಾಡುಗಳನ್ನ ಹಾಡುತ್ತಿದ್ದ ಕುರುಡರೂ ಬರುತ್ತಿದ್ದರು. ತಬಲಾ, ಹಾರ್ಮೋನಿಯಂ, ಚಿಟಿಕೆ ಈ ಮೂರು ವಾದ್ಯಗಳಿಂದಲೇ ಅವರು ಸಿನಿಮಾದ ಸಂಗೀತವನ್ನು ನುಡಿಸಿ ಜನ ಬಂದ ಕೆಲಸ ಬಿಟ್ಟು ಹಾಡು ಕೇಳುವಂತೆ ಮಾಡುತ್ತಿದ್ದರು. ಒಮ್ಮೆಯಂತೂ ಅವರು ಇಡೀ ಸಂತೆಯೇ ಸುಂದರವಾಗಿ ಕಾಣುವಂತೆ ಮಾಡಿ ನಾನು ಅವರ ಹಿಂದೆಯೇ ಹೊರಟು ಹೋಗುವಂತೆ ಹಾಡಿದ್ದರು. ಅದು ಸೂರ್ಯಾಸ್ತಮಾನದ ಸಮಯ. ಒಮ್ಮೊಮ್ಮೆ ಸೂರ್ಯನ ಪ್ರಭೆ ಮೋಡಕ್ಕೆ ಬಿದ್ದು ಆ ಮೋಡಗಳೆಲ್ಲಾ ಕೆಂಗಾಗಿ ಜನಗಳ ಮುಸುಡಿಗಳೆಲ್ಲಾ ರವೆಯಾಗಿ ಕಾಣುತ್ತವೆ. ಅಂತಹ ಸುಂದರಗೊಂಡ ಸಂಜೆಯಲ್ಲಿ ಹಾಡುತ್ತಿದ್ದ ಆ ಕುರುಡರ ದನಿಗೆ ಮಾರುಹೋದ ಜನ ಅವರ ಮುಂದೆ ಹಾಸಿದ್ದ ಬಟ್ಟೆಯ ತುಂಬ ಕಾಸು ಹಾಕಿದ್ದರು. ನಾನೂ ಕೂಡ ಊರಿಗೆ ಹೋಗುವುದನ್ನು ಮರೆತು ನಿಂತಿದ್ದೆ.

ಆಗ ರಾತ್ರಿ ಸ್ಕೂಲಿನಲ್ಲೇ ಮಲಗುವ ಬಡ ಹುಡುಗರಿದ್ದರು. ಸಂತೆಯ ದಿನ ಅವರ ಮಾರೀ ಹಬ್ಬ ಹೇಳತೀರದಾಗಿತ್ತು. ಅನ್ನ ಸಾರು ಮಿಕ್ಕ ಮಿಲಿಟರಿ ಹೋಟೆಲ್ ಬಾಗಿಲಿಗೆ ಹೋಗಿ ನಿಂತರೆ ಸಾಕು ಕರೆದು ಇಸ್ತ್ರಿ ಎಲೆ ತುಂಬ ಅನ್ನ ಸುರಿದು ಬಾಡಿನ ಸಾರು ವಯ್ಯುತ್ತಿದ್ದರು. ನಾವು ಮೂರು ಹಿಪ್ಪಡಿ ಅನ್ನ ಉಣ್ಣುತ್ತಿದ್ದ ಕಾಲ ಅದು. ದಟ್ಟವಾಗಿ ಬಾಡು ಬೆಂದ ಸಾರಿನ ಗಮಲು ಎಷ್ಟು ದೂರಕ್ಕೆ ರಾಚುತ್ತಿತ್ತೆಂದರೆ ಕಿಲೋಮೀಟರ್ ದೂರದಲ್ಲಿ ಹೋಗುತ್ತಿದ್ದ ನಾಯಿ ಕೂಡ ಬ್ರೇಕ್ ಹೊಡೆದು ಇತ್ತ ತಿರುಗಿ ಮೂಗರಳಿಸುತ್ತಿತ್ತು. ನಮಗೂ ಕೂಡ ಸ್ಕೂಲಿನ ತರಗತಿಗಳನ್ನೇ ಧಿಕ್ಕರಿಸುವಂತೆ ಈ ಬಾಡಿನ ಸಾರು ಕಾಟ ಕೊಡುತ್ತಿತ್ತು. ಆದ್ದರಿಂದ ಶನಿವಾರ ಸಂತೆ ದಿನ ನಾನು ಊರಿಗೆ ಹೋಗುತ್ತಿರಲಿಲ್ಲ. ದೂರದ ಊರುಗಳ ನಿಂಗ, ಪರಮೇಶ, ಚಿನ್ನ, ಶಂಕರ ಇವರ ಜೊತೆ ಉಳಿದುಕೊಂಡು ಮಿಲಿಟರಿ ಹೋಟೆಲ್ ಬಳಿ ನಾಯಿಗಳ ಜೊತೆ ಸ್ಪರ್ಧೆಗೆ ಬಿದ್ದವರಂತೆ ಸುಳಿಯುತ್ತಿದ್ದವು. ಆಗ ಹೋಟೆಲ್ ಮಾಲೀಕ ಮಾಯಣ್ಣ "ಲೇ, ಇಸ್ಕೂಲುಡುಗ್ರು ಬಂದವೆ. ಏನಾರ ಮಿಕ್ಕಿದ್ರೆ ಕೊಟ್ಟ ಕಳಿಸಿರ್ಲಾ" ಎನ್ನುತ್ತಿದ್ದ. ಆ ದೇವವಾಣಿ ನನ್ನ ಮನಸ್ಸಿನಲ್ಲಿ ಇನ್ನೂ ಇದೆ. ಆ ಬಾಡಿನ ಸಾರಿನ ಗಮಲೂ ಕೂಡ.

ಸಂಜೆಯಾಗುತ್ತಿದ್ದಂತೆ ಈ ಬದುಕಿನ ಯಾಪುಲ್ಲಿಯ ಸಂತೆ ಮುಗಿಸಿದ ಜನ ತಾವು ಪಡೆದುದನ್ನು, ಕಳೆದುಕೊಂಡಿದ್ದನ್ನು ಮಾತನಾಡುತ್ತ ಊರ ದಾರಿ ಹಿಡಿಯುತ್ತಿದ್ದರು. ಬೆಳ್ಳೂರಿನಿಂದ ವ್ಯಾಪಾರಕ್ಕೆಂದೇ ಬಂದವರನ್ನ ಜ್ವಾಲಮಾಲ ಎಂಬ ಜೈನರ ಬಸ್ಸು ತೆಗೆದುಕೊಂಡು ಹೋಗೀ ಹೋಗಿ ಸುರಿದು ಬರುತ್ತಿತ್ತು; ಈ ನಡುವೆ ಮನೆಯ ಬಾಗಿಲಲ್ಲೇ ತಗಡು ಬಡಿದು ಮಾಡಿಕೊಂಡಂತಹ ಬೆಳ್ಳೂರ ಸಾಬರ ಮೂಕಿ ವ್ಯಾನುಗಳೂ ಕೂಡ ತಮ್ಮ ಕೈಲಾದಷ್ಟು ಜನಗಳನ್ನ ಸಾಗಿಸುತ್ತಿದ್ದವು.

ಆ ನಂತರ ಸಂತೆ ಮೈದಾನ ಕಾಗೆ, ಹದ್ದು, ನಾಯಿಗಳ ಜಿಹ್ವಾಚಾಪಲ್ಯ ತಣಿಸುವ ಶೋಧನಾ ತಾಣವಾಗುತ್ತಿತ್ತು. ಇವುಗಳ ಜೊತೆಗೆ ನಾವೂ ಕೂಡ ಮರುದಿನ ಯಾರಾದರೂ ಚಿಲ್ಲರೆ ಕಾಸು ಕೆಡಗಿಕೊಂಡು ಹೋಗಿದ್ದರೆ ಎಂಬ ಆಶಾಭಾವನೆಯ ಗುಮಾನಿಯಿಂದ ನಾವೇ ಏನನ್ನೋ ಕಳೆದುಕೊಂಡವರಂತೆ ಹುಡುಕಿ ಬರುತ್ತಿದ್ದೆವು.

ಸಂತೆ ಕಟ್ಟುವ ಮೈದಾನವಲ್ಲದೆ ಕದಬಹಳ್ಳಿ ಗೇಟಿನಲ್ಲಿ ಮೂರು ನಾಲ್ಕು ಹೋಟೆಲು, ನಾಲ್ಕೈದು ಅಂಗಡಿಗಳು, ಕಟಿಂಗ್ ಶಾಪು ಮತ್ತು ಟೈಲರ್ ಅಂಗಡಿ ಇದ್ದವು. ಪೈಕಿ ಕೆಂಪೇಗೌಡನ ಅಂಗಡಿಯೊಂದು ಬ ಫೇಮಸ್ಸಾಗಿತ್ತು. ಆತ ಅಂಗಡಿ ಮುಂದೆ ಹಾಸಿದ್ದ ಕಲ್ಲುಬೆಂ ಮೇಲೆ ಕದಬಳ್ಳಿ, ಅವ್ವಾರಳ್ಳಿ, ಮಾವಿನಕೆರೆ ಕಡೆ ನಿರುದ್ಯೋಗಿ ಗಣ್ಯರು ಕುಳಿತು ಮಾತನಾಡುತ್ತಿದ್ದರು. ಆ ಕಾಲಕ್ಕೆ ಸಿನಿಮಾ ನೋಡಿ ಬಂದವರು "ರಾಜಕುಮಾ ಹ್ಯಂಗವುನಪ್ಪ ಅಂದ್ರೆ ಥೇಟ್ ನಮ್ಮ ಕೆಂಪೇಗೌಡನ ಅವನೆ" ಅನ್ನುತ್ತಿದ್ದಂತೆ ಡಾ. ರಾಜ್ ಹೋಲಿಸುವ ಮೂ ಹೊಂದಿದ್ದ ಕೆಂಪೇಗೌಡ ಜನರ ಹೊಗಳಿಕೆಗೆ ಉ ಧಾರಾಳಿಯಾಗಿ ಅಂಗಡಿ ಸಾಮಾನು ಸಾಲ ಕೊಡುತ್ತಿ ಸ್ಕೂಲು ಹುಡುಗರು ಅಂಗಡಿ ಮುಂದೆ ನಿಂತರೆ ಕಡಲೆಕಾ ಬೆಲ್ಲ ಕೊಡುತ್ತಿದ್ದ.

ಸಾಯಂಕಾಲವಾಗುತ್ತಿದ್ದಂತೆ ಈ ಅಂಗಡಿ ಮುಂ ಗಣ್ಯರು ಶರಾಪು ಕುಡಿದು ಮನೆ ಕಡೆ ಹೊರಡುತ್ತಿದ್ದ ಕೆಲವರು ಉಪಾಯದಲ್ಲಿ ನಡೆದರೆ ಕೆಲವರಂತೂ ಆಗತಾ ಹುಟ್ಟಿದ ದನ, ಎಮ್ಮೆ, ಕರುವಿನಂತೆ ನಡಿಗೆ ಹೋರಾಟವನ್ನೇ ನಡೆಸಿ ಊರು ಸೇರುತ್ತಿದ್ದರು. ನಮಗ ಇದು ಅದ್ಭುತ ಮನರಂಜನೆಯಾಗಿತ್ತು.

ಕದಬಹಳ್ಳಿಯ ಗೇಟೆಂದರೆ ಆ ಸುತ್ತಲ ಹಳ್ಳಿ ರಂಗಭೂಮಿಯಂತಿತ್ತು. ಬೇಸಿಗೆಯಲ್ಲಂತೂ ಎಳನೀ ಮತ್ತು ಕಲ್ಲಂಗಡಿ ಹಣ್ಣಿನ ಸಾಲಂಗಡಿ ಇರುತ್ತಿದ್ದವು.

ಇದೆಲ್ಲಾ ಹೀಗೆ ಇರುತ್ತ ಮುಂದುವರಿಯತ್ತದೆಂ ಭಾವಿಸಿದ್ದ ನನ್ನ ಕಣ್ಣಿಂದ ಒಂದೊಂದೇ ದೃಶ್ಯಗ ಮರೆಯಾಗತೊಡಗಿದವು. ಮೊದಲು ಹೋದದ್ದು ದನ ಆಸರ. ನಂತರ ಎಮ್ಮೆ ಆಡು ಕುರಿಗಳ ಸರದಿ. ಬ ದಿನಸಿ, ಅಂಗಡಿಗಳ ಸರದಿ. ಮಿಲಿಟರಿ ಹೋಟೇ ಹೀಗೆ ಎಲ್ಲವೂ ಕಡಿಮೆಯಾಗುತ್ತಾ ಬರುವಾಗ ಒಂ ದಿನ ಹಠಾತ್ತನೆ ಚತುಷ್ಪಥ ರಸ್ತೆ ಅಳತೆಯಾಯ್ತು. ನಂ ಕಾಮಗಾರಿ ಆರಂಭಗೊಂಡು ಸಂತೆಯ ಜಾಗ ಅಳಿಸಿಹೋಯ್ತು.

ಈಗ ಸಂತೆ ದಿವಸ, ಉತ್ತರದ ತುದಿಯಲ್ಲೇ ಒಂದಿಷ್ಟು ಕಾಯಿ ವ್ಯಾಪಾರ ನಡೆಯುತ್ತದೆ. ಅದೇ ಜಾಗ ತಾಲ್ಲೂಕ್ ಮಾರ್ಕೆಟ್ ಸೊಸೈಟಿಯವರು ಕಟ್ಟಿರುವ ನೆ ಕಟ್ಟೆಗಳಲ್ಲಿ ರೈತರನ್ನು ಬಲಿ ತೆಗೆದುಕೊಳ್ಳುತ್ತಿರು ಟೊಮೊಟೊ, ಹೂಕೋಸು, ದಪ್ಪ ಮೆಣಸಿನಕಾಯಿ ಮ ಬಣ್ಣದ ಸೌತೆ ಮಾರುವ ರೈತರು ಕಾಣಸಿಗುತ್ತಾರೆ. ಇವ ಟೀ, ಕಾಫಿ ಒದಗಿಸಲು ಪ್ಲಾಸ್ಟಿಕನಲ್ಲಿ ತುಂಬಿಟ್ಟುಕೊಂ ಬಿಸ್ಕತ್, ಬೀಡಿ, ಬೆಂಕಿಪಟ್ಟಣ ಮಾರುವ ಒಂದೆರ ಪೆಟ್ಟಿ ಅಂಗಡಿ ಬಿಟ್ಟರೆ ಅಲ್ಲಿನ್ನು ಯಾವ ಜೀವಕಳೆಯ ಉಳಿದಿಲ್ಲ.

ಬಸ್ಸಿಗಾಗಿ ಜನ ಕಾಯುತ್ತ ನಿಲ್ಲುವ ಜಾಗದಲ್ಲಿ ಕೆಲವ ಅಂಗಡಿಗಳಿದ್ದವು. ಕಾವೇಟಿ ರಂಗನಾಥ ದೇವಾಲಯ ಕೊಡಗಿ ಜಮೀನಿನಲ್ಲಿದ್ದ ಆ ಅಂಗಡಿ ಮುಂಗಟ್ಟುಗಳ ಹೊಸದಾಗಿ ಬಂದಿರುವ ಎ.ಸಿ. ಸಾಹೇಬರು ಹೊ ಹಾಕಿರುವುದರಿಂದ ಅಲ್ಲಿ ಯಾರಿಗೂ ನೆಲೆಯಿಲ್ಲದಂತಾಗಿ

ದೀರ್ಘಾವಧಿಯಲ್ಲಿ ಮನುಷ್ಯ ಎಂತಹ ಹೀನಸ್ಥಿತಿಗ ಹೊಂದಿಕೊಳ್ಳುತ್ತಾನೆ. ಈಗ ಕದಬಹಳ್ಳಿ ಗೇಟಿನಲ್ಲಿ ನಿಂ ಸುತ್ತಲೂ ನೋಡಿದಾಗ, ಹಾಳು ಹಂಪೆ ನೋಡಿದಂ ಗುತ್ತದೆ. ಮಂಡ್ಯ ಜಿಲ್ಲೆಯಲ್ಲೇ ಹೆಸರು ಮಾಡಿದ್ದ ದೊ ಸಂತೆಯೊಂದು ಇಲ್ಲಿ ನಡೆಯುತ್ತಿದ್ದ ಯಾವ ಕುರುಹುಗ ಈಗ ಅಲ್ಲಿಲ್ಲ, ಈಗ ಅಲ್ಲಿರುವುದು ಚತುಷ್ಪಥ ರಸ್ತೆ ಮ ಭಯ ಹುಟ್ಟಿಸುವ ವೇಗದಲ್ಲಿ ಚಲಿಸುವ ವಾಹನಗ ಈ ವಾಹನಗಳಿಗೂ ಹೊಂದಿಕೊಂಡು ಜೀವ ಹಿಡಿ ಕೊಂಡು ಬದುಕುತ್ತಿರುವ ಜನ. ಅಭಿವೃದ್ಧಿ ಎಂದರೆ ನ ಭೂಮಿ ಬದುಕಿನ ಸರ್ವನಾಶವೆಂದು ಗೊತ್ತಿಯಿರಲಿ

■ ಬಿ.ಚಂದ್ರೇಗೌ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧ ಮತ್ತು ಬುದ್ಧತ್ವ

ನರಕದಲ್ಲಿ ಬುದ್ಧನ ಕೊನೆಯ ಬೋಧನೆ

2011ರಲ್ಲಿ ಹಂಪೆಯ ಹೇಮಕೂಟದ ಬಂಡೆಗಲ್ಲುಗಳ ...ಸಿ ಅಲೆದಾಡುತ್ತಿದ್ದಾಗ ಜರ್ಮನಿಯ ಲೇಖಕರಾದ ...ಲ್ಡ್ ಹೆಟ್ಜಲ್ ಪರಿಚಯವಾದರು. ಅವರಿಗೆ ಹೆಸರು ...ಂ ಕೊಟ್ಟ ಕೃತಿ 'ಬುದ್ಧಾಸ್ ಲಾಸ್ಟ್ ಸರ್ಮನ್ ಇನ್ ..." ಎಂಬುದು. ಅಲ್ಲಿ ಕಾಣುತ್ತಿದ್ದ ಗಣಪತಿ, ಲಿಂಗ ...ತರ ದೇವತಾಮೂರ್ತಿಗಳ ವಿಗ್ರಹಕ್ಕೆ ನಡೆಯುತ್ತಿದ್ದ ...ನೆ ಮತ್ತು ಆರಾಧನೆಗಳನ್ನು ನೋಡುತ್ತಿದ್ದ ನಮ್ಮಿಬ್ಬರಲ್ಲಿ ...ಧನೆಯ ಹೆಸರಿನಲ್ಲಿ ಇರುವಂತಹ ಪ್ರತಿಕ್ರಿಯೆ ಏನದು ...ಬದರ ಬಗ್ಗೆ ನಾನಾ ದೃಷ್ಟಿಕೋನಗಳಿಂದ ವಿಶ್ಲೇಷಣೆ ...ಯುತ್ತಿತ್ತು. ನಮ್ಮ ಪ್ರೀತಿಪಾತ್ರರೊಬ್ಬರಿಗೆ ಹುಟ್ಟುಹಬ್ಬದ ...ವಾ ಯಾವುದೇ ವಿಶೇಷ ಸಂದರ್ಭದಲ್ಲಿ ಹೂಗುಚ್ಛವನ್ನು ...ಟ್ಟು ಹಾರೈಸುವುದು, ಉಡುಗೊರೆಗಳನ್ನು ನೀಡುವ ...ಲಕ ನಮ್ಮ ಪ್ರೀತಿಯನ್ನು ಅಭಿವ್ಯಕ್ತಗೊಳಿಸುವುದು. ...ದಿಗಳಿದ್ದಂತೆ ದೇವತಾವಿಗ್ರಹಗಳ ಆರಾಧನೆ, ಅರ್ಚನೆ ...ತ್ತು ನಿವೇದನೆಗಳ ಬಗ್ಗೆಯೂ ಹೋಲಿಕೆಗಳನ್ನು ನೀಡುವ ...ಯತ್ನವಾಯಿತು. ಆದರೆ, ಈ ಯತ್ನದಲ್ಲಿ ತೊಡಕುಂಟಾ... ವ್ಯಕ್ತಿಗಳ ಜೊತೆಯಲ್ಲಿರುವಂತಹ ಭಾವನಾತ್ಮಕವಾದ ...ಬಂಧ ಮತ್ತು ದೇವರುಗಳೊಂದಿಗಿರುವ ಭ್ರಾಮಕ ...ಬಂಧಗಳನ್ನು ಗುರುತಿಸಿದಾಗ. ಅವೆರಡರ ನಡುವೆ ...ವಂತಹ ಅಗಾಧವಾದ ಅಂತರವನ್ನು ಗುರುತಿಸಿದಾಗ ...ವನೆಗಳಿಗೂ, ಭ್ರಮೆಗಳಿಗೂ ವ್ಯತ್ಯಾಸವನ್ನು ...ಗೊಳಿಸಿಕೊಳ್ಳಲು ಸಾಧ್ಯವಾಯಿತು.

ಆರಾಧನೆಗಳ ಸಂಕೇತಗಳು

...ಭಾವನೆಗಳಿಗೂ ಮತ್ತು 'ಅವು ಹೊರಹೊಮ್ಮುವ ...ಕೇತಗಳಿಗೂ ಗಾಢವಾದ ಸಂಬಂಧವಿದೆಯಾದರೂ ...ಧನೆಗಳ ಮೂಲದ ಬಗ್ಗೆ ಕೆದಕಿದಾಗ ಅನೇಕ ವಿಷಯಗಳು ...ನಾವರಣಗೊಳ್ಳುತ್ತವೆ.


...ಭಾವನೆಗಳ ಮೂಲ ಭಯ, ಆಸೆ, ಪ್ರತೀಕಾರ, ಅಧಿಕಾರ, ...ಸ್ಥತೆಯ ವ್ಯಸನ; ಹೀಗೇ ಏನೇನೆಲ್ಲಾ ತೋರಬಹುದು. ...ದರಲ್ಲಿ ಸಾಮಾನ್ಯವಾಗಿ ಕಳೆದುಹೋಗುವ ಅಂಶವೆಂದರೆ ...ತಿ. ಪ್ರೀತಿಯೇ ಮೂಲವಾದಾಗ, ಪ್ರೀತಿಯ ಅಥವಾ ...ವದ ಅಂಶವೇ ಸ್ಪಷ್ಟವಾಗಿರುವಾಗ ಆಚರಣೆ ಮತ್ತು ...ವಾಚಾರಗಳೆಲ್ಲಾ ಸಹಜವಾಗಿಯೇ, ಗೌಣವಾಗಿ ...ತರಿಕವಾಗಿ ಹೊಂದುವಂತಹ ಭಾವನಾತ್ಮಕವಾದ ...ಬಂಧವೇ ಪ್ರಧಾನವಾಗುತ್ತದೆ. ಸಮಾಜದಲ್ಲಿ ಕಾಣುವ ...ನ ಮೇಲಿನ ಪ್ರೀತಿ, ಹನುಮನ ಮೇಲಿನ ಅಭಿಮಾನ, ...ಮನ ಮೇಲಿರುವಂತಹ ರಾಜಭಕ್ತಿ ಇತ್ಯಾದಿಗಳ ಹಿಂದೆ ...ಮಾನಸದಲ್ಲಿ ಸೂಕ್ಷ್ಮ ರೀತಿಯಲ್ಲಿ ಮೊದಲಿನಿಂದಲೂ ...ವಡಿಸುತ್ತಾ ಬಂದಿರುವಂತಹ ಸಂವೇದನೆಗಳ ಮೂಲ ...ದ್ದೇಶವೇನಾಗಿದ್ದಿರಬಹುದು ಅಥವಾ ಇಂಥದ್ದೇ ಎಂದು ...ದಿಗೂ ನಿರ್ದಿಷ್ಟವಾಗಿ ಹೇಳಲಾಗದ ಅನೇಕ ವಿಚಾರಗಳು, ...ರಣಗಳು ಮೂಲವಾಗಿವೆಯೇ ಎಂಬುದು ಕೂಡ ...ರ್ಚೆಯ ವಸ್ತುವಾಗಿ ಒದಗಿತ್ತು.

ಚರಿತ್ರೆಯ ಬುದ್ಧ ಮತ್ತು ಪುರಾಣದ ಬುದ್ಧ

... ಇಷ್ಟೆಲ್ಲಾ ವಿಷಯಗಳ ಕೊನೆಯಲ್ಲಿ ಹರಾಲ್ಡ್ ಹೆಟ್ಜಲ್ ...ನ್ನು ಬೀಳ್ಕೊಡುವಾಗ ಒಂದು ಮಾತು ಸ್ಪಷ್ಟವಾಗಿ ...ಳಿದರು.


"ನೀವು ನಿಮ್ಮ ಮಾತಿನಲ್ಲಿ ಬರಿಯ ಪೌರಾಣಿಕ ...ತ್ರಗಳಾದ ಶಿವ, ಗಣಪ, ದೇವಿ ಹಾಗೂ ಕಾವ್ಯಗಳ ...ತ್ರಗಳಾದ ರಾಮ, ಕೃಷ್ಣ, ಸೀತೆ, ಹನುಮ, ಜೊತೆಗೆ ...ದಿಕ ಪರಿಕಲ್ಪನೆಗಳಾದ ಇಂದ್ರ, ಅಗ್ನಿ, ವಾಯು, ವರುಣರ ...ಗ್ಗೆಯೇ ಮಾತಾಡುತ್ತಿದ್ದೀರಿ ಹಾಗೂ ಈಗ ನಿಮ್ಮಲ್ಲಿ ...ಡುಬರುವಂತಹ ಆಚರಣೆಗಳ, ಹಬ್ಬಗಳ, ದಂತಕತೆಯಾಗಿ ...ಳಿದಿರುವ ಮಿತ್‌ಗಳ ಆಧಾರದಲ್ಲಿ ಹೈಪೋಥಿಸಿಸ್ ...ತಿಯಲ್ಲಿ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ...ಮಾಡುತ್ತಿದ್ದೀರಿ. ಆದರೆ, ಚಾರಿತ್ರಿಕವಾಗಿದ್ದ ಬುದ್ಧ ಪೌರಾಣಿಕ ...ದ್ಧನಾಗಿ ಕಳೆದುಹೋಗಿರುವ ಬಗ್ಗೆ ಆಲೋಚನೆಯನ್ನು ...ಮಾಡಬೇಕಿತ್ತು, ಆಧ್ಯಾತ್ಮಿಕವಾಗಿ ಮತ್ತು ಧಾರ್ಮಿಕವಾಗಿರುವ ...ಬೌದ್ಧಧರ್ಮ ಸಾಮಾಜಿಕ ಮತ್ತು ಐತಿಹಾಸಿಕ ...ದಲಾವಣೆಗಳಲ್ಲಿ ಮೂಲ ಧಮ್ಮವನ್ನೇ ಕಳೆದುಕೊಳ್ಳುತ್ತಿರುವ ...ಗ್ಗೆ ವಿಚಾರ ಮಾಡಬೇಕಿತ್ತು. ಇದು ಇನ್ನಾದರೂ ...ಗಮನಿಸದಿದ್ದರೆ ಮುಂದೊಂದು ದಿನ ಇದೇ ಗಣಪ, ...ತ್ತು ಶಿವರ ಪೌರಾಣಿಕ ಪಾತ್ರಗಳ ಸಾಲಿಗೆ ಬುದ್ಧನೂ ...ಪೂರ್ಣ ಅಳವಡಿಕೆಗೆ ಒಳಗಾಗಿಬಿಡುತ್ತಾನೆ."

ಅವರ ಕಾದಂಬರಿ 'ಬುದ್ಧಾಸ್ ಲಾಸ್ಟ್ ಸರ್ಮನ್ ...ನ್ ಹೆಲ್'ನಲ್ಲಿ ಇದೇ ವಿಷಯವನ್ನು ಅವರು ...ಪ್ರಸ್ತಾಪಿಸುವರು. ಎಂ ಎಂಬ ಹೆಸರಿಲ್ಲದ ಬರಿಯ ...ಕ್ಷರವಷ್ಟೇ ಇರುವ ಪಾತ್ರವೊಂದು ಬುದ್ಧನ ಸಂಧಿಸುವ




ಮತ್ತು ಪ್ರಸ್ತುತ ಸಮಾಜದಲ್ಲಿ ಬುದ್ಧನ ವಿಚಾರಗಳು ಪಲ್ಲಟಗೊಳ್ಳುತ್ತಿರುವುದರ ಬಗ್ಗೆ, ಅವು ಅಂತರ್ಗತವಾಗಿ ಇರುವ ಸೆಲೆಗಳ ಬಗ್ಗೆ ತಿಳಿಸುತ್ತಾ ಹೋಗುತ್ತಾರೆ. ವಾಸ್ತವಾಂಶಗಳನ್ನು, ತಾತ್ವಿಕ ಗ್ರಹಿಕೆಗಳನ್ನು ಕಥಾರೂಪದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಅವರು ತಮ್ಮ ಕಾದಂಬರಿಯಲ್ಲಿ ಮಾಡುತ್ತಾರೆ. ಪುಸ್ತಕದ ಬೆನ್ನು ನುಡಿಗಳಲ್ಲಿ, "ಲೌಕಿಕ ಪ್ರಪಂಚಕ್ಕೆ ಹಿಂದಿರುಗುವ ಮಿಸ್ಟಿಕ್ (ದಾರ್ಶನಿಕ) ಒಂದು ಐಕಾನ್ (ಪ್ರತಿಮೆ) ಆಗಿ ಪರಿವರ್ತಿತನಾಗುತ್ತಾನೆ. ಒಂದು ಪೌರಾಣಿಕ ಪ್ರಕಟಣೆ ಅಥವಾ ಪ್ರದರ್ಶನವಾಗುತ್ತಾನೆ. ಈ ಪೌರಾಣಿಕ ಬುದ್ಧನೇ ಶಾಕ್ಯರ ವಂಶದ ಚಾರಿತ್ರಿಕ ಬುದ್ಧನಿಗಿಂತ ಹೆಚ್ಚು





ಆಕರ್ಷಕನೂ ಮತ್ತು ಸಾಮಾನ್ಯ ಜನರ ಗಮನ ಸೆಳೆಯುವವನೂ ಆಗುತ್ತಾನೆ. ಅವನ ತಿರಸ್ಕೃತ ಪ್ರತಿದಿನದ ಜೀವನವನ್ನು ಹೊರತುಪಡಿಸಿಬಿಟ್ಟರೆ ಅಲ್ಲಿ ಬರಿಯ ಕಾಲ್ಪನಿಕ ಮತ್ತು ಯೂಸರ್ ಫ್ರೆಂಡ್ಲಿ ಚಿತ್ರಣವು ಉಳಿಯುತ್ತದೆ. ಶುದ್ಧ ಮಿಥ್ (ಪೌರಾಣಿಕ ರೂಪಕ) ಗಳನ್ನು ಅಗಣಿತವಾಗಿ (ಎಣೆಯಿಲ್ಲದಂತೆ) ತೀರಾ ಉನ್ನತವೆನಿಸುವಷ್ಟರ ಮಟ್ಟಿಗೆ ಪರಿಪಡಿಸಲಾಗಬಲ್ಲುದು ಹಾಗೆಯೇ ಅವು (ಪೌರಾಣಿಕ ರೂಪಕಗಳು) ವಾಸ್ತವವಾಗಿ ಆಕ್ರಮಣಕ್ಕೊಳಗಾಗದಂತದ್ದು; ಎನ್ನುತ್ತಾ ಬುದ್ಧ ಸತ್ತ ಬುದ್ಧತ್ವ ಉಳಿಯಲಿ ಎಂದು ಹೇಳಿ ಮುಗಿಸುತ್ತಾರೆ.

ಈ ಕಾದಂಬರಿಯಲ್ಲಿ ಬೌದ್ಧರಲ್ಲಿ ಪ್ರಚಲಿತದಲ್ಲಿರುವ ಪುನರ್ಜನ್ಮದ ಪರಿಕಲ್ಪನೆಗಳ ಕುರಿತೂ ಜಿಜ್ಞಾಸೆಗೆ ಒಳಪಡಿಸುತ್ತಾರೆ.



ಹರಾಲ್ಡ್ ಹೆಟ್ಜೆಲ್

ಬುದ್ಧನನ್ನು ಕೊಲ್ಲು

ಬುದ್ಧನು ಹೇಳಿದನೆನ್ನಲಾದ ಮಾತುಗಳೇ ಹೀಗಿವೆ, "ಕೇಳಿದ ಮಾತನ್ನೆಲ್ಲಾ ನಂಬಬೇಡ. ಪೂರ್ವಜರಿಂದ ನನಗೆ ಸಿಕ್ಕಿದೆಯೆಂಬ ಕಾರಣಕ್ಕಾಗಿಯೇ ಪರಂಪರೆಯನ್ನು ಒಪ್ಪಬೇಡ. ಹಲವು ಬಾರಿ ಹೇಳಲಾಗಿದೆಯೆಂದೇ ಯಾವುದನ್ನೂ ನಂಬಬೇಡ; ಕೇವಲ ಕಲ್ಪನೆಗಳನ್ನು ನಂಬಬೇಡ; ಅಧಿಕಾರಸ್ಥರು, ಗುರುಗಳು ಅಥವಾ ಹಿರಿಯರು ಹೇಳಿದರೆಂದು ಯಾವುದನ್ನೂ ನಂಬಬೇಡ; ಗಮನಿಸು, ವಿಶ್ಲೇಷಿಸು, ತಾರ್ಕಿಕವಾಗಿ ಸರಿ ಇದ್ದರೆ, ಎಲ್ಲರಿಗೂ ಅದರಿಂದ ಒಳ್ಳೆಯದಾಗುವಂತಿದ್ದರೆ ಅದನ್ನು ನಂಬು ಮತ್ತು ಪಾಲಿಸು."

ಬುದ್ಧತ್ವಕ್ಕೊಯ್ಯುವ ನಿನ್ನ ಮಾರ್ಗದಲ್ಲಿ ಬುದ್ಧ ಬಂದರೆ ಅವನ ಕೊಲ್ಲು ಎಂದು ಹೇಳುವ ಬುದ್ಧ, ನಿನ್ನ ಸತ್ಯಾನ್ವೇಷಣೆಯ ದಾರಿಯಲ್ಲಿ ಬರುವ ತಂದೆ, ತಾಯಿ, ಸೋದರ ಬಳಗವನ್ನು ನಿವಾರಿಸಿಕೋ ಎಂದು ಹೇಳುವ ಯೇಸುವಿಗಿಂತ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ. ನನ್ನ ಮಾತನ್ನೂ ನೇರಾನೇರ ಒಪ್ಪಿಕೊಳ್ಳಬೇಡ ಎಂದು ಎಚ್ಚರಿಸುತ್ತಾನೆ.

ಬೀಜವನ್ನು ಕಾಯುವವರು

ನನಗೆ ಬಹಳ ಸುಂದರ ಮತ್ತು ಅರ್ಥಗರ್ಭಿತವೆನಿಸುವ ಕಥೆಯಿದು:

ಒಬ್ಬ ಶ್ರೀಮಂತ ತನ್ನ ಸಮಸ್ತ ಆಸ್ತಿಯ ಅಧಿಕಾರವನ್ನು ನಾಲ್ಕು ಸೊಸೆಯರಲ್ಲಿ ಯಾರಿಗೆ ಕೊಡಬೇಕು ಎಂದು ಆಲೋಚಿಸುತ್ತಾನೆ. ಅದಕ್ಕೆ ಪೂರಕವಾದಂತಹ ಒಂದು ಪರೀಕ್ಷೆಯನ್ನು ಮಾಡಲು ನೋಡುತ್ತಾನೆ. ಹಾಗೆಯೇ ತಾನು ಯಾವುದೋ ಪ್ರಯಾಣಕ್ಕೆ ಹೋಗುವವನಿದ್ದು, ತನ್ನ ನಾಲ್ಕು ಸೊಸೆಯರನ್ನು ಕರೆದು ಅವರಿಗೆಲ್ಲರಿಗೂ ಒಂದೊಂದು ಹಿಡಿಯಷ್ಟು ಹುರಳೀ ಬೀಜಗಳನ್ನು ಕೊಟ್ಟು "ನಾನು ಮರಳಿ ಮನೆಗೆ ಬಂದಾಗ ಇದನ್ನು ಮರಳಿಸಬೇಕು" ಎಂದು ಹೊರಡುತ್ತಾನೆ.

ಒಬ್ಬಳು ಸೊಸೆ ಮನೆಯಲ್ಲಿ ಅಷ್ಟೊಂದು ಧಾನ್ಯ ತುಂಬಿ ತುಳುಕಾಡುತ್ತಿರಲು ಮಾವ ಮರಳಿದಾಗ ಒಂದು ಹಿಡಿ ಹುರುಳೀ ಬೀಜವನ್ನು ಕೊಡುವುದು ಕಷ್ಟವೇನಲ್ಲ ಎಂದು ಅವನ್ನು ಕೊಟ್ಟ ದಿನವೇ ಎತ್ತಲೋ ಕೈ ಬಿಟ್ಟುಬಿಡುತ್ತಾಳೆ. ಕಸದಲ್ಲಿ ಹೊರಟು ಹೋಗುತ್ತದೆ. ಮತ್ತೊಬ್ಬಳು ಇದ್ಯಾವ ದೊಡ್ಡ ವಿಷಯ ಎಂದು ಆ ಬೀಜಗಳನ್ನು ಹುರಿದುಕೊಂಡು ತಿಂದು ಮುಗಿಸುತ್ತಾಳೆ. ಮೂರನೆಯವಳು ಬಲು ನಿಷ್ಠೆ ಮತ್ತು ಶ್ರದ್ಧಾಭಕ್ತಿಗಳಿಂದ ಮಾವನ ಮಾತುಗಳನ್ನು ಪಾಲಿಸಿಯೇ ತೀರಲು ಆ ಬೀಜಗಳನ್ನು ಒಂದು ಪುಟ್ಟ ಪೆಟ್ಟಿಗೆಯಲ್ಲಿಟ್ಟು ಅದನ್ನು ತನ್ನ ಕಬ್ಬಿಣದ ಪೆಟಾರಿಯಲ್ಲಿ ಜೋಪಾನವಾಗಿಡುತ್ತಾಳೆ. ನಾಲ್ಕನೆಯವಳು ಆ ಬೀಜಗಳನ್ನು ಮನೆಯ ಹಿತ್ತಲಿನ ತೋಟದಲ್ಲಿ ಬಿತ್ತುತ್ತಾಳೆ.

ಒಂದಷ್ಟು ಕಾಲವಾದ ಮೇಲೆ ಮನೆಯೊಡೆಯ ಮಾವ ಹಿಂದಿರುಗುತ್ತಾನೆ. ನಾಲ್ವರೂ ಸೊಸೆಯರನ್ನ ವಿಚಾರಿಸುತ್ತಾನೆ. ಮೊದಲನೆಯವಳು ಉಗ್ರಾಣದಿಂದ ತಂದು ಕೊಟ್ಟರೆ, ಎರಡನೆಯವಳು ತಾನು ತಿಂದುದ್ದಾಗಿ ಒಪ್ಪಿಕೊಳ್ಳುತ್ತಾಳೆ. ಮೂರನೆಯವಳು ಎಚ್ಚರಿಕೆಯಿಂದ ಪೆಟಾರಿಯಲ್ಲಿಟ್ಟಿದ್ದ ಬೀಜಗಳನ್ನು ಒಪ್ಪಿಸಿದರೆ, ನಾಲ್ಕನೆಯವಳು ಬೀಜವು ಬೀಜದ ರೂಪದಲ್ಲೇ ಉಳಿದಿಲ್ಲ ಎಂದು ಮಾವಯ್ಯನನ್ನು ಹಿತ್ತಲಿಗೆ ಕರೆದುಕೊಂಡು ಹೋಗಿ ತೋರಿಸುತ್ತಾಳೆ. ಬಿತ್ತಿದ ಬೀಜಗಳು ಗಿಡಗಳಾಗಿ ಬೆಳೆದು ಮತ್ತೆ ಕಾಯಿ ಬಿಟ್ಟಿದ್ದವು.

ಮಾವ ಸಂತೋಷಗೊಂಡು ಕೊನೆಯ ಸೊಸೆಗೆ ಅಧಿಕಾರವನ್ನು ನೀಡಿ, ಅವಳ ಸಹಾಯಕ್ಕೆ ಮೂರನೆಯವಳನ್ನು ನೇಮಿಸುತ್ತಾನೆ.

ಹಾಗೆ ಯಾವುದೇ ಜ್ಞಾನಿಗಳ ವಿಚಾರಗಳು ಬೀಜರೂಪದಲ್ಲಿ ದೊರಕಿರುವಾಗ ನಮ್ಮಲ್ಲಿ ಮೊದಲಿನ ಇಬ್ಬರು ಸೊಸೆಯರ ರೀತಿಯಲ್ಲಿಯೇ ವರ್ತಿಸುತ್ತೇವೆ. ಕಠಿಣ ರೂಪದ ಶ್ರದ್ಧಾ ನಂಬುಗೆಗಳನ್ನು ಇರಿಸಿಕೊಂಡು ಮೂರನೆಯ ಸೊಸೆಯಂತೆ ಆಗುವುದು ನಿಷ್ಠಾವಂತಿಕೆ ಎಂದುಕೊಳ್ಳುತ್ತೇವೆ. ಆದರೆ ನಾಲ್ಕನೆಯ ಸೊಸೆಯಂತೆ ವರ್ತಿಸುವ ಜನರು ಬಹಳ ಕಡಿಮೆ.

ಬಿತ್ತದ ಬೀಜಗಳು

ಯೇಸುವೂ ಕೂಡ ಜ್ಞಾನಿಗಳಿಂದ ದೊರಕುವ ವಿಚಾರಗಳನ್ನು ಬೀಜಗಳಿಗೆ ಹೋಲಿಸುತ್ತಾ ಅವು ಬೀಳುವಂತಹ ಮುಳ್ಳಿನ ಪೊದೆ, ಗಟ್ಟಿನೆಲ, ಕಲ್ಲುಬಂಡೆ ಮತ್ತು ಹದವಾದ ಮಣ್ಣು ಎಂದು ಮನಸ್ಥಿತಿಗಳ ಮಾದರಿಗಳನ್ನು ಕೊಡುತ್ತಾನೆ.

ಮಹಾಸ್ತಿತ್ವವಾದವನ್ನು ಧ್ವನಿಸುವ ಬುದ್ಧನಿಗೆ ಅನಂತವಾಗಿರುವ ಅಸ್ತಿತ್ವದಲ್ಲಿ ಜ್ಞಾನವು ಅನಿಯಮಿತವಾಗಿ ಮತ್ತು ಸದಾವಿಕಸಿತವಾಗುತ್ತಾ ಎಲ್ಲರಿಗೂ ದೊರಕುವ ಸಾಧ್ಯತೆಯನ್ನು ಕಂಡುಕೊಂಡಿರುವುದರಿಂದಲೇ ನಿನ್ನ ದಾರಿಯಲ್ಲಿ ಎದುರಾಗುವ ಬುದ್ಧನನ್ನು ಕೊಲ್ಲು ಎಂದು ಸಾಂಕೇತಿಕವಾಗಿ ಹೇಳುತ್ತಾನೆ. ಅದೊಂದು ಅನಂತವಾದ ಸಾಧ್ಯತೆ. ಹಾಗೆಯೇ ತನ್ನನ್ನು ಅನುಸರಿಸಬೇಡ ಎನ್ನುವುದರಲ್ಲಿ ಸಂಪೂರ್ಣ ನಿರಹಂಕಾರದ ಬುದ್ಧ ಕಾಣುತ್ತಾನೆ. ಅವನು ತೋರುವ ಮಾರ್ಗವೂ ಬುದ್ಧತ್ವಕ್ಕೇ ಹೊರತು ಸಂಸ್ಥಾಪಿತ ಧರ್ಮಕ್ಕಲ್ಲ. ಮೂಲ ಸ್ವರೂಪದಲ್ಲಿಯೇ ಅದಕ್ಕೆ (ಮನಸ್ಸಿಗೆ) ತಕ್ಕ ಸಂಸ್ಕಾರ ಬೇಕು. ಏಕೆಂದರೆ ದೊರಕಿದ ಸಂಸ್ಕಾರದ ಪ್ರಭಾವದಿಂದ ಚೇತನವು ತನ್ನ ಬೆಳವಣಿಗೆಯನ್ನು ಕಂಡುಕೊಳ್ಳುತ್ತದೆ. ಅದರ ಬಗ್ಗೆಯೇ ಬುದ್ಧನಿಗೆ ಅತೀವ ಆಸಕ್ತಿ ಇದ್ದದ್ದು.

ಯೇಸು ತನ್ನದೊಂದು ಸಾಮತಿಯಲ್ಲಿ ಇದನ್ನು ಸರಳವಾಗಿ ನಿರೂಪಿಸುತ್ತಾನೆ. "ದೇವರ ಸಾಮ್ರಾಜ್ಯವು ರೈತನೊಬ್ಬನು ತನ್ನ ಹೊಲದಲ್ಲಿ ಮಾಡಿದ ಬಿತ್ತನೆಗೆ ಹೋಲಿಕೆಯಾಗಿದೆ. ಬಿತ್ತನೆಯ ಬಳಿಕ ಅವನು ರಾತ್ರಿಯಲ್ಲಿ ಮಲಗಿರಲಿ, ಹಗಲಲ್ಲಿ ಎದ್ದಿರಲಿ, ಅವನಿಗೆ ಹೇಗೆಂದು ತಿಳಿಯದೆಯೇ ಆ ಬೀಜವು ಮೊಳೆತು ಬೆಳೆಯುತ್ತಿರುತ್ತದೆ."


ಮಹಾಸ್ತಿತ್ವದಲ್ಲಿ ಜ್ಞಾನ ಅಥವಾ ಅರಿವು ಎಂಬುದು ಮುಕ್ತವೂ, ಅನಂತವೂ ಮತ್ತು ಅಗಾಧವೂ ಆಗಿರುವುದರಿಂದಲೇ ಎಲ್ಲಿಯೂ ಧಾರ್ಮಿಕ ಚೌಕಟ್ಟಿಗೆ ಒಳಗಾಗುವ ವ್ಯವಸ್ಥೆಯನ್ನು ಬುದ್ಧ ಉಂಟುಮಾಡಲಿಲ್ಲ. ಆ ಬುದ್ಧತ್ವಕ್ಕೆ ನಮ್ಮನ್ನು ಒಯ್ಯುವ ದಾರಿಯು ಕಲುಷಿತವಾಗಿ ನೈತಿಕವಾಗಿ ಮನಸ್ಸು ಪಲ್ಲಟವಾಗದಿರುವಂತೆ ಕಾಯ್ದುಕೊಳ್ಳಲು ಶೀಲವನ್ನು ಕಾಯ್ದುಕೊಳ್ಳಲು ಸೂಚಿಸಿದ. ಪ್ರಾಮಾಣಿಕವಾದ ನೈತಿಕತೆಯೇ ಪಾವಿತ್ರ್ಯತೆ ಅಥವಾ ಶೀಲ ಎಂಬ ವಿಚಾರವನ್ನು ನೀಡುವಲ್ಲಿ ಬೌದ್ಧಧರ್ಮವೆಂಬುದರ ಸುಳುಹಿಲ್ಲ.

ಬೌದ್ಧನಾಗಲು ಯಾರೂ ಧರ್ಮವನ್ನು ಬದಲಿಸಬೇಕಿಲ್ಲ ಎಂದು ದಲೈಲಾಮ ಹೇಳುವುದು ಈ ವಿಶಾಲಾರ್ಥದಲ್ಲಿಯೇ.

ಬೌದ್ಧವಿಚಾರಗಳೆಂದರೆ ಅವು ಬಹಳ ವ್ಯಾಪಕವೂ ಮತ್ತು ಸಾರ್ವತ್ರಿಕವೂ ಆದಂತಹ ಪ್ರಜ್ಞಾವಂತಿಕೆಯೇ ಆಗಿವೆ.

ಸರ್ವಾಸ್ತಿತ್ವದಲ್ಲಿರುವ ಪ್ರಜ್ಞೆಯಾಗಲಿ ಅಥವಾ ಅರಿವಾಗಲಿ ಒಂದು ಮಿತಿಯೊಳಗೆ ಇರುವುದಲ್ಲ ಎಂಬ ತಿಳಿವಳಿಕೆ ಇದ್ದುದ್ದರಿಂದಲೇ ಬುದ್ಧನಿಗೆ ಒಂದು ಸಂಸ್ಥಾಪಿತ ಧರ್ಮದ ನಾಯಕನಾಗಿರುವಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಅವನು ಹೇಳುವಂತಹ ಧಮ್ಮ ಎಂಬುವುದಕ್ಕೂ, ನಾವು ಸಾಮಾನ್ಯವಾಗಿ ಧರ್ಮ ಎಂದು ಉಪಯೋಗಿಸುವ ಪರಿಭಾಷೆಗೂ ವ್ಯತ್ಯಾಸವಿದೆ. ಬುದ್ಧನು ಹೇಳುವ ಧಮ್ಮ ಕಟ್ಟುಪಾಡಿನ ಆಚರಣೆಗಳಿಗೆ ಒಳಗಾಗುವುದಲ್ಲ. ಅದೊಂದು ಮುಕ್ತಾವಕಾಶದಲ್ಲಿ ಪ್ರಜ್ಞಾವಂತಿಕೆಯಿಂದ ವಿಹರಿಸುವ ಅರಿವಿನ ಇರುವಿಕೆ. ಅದು ಯಾವಾಗಲೂ, ಎಲ್ಲಾ ಕಾಲದಲ್ಲೂ ಎಲ್ಲಾ ದೇಶದಲ್ಲೂ ಮುಕ್ತ ಮತ್ತು ಗ್ರಹಣ ಸಾಧ್ಯವಾಗಿರುವಂತಹುದ್ದು. ಇದಕ್ಕೆ ಪೂರಕವಾಗಿ ಯೇಸು ಹೇಳುತ್ತಾನೆ. "ಬೆಳೆಯೇನೋ ಹೇರಳವಾಗಿದೆ. ಕೊಯಿಲುಗಾರರೋ ವಿರಳ; ಈ ಕಾರಣ ತನ್ನ ಕೊಯಿಲಿಗೆ ಆಳುಗಳನ್ನು ಕಳುಹಿಸುವಂತೆ ಬೆಳೆಯ ಯಜಮಾನನ್ನು ಪ್ರಾರ್ಥಿಸಿರಿ" ಎಂದು.

ಯೇಸುವಿಗೆ ಮಹಾಸ್ತಿತ್ವವಾದದ ಸಿದ್ಧಾಂತವನ್ನು ಹೇಳುವಂತಹ ಸಾಮಾಜಿಕ ಸನ್ನಿವೇಶ ಅವನಿಗಿರಲಿಲ್ಲ. ಆ ಭಾಷೆಯನ್ನು ಕೇಳುವವರಾಗಲಿ, ಅರ್ಥೈಸಿಕೊಳ್ಳುವವರಾಗಲಿ ಅವನ ಸುತ್ತಮುತ್ತ ಇರಲಿಲ್ಲ. ಅವನು ಬಾಳಿ ಬದುಕುತ್ತಿದ್ದ ಸಮಾಜದ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗೆ ತಕ್ಕುದಾದ ರೀತಿಯಲ್ಲಿ ಪರಿಭಾಷೆಗಳನ್ನು ಉಪಯೋಗಿಸುವ ಅಗತ್ಯವಿತ್ತು. ಆದರೆ ಹೇಳುವಂತಹ ವಿಷಯಗಳ ಆಶಯವು ಮತ್ತು ಉದ್ದೇಶವು ಆಲಯದ ಚೌಕಟ್ಟುಗಳಿಂದ ಮುಕ್ತ ಬಯಲಿಗೆ ಒಯ್ಯುವುದಾಗಿತ್ತು.



ಸಾಹಿತ್ಯ ಸಮ್ಮೇಳನ ಯಾಕೆ ದೇಗುಲದಲ್ಲಿ?

ಕರಾವಳಿಯಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನು ಹಿಂದೂ ದೇವಸ್ಥಾನಗಳಲ್ಲಿ ಮಾತ್ರ ಆಯೋಜಿಸುವ ಕೆಟ್ಟ ಪರಿಪಾಠ ಬೆಳೆಯುತ್ತಿದೆ. ಕಳೆದ ವರ್ಷ 19 ನೇ ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ದೂರದ ಪೊಳಲಿ ರಾಜರಾಜೇಶ್ವರಿ ದೇವಸ್ಥಾನದಲ್ಲಿ ನಡೆಸಿದ್ದಕ್ಕಾಗಿ ಬಹಳಷ್ಟು ಜನರು ಆಕ್ಷೇಪ ವ್ಯಕ್ತಪಡಿಸಿದ್ದರು. ಕೇವಲ ಭೋಜನದ ಖರ್ಚು ಉಳಿಸಲು ಸಾಹಿತ್ಯ ಸಮ್ಮೇಳನಗಳನ್ನು ಹಿಂದೂ ದೇವಸ್ಥಾನಗಳಲ್ಲಿ ನಡೆಸುವುದನ್ನು ಕೆಲವು ಹಿಂದೂ ಸಾಹಿತಿಗಳೇ ಖಂಡಿಸಿದ್ದರು. ಆದರೆ ಈ ಆಕ್ಷೇಪಣೆಯ ಹೊರತಾಗಿ ಈ ವರ್ಷ ಮತ್ತೆ ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ತಿನ ಜತೆಗೆ ಕಾಸರಗೋಡು ಮತ್ತು ಉಡುಪಿ ಜಿಲ್ಲಾ ಸಾಹಿತ್ಯ ಪರಿಷತ್ತುಗಳೂ ಜಂಟಿಯಾಗಿ ಕಟೀಲು ದೇವಸ್ಥಾನದ ಆವರಣದಲ್ಲಿಯೇ ಆಗಸ್ಟ್ ಕೊನೆಯಲ್ಲಿ ಒಟ್ಟಿಗೆ 20 ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧರಿಸಿವೆ. ಇದು ಕರಾವಳಿಯ ಸಾಹಿತ್ಯ ಪರಿಷತ್ತುಗಳು ವೈದಿಕರ ಕಪಿಮುಷ್ಟಿಯಲ್ಲಿ ಸಿಕ್ಕಿ ಬಿದ್ದಿರುವುದಕ್ಕೆ ಸಾಕ್ಷಿ.

ಸಾಹಿತಿಗಳಲ್ಲಿ ಎಲ್ಲ ಧರ್ಮದವರೂ ಇರುತ್ತಾರೆ. ಒಂದೆಡೆ ಸಾಹಿತ್ಯದ ನಡುವೆ ಪರೋಕ್ಷವಾಗಿಯೂ ಯಾವುದೇ ಧರ್ಮ ನುಸುಳುವುದು ನೈಜ ಸಾಹಿತಿಗಳಿಗೆ ಇಷ್ಟವಿಲ್ಲ, ಇನ್ನೊಂದೆಡೆ ದೇವಸ್ಥಾನದ ಪವಿತ್ರತೆಗೆ ಎಲ್ಲಿ ಮೈಲಿಗೆ ಆಗುತ್ತದೋ ಎಂಬ ಭಯ ಕೆಲವು ಮಹಿಳಾ ಸಾಹಿತಿಗಳಲ್ಲಿ ಇರುತ್ತದೆ. ಪ್ರಕೃತಿಯ ಫಲವತ್ತತೆಯ ಸಂಕೇತವಾದ ಮಹಿಳೆಯರ ಋತುಚಕ್ರ ದೇವರಿಗೆ ಮೈಲಿಗೆಯೆನಿಸಲು ಎಂದಿಗೂ ಸಾಧ್ಯವಿಲ್ಲ ಎಂದು ಪ್ರಜ್ಞಾವಂತರು ಹೇಳುತ್ತಾರೆ. ಆದರೆ ಸಮಾಜದ ಪಾಳೇಗಾರರು, ಧರ್ಮದ ಪಾರುಪತ್ಯಗಾರರು ಮತ್ತು ದೇವರ ಗುತ್ತಿಗೆದಾರರು ವಿಧಿಸಿರುವ ಮೈಲಿಗೆಯ ತರ್ಕವಿಹೀನ ನಿಯಮ ನಮ್ಮ ಸಮಾಜದ ಮಾನಸಿಕತೆಯಲ್ಲಿ ಶತಮಾನಗಳಿಂದ ಆಳವಾಗಿ ಬೇರೂರಿರುವುದರಿಂದ ಸಾಮಾನ್ಯ ಮಹಿಳೆಯರು ಮಾತ್ರವಲ್ಲ ಪ್ರಗತಿಪರ ಮಹಿಳಾ ಸಾಹಿತಿಗಳೂ ತಮ್ಮ ಋತುಚಕ್ರದ ನಡುವೆ ಪವಿತ್ರ ಸ್ಥಾನಗಳಿಗೆ ಹೋಗಲು ಅಳುಕುತ್ತಾರೆ. ಮೇಲಾಗಿ ಹಿಂದೂಗಳ ಮನೆಯಲ್ಲಿ ಜನನ ಅಥವಾ ಮರಣವಾಗಿದ್ದರೂ ಆ ಮನೆಯ ಎಲ್ಲ ಗಂಡಸರು-ಹೆಂಗಸರು ಸೂತಕದ ಅವಧಿಯಲ್ಲಿ ದೇವಸ್ಥಾನದೊಳಗೆ ಹೋಗುವುದಿಲ್ಲ, ಅಂತಹ ಮನಸ್ಥಿತಿಯಲ್ಲಿ ಧಾರ್ಮಿಕ ಮಡಿವಂತಿಕೆ ಬುದ್ಧಿಯ ಗಂಡಸರೂ ಸಾಹಿತ್ಯ ಸಮ್ಮೇಳನಕ್ಕಾಗಿ ದೇವಸ್ಥಾನದೊಳಗೆ ಹೋಗಬೇಕಾಗಿ ಬಂದಾಗ ಅವರೂ ಒಂದು ರೀತಿಯ ಪಾಪಪ್ರಜ್ಞೆಯಿಂದ ಬಳಲುತ್ತಾರೆ. ಇಂತಹ ಮಾನಸಿಕ ತೊಡಕುಗಳು ಸಾಹಿತ್ಯ ಸಮ್ಮೇಳನಗಳಲ್ಲಿ ಇರಬಾರದೆಂದಿದ್ದರೆ ಮತ್ತು ಎಲ್ಲಾ ಪುರುಷ-ಮಹಿಳಾ ಸಾಹಿತಿಗಳು ಮುಕ್ತ ಮನಸ್ಸಿನಿಂದ ಸಮೇಳನದಲ್ಲಿ ಭಾಗವಹಿಸಬೇಕೆಂದಿದ್ದರೆ ಯಾವುದೇ ಸಾಹಿತ್ಯ ಸಮ್ಮೇಳನವನ್ನು ದೇವಸ್ಥಾನದೊಳಗೆ ನಡೆಸಬಾರದು.

ಕಟೀಲಿನಲ್ಲಿ ನಡೆಯಲಿರುವ 20ನೇ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಮಾರ್ಗದರ್ಶನ ಮಾಡಲಿರುವವರು ಕನ್ನಡ ಸರಿಯಾಗಿ ಬರೆಯಲು ಬಾರದ ಅರೆ ಸಾಕ್ಷರ ಅರ್ಚಕರಂತೆ. ಎಂತಹ ವೈಪರೀತ್ಯ ನೋಡಿ! ಇದರ ರೂವಾರಿ ಯಾರೆಂದರೆ - ಸಾಹಿತಿಯಲ್ಲವಾದರೂ 2004-05 ರಲ್ಲಿ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಹಾಗೂ ಕುವೆಂಪುರವರ ಬಗ್ಗೆ ಅಪದ್ಧ ಮಾತನಾಡಿ ಒಕ್ಕಲಿಗರಿಂದ ಪಂಚೆ ಬಿಚ್ಚಿಸಿಕೊಂಡಿದ್ದ ಕರಾವಳಿಯ ಬ್ರಾಹ್ಮಣ ಹೋಟೆಲು ಉದ್ಯಮಿಯೊಬ್ಬರು!

- ರಾಮಕೃಷ್ಣ ಎ.ಕೆ. ಮಂಗಳೂರು

ನ್ಯಾಯದಲ್ಲಿ ಅನ್ಯಾಯ

ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಕಣ್ಣಿಗೆ ರಾಚುವಂತೆ ಕಂಡುಬರುತ್ತಿರುವ ತಾರತಮ್ಯ ನೀತಿಯನ್ನು ಬಯಲು ಮಾಡುವ ಚಿಂತನಾರ್ಹ ಲೇಖನಗಳನ್ನು ಈ ಸಂಚಿಕೆಯಲ್ಲಿ ಓದಿದಾಗ ನಿಜಕ್ಕೂ ಮನಸಿಗೆ ಪಿಚ್ಚೆನಿಸಿತು. ಕೇವಲ ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಮಾತ್ರ ತ್ವರಿತವಾಗಿ ಮರಣದಂಡನೆಯನ್ನು ವಿಧಿಸುತ್ತಿರುವ ನಮ್ಮ ನ್ಯಾಯಾಂಗ ವ್ಯವಸ್ಥೆಯ ಇಬ್ಬಗೆ ನೀತಿಯನ್ನು ಪ್ರಶ್ನಿಸುವ ಚೈತನ್ಯ ವಿಲ್ಲದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಜನರು ಅನ್ಯಾಯವಾಗಿ ತಮ್ಮ ಪ್ರಾಣವನ್ನು ಬಲಿಕೊಡುತ್ತಿರುವುದು ನಮ್ಮ ದೇಶದ ದುರಂತ. ಜಾತಿ, ಧರ್ಮ, ವರ್ಗದ ಕೆಸರಲ್ಲಿ ಬಿದ್ದು ಹೊರಳಾ ಡುತ್ತಾ ಇರುವ ನಮ್ಮ ದೇಶದಲ್ಲಿ ಪ್ರಬಲರಿಗೆ ಒಂದು ನ್ಯಾಯ, ದುರ್ಬಲರಿಗೆ ಒಂದು ನ್ಯಾಯ... ಇದೆಷ್ಟು ಸರಿ? ಅಂತ ಪ್ರತಿಯೊಬ್ಬ ನಾಗರಿಕನು ಪ್ರಶ್ನಿಸಬೇಕಾಗಿದೆ. ಆದರೆ ಅದು ಕನಸಿನ ಮಾತು ಎಂಬುದು ಕೂಡ ಕಠೋರ ವಾಸ್ತವ...

- ಲಕ್ಷ್ಮೀಕಾಂತ ಮಿರಜಕರ, ಶಿಗ್ಗಾಂವ

ಲೋಕಾಯುಕ್ತರಲ್ಲೇ ಭ್ರಷ್ಟಾಚಾರ ಹುಟ್ಟಿದ್ದು ಹೇಗೆ

ಲೋಕಾಯುಕ್ತದೊಳಗಿನ ಭ್ರಷ್ಟಾಚಾರದ ಬಗ್ಗೆ ಜನರಲ್ಲಿ ದೊಡ್ಡ ಆತಂಕ ಎದ್ದಿದೆ ನಿಜ. ಆದರೆ ಲೋಕಾಯುಕ್ತ ಅಧಿಕಾರಿಗಳಲ್ಲಿ ಇಂತಹ ಒಂದು ಮಾನಸಿಕತೆ ಬೆಳೆಯಲು



ಕಾರಣಕರ್ತರು ರಾಜಕಾರಣಿಗಳೇ ಎಂಬುದೂ ನಿಜ. ನ್ಯಾ.ವೆಂಕಟಾಚಲರಿಂದ ಹಿಡಿದು ಈಗಿನವರೆಗಿನ ಅವಧಿಯಲ್ಲಿ ನೂರಾರು ಲೋಕಾಯುಕ್ತ ತನಿಖೆ ನಡೆದು ಲೋಕಾಯುಕ್ತರು ಶಿಸ್ತು ಕ್ರಮ ಮತ್ತು ಶಿಕ್ಷೆಗಾಗಿ ಸರಕಾರಕ್ಕೆ ಕಳುಹಿಸಿದ ವರದಿಗಳ ಹಣೆಬರಹ ಏನಾಗಿದೆ ಎಂಬುದನ್ನೂ ಒಮ್ಮೆ ಪರಿಶೀಲಿಸಬೇಕು. ಲೋಕಾಯುಕ್ತರು ಸರಕಾರಕ್ಕೆ ಕಳುಹಿಸಿದ ನೂರಾರು ವರದಿಗಳಲ್ಲಿ 10% ಪ್ರಕರಣಗಳಲ್ಲೂ ಶತಭ್ರಷ್ಟ ಸರಕಾರಿ ನೌಕರರಿಗೂ ಶಿಕ್ಷೆ ಆಗಿಲ್ಲ, ಹೆಚ್ಚಿನ ಎಲ್ಲ ಪ್ರಕರಣಗಳಲ್ಲಿ ಮಹಾಭ್ರಷ್ಟ ನೌಕರರನ್ನು ಸರಕಾರ ಖುಲಾಸೆಗೊಳಿಸಿದ್ದು ಮಾತ್ರವಲ್ಲ ಅವರಿಗೆ ಬಡ್ತಿ ಕೊಟ್ಟು ಇನ್ನೂ ಹೆಚ್ಚಿನ ಫಲವತ್ತಾದ ಜಾಗಕ್ಕೆ ವರ್ಗ ಮಾಡಿದೆ. ಹಾಗಾದರೆ ಲೋಕಾಯುಕ್ತ ಅಧಿಕಾರಿಗಳು ಅತ್ಯಂತ ಪ್ರಾಮಾಣಿಕತೆಯಿಂದ ಆಳ ತನಿಖೆ ನಡೆಸಿ ಭ್ರಷ್ಟರು ತಪ್ಪಿಸಿಕೊಳ್ಳದಂತೆ ಅಪಾರ ಪರಿಶ್ರಮದಿಂದ ವಾಟರ್-ಟೈಟ್ ವರದಿ ತಯಾರಿಸಿ ಸರಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದರೆ ಸರಕಾರವು ಅದನ್ನು ವರ್ಷಗಟ್ಟಲೆ ಕೋಲ್ಡ್ ಸ್ಟೋರೇಜಿನಲ್ಲಿ ಇಟ್ಟು ನಂತರ ಭ್ರಷ್ಟರಿಗೆ ಯಾವುದೇ ಶಿಕ್ಷೆ ಕೊಡದೇ ಖುಲಾಸೆಗೊಳಿಸುತ್ತದೆ. ಇದನ್ನು ಸರಕಾರದವರು ಉಚಿತವಾಗಿ ಮಾಡುವುದಿಲ್ಲ, ಆ ಭ್ರಷ್ಟ ನೌಕರನಿಂದ ಭರ್ಜರಿಯಾಗಿ ತಿಂದು ತೇಗಿ ನಂತರವೇ ಆ ಭ್ರಷ್ಟನಿಗೆ ದಯೆ ತೋರಿಸುವುದು. ಹೀಗೆ ತಮ್ಮ ಅಪಾರ ಪರಿಶ್ರಮ ಮತ್ತು ಪ್ರಾಮಾಣಿಕತೆ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ಆಗುತ್ತಿರುವುದನ್ನು ಕಂಡು ಲೋಕಾಯುಕ್ತ ಅಧಿಕಾರಿಗಳು ಆಲೋಚಿಸಿದ್ದೇನೆಂದರೆ- ಹೇಗಿದ್ದರೂ ಭ್ರಷ್ಟರು ಏನೂ ಶಿಕ್ಷೆಯಿಲ್ಲದೇ ಪಾರಾಗುತ್ತಾರೆ ಮತ್ತು ತಮ್ಮ ಎಲ್ಲಾ ಶ್ರಮ ನೀರಿನಲ್ಲಿ ಹೋಮ ಆಗುತ್ತದೆ, ಮೇಲಾಗಿ ತಮ್ಮ ವರದಿಯ ಆಧಾರದಲ್ಲಿಯೇ ಭ್ರಷ್ಟ ನೌಕರರನ್ನು ಬ್ಲಾಕ್-ಮೇಲ್ ಮಾಡಿ ಆಳುವ ಪಕ್ಷದ ರಾಜಕಾರಣಿಗಳು ಭ್ರಷ್ಟನಿಂದ ಚೆನ್ನಾಗಿ ಮುಕ್ಕುತ್ತಾರೆ ಮತ್ತು ನಂತರ ಅವನನ್ನು ಖುಲಾಸೆಗೊಳಿಸುತ್ತಾರೆ. ಹಾಗಿರುವಾಗ ತಾವೇಕೆ ಪ್ರಾಮಾಣಿಕತೆ ತೋರಿ ಮಹಾ ಲಂಚಕೋರ ರಾಜಕಾರಣಿಗಳಿಗೆ ಭ್ರಷ್ಟ ನೌಕರರನ್ನು ಸುಲಿಯಲು ಅನುಕೂಲ ಮಾಡಿಕೊಡಬೇಕು? ಅದರ ಬದಲು ತಾವೇ ಸ್ವಲ್ಪ ತಿಂದು ಬಿ-ರಿಪೋರ್ಟ್ ಹಾಕಿ ಭ್ರಷ್ಟ ನೌಕರರನ್ನು ಖುಲಾಸೆಗೊಳಿಸುವುದೇ ಬುದ್ಧಿವಂತಿಕೆಯಲ್ಲವೇ? - ಎಂಬ ಸಿನಿಕತನ ಲೋಕಾಯುಕ್ತದೊಳಗೆ ಬೆಳೆಯಲು ಶತಭ್ರಷ್ಟ ರಾಜಕಾರಣಿಗಳೇ ಮೂಲಕಾರಣ. ಲೋಕಾಯುಕ್ತರು ಸರಕಾರಕ್ಕೆ ಕಳುಹಿಸಿದ ವರದಿಗಳಲ್ಲಿ ಕನಿಷ್ಠ ಅರ್ಧದಷ್ಟು ಭ್ರಷ್ಟರಿಗಾದರೂ ಸರಕಾರ ಶಿಕ್ಷೆ ಕೊಟ್ಟಿದ್ದರೆ ಬಹುಶಃ ಇಂತಹ ಸಿನಿಕತನ ಲೋಕಾಯುಕ್ತ ಅಧಿಕಾರಿಗಳಲ್ಲಿ ಬೆಳೆಯುತ್ತಲೇ ಇರಲಿಲ್ಲ ಹಾಗೂ ರಾಜಕಾರಣಿಗಳಿಗೆ ತಿನ್ನಲು ತಾವೇ ಅನುಕೂಲ ಮಾಡಿಕೊಡುವುದಕ್ಕಿಂತ ತಾವೇ ಸ್ವತಃ ತಿಂದರೆ ತಪ್ಪೇನು ಎಂಬ ಸ್ವಾರ್ಥಭರಿತ ಮಾನಸಿಕತೆ ಲೋಕಾಯುಕ್ತದೊಳಗೆ ಬೆಳೆಯುತ್ತಿರಲಿಲ್ಲ.

ಹಾಗಾಗಿ ಸರಕಾರದವರು ಮೊಟ್ಟ ಮೊದಲು ಜನತೆಗೆ ತಿಳಿಸಬೇಕಾಗಿರುವುದೇನೆಂದರೆ - ಹಿಂದಿನ ಹದಿನೈದು ವರ್ಷಗಳಲ್ಲಿ ಬೇರೆ ಬೇರೆ ಲೋಕಾಯುಕ್ತರು ಎಷ್ಟು ಭ್ರಷ್ಟ ಸರಕಾರಿ ನೌಕರರ ತನಿಖಾ ವರದಿಯನ್ನು ಸರಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ ಹಾಗೂ ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಭ್ರಷ್ಟ ಸರಕಾರಿ ನೌಕರರಿಗೆ ಶಿಕ್ಷೆ ಆಗಿದೆ? ಜತೆಗೆ ಎಷ್ಟು ಪ್ರಕರಣಗಳಲ್ಲಿ ಶಿಕ್ಷೆ ಕೊಡಲು ಸಾಧ್ಯವಾಗಿಲ್ಲ ಹಾಗೂ ಅದಕ್ಕೆ ಲೋಕಾಯುಕ್ತ ವರದಿಯಲ್ಲಿ ಇದ್ದ ಲೋಪದೋಷಗಳೇನು ಎಂಬುದನ್ನೂ ಸರಕಾರ ಜನತೆಗೆ ತಿಳಿಸಲಿ. ಯಾವುದೇ ಭ್ರಷ್ಟನನ್ನು ಸರಕಾರ ಖುಲಾಸೆಗೊಳಿಸಿದ್ದು ಯಾಕೆ ಎಂಬುದನ್ನೂ ತಿಳಿಯುವ ಹಕ್ಕು ಜನತೆಗೆ ಇದೆ. ಯಾಕೆಂದರೆ ಕರದಾತರ ಹಣದಿಂದ ತಾನೇ ಲೋಕಾಯುಕ್ತದೊಳಗಿನ ಎಲ್ಲರಿಗೂ ಸಂಬಳ ಕೊಡುತ್ತಿರುವುದು. ಆ ನಂತರ ಈಗಿನ ಲೋಕಾಯುಕ್ತದೊಳಗಿನ ಭ್ರಷ್ಟ ಅಧಿಕಾರಿಗಳ ವಿರುದ್ಧವೂ ಕಠಿಣ ಕ್ರಮ ಕೈಗೊಂಡರೆ ಅದು ಸಮರ್ಥನೀಯ. ಎಲ್ಲಾ ಅನಿಷ್ಟಗಳಿಗೂ ಮೂಲ ರಾಜಕಾರಣಿಗಳೊಳಗಿನ ಭ್ರಷ್ಟಾಚಾರ ಎಂಬುದನ್ನು ಯಾರೂ ಮರೆಯಬಾರದು.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಲವಲವಿಕೆಯಿಂದಿರುವುದೇ ಯೋಗ

'ಯೋಗಕ್ಕೆ ತಕ್ಕದ ಗುಣ ಇದೆಯೇ?' ಎಂಬ ವಿಡಂಬಾರಿಯವರ ಲೇಖನ ವಿಶಿಷ್ಟವಾಗಿತ್ತು; ಮತ್ತೆ ಮತ್ತೆ ಓದುವಂತಿತ್ತು, ನಿಜ, ಲೇಖಕರು ಹೇಳುವಂತೆ, 'ನಮ್ಮ ಬದುಕು ಸಾರ್ಥಕವಾಗಬೇಕಾದರೆ ಬೇಕಾಗಿರುವುದು ವಿಜ್ಞಾನ, ವೈಚಾರಿಕವಾಗಿ ಆಲೋಚಿಸುವುದು ಮೊದಲಾದುವೇ ಹೊರತು, ಚಿತ್ತವನ್ನು ಅಚಲಗೊಳಿಸಿ ವಿಚಾರಶಕ್ತಿಯನ್ನೇ ಹೊಸಕಿ ಹಾಕಿ ನಿಷ್ಕ್ರಿಯನನ್ನಾಗಿ ಮಾಡುವ ಯೋಗಾನುಭವ ಅಲ್ಲವೇ ಅಲ್ಲ'.

ಇದಕ್ಕೆ ಪೂರಕವಾಗಿ ಹೇಳುವುದಾದರೆ, ಈ ಭೂಮಂಡಲದಲ್ಲಿ ಇರುವುದು ಮಾನವ ಜೀವಿ ಮಾತ್ರ ಅಲ್ಲ, ಲಕ್ಷೋಪಲಕ್ಷ ಜೀವಿಗಳ ಪೈಕಿ ಮಾನವ ಕೂಡಾ ಒಬ್ಬ ಅಷ್ಟೆ. ಆ ಯಾವ ಜೀವಿಗಳನ್ನೂ ಹೀಗೆ ದೇವರು, ಮೋಕ್ಷ, ಪುನರ್ಜನ್ಮ ಮೊದಲಾದುವೆಲ್ಲ ಕಾಡಿದ್ದಿಲ್ಲ, ಅಂಥ ವ್ಯಸನಗಳನ್ನು ಅಂಟಿಸಿಕೊಂಡು ಅವು ತಮ್ಮ ಜೀವನವನ್ನು ವ್ಯರ್ಥಗೊಳಿಸಿಕೊಳ್ಳುವುದೂ ಇಲ್ಲ, ನಾಲ್ಕೇ ದಿನ ಬದುಕಿದರೂ ಅವು 'ವನಸುಮ'ದಂತೆ ಬದುಕಿ ಈ



ಭೂಮಿಗೆ ಬಂದ ಕೆಲಸವನ್ನು ನಿಷ್ಠೆಯಿಂದ ಮಾಡಿ ಮರೆಯಾಗುತ್ತವೆ. ಅವುಗಳದ್ದು ನಿಜವಾಗಿಯೂ ಸಾರ್ಥಕ ಬದುಕು.

ಮಾನವರಾದ ನಾವು ಈ ಭೂಮಿಯಲ್ಲಿ ಚಿರಂಜೀವಿಗಳೇನಲ್ಲ, ನಮ್ಮ ದೇಹಕ್ಕೆ ವಯಸ್ಸಾಗುತ್ತದೆ, ಕಾಯಿಲೆ ಕಸಾಲೆಗಳು ಕಾಡುತ್ತವೆ, ಒಂದು ದಿನ ಸತ್ತೂ ಹೋಗುತ್ತೇವೆ. ಯಾವ ಧ್ಯಾನ, ಯೋಗ, ಕೊನೆಗೆ ದೇವರೂ ನಮ್ಮನ್ನು ಸಾವಿನಿಂದ ಪಾರುಮಾಡುವುದಿಲ್ಲ, ಇದು ವಾಸ್ತವ.

ನಮ್ಮ ದೇಹದ ಆರೋಗ್ಯದ ಬಗ್ಗೆ ಗಮನ ಕೊಡುವುದರಲ್ಲಿ ತಪ್ಪೇನೂ ಇಲ್ಲ, ಆದರೆ ಅದನ್ನೇ ಒಂದು ವ್ಯಸನವನ್ನಾಗಿ ಮಾಡಿಕೊಂಡು ಕೂತರೆ ಈ ಭೂಮಿಗೆ ನಾವು ಬಂದುದರ ಉದ್ದೇಶ ಈಡೇರುವುದು ಹೇಗೆ? ಪುನರ್ಜನ್ಮದ ಗೀಳು ಅಂಟಿಸಿಕೊಂಡು ಇಹ ಜನ್ಮವನ್ನು ವ್ಯರ್ಥಮಾಡಿಕೊಳ್ಳುವ ಮೂರ್ಖತನದಂತೆಯೇ ಇದುವೂ ಅಲ್ಲವೇ? ನಾವು ಇಲ್ಲದೆಯೂ ಈ ಭೂಮಿಯ ಸರ್ವ ವ್ಯಾಪಾರವೂ ನಡೆಯುತ್ತಲೇ ಇರುತ್ತದೆ. ಹೀಗಿರುವಾಗ ನಮ್ಮನ್ನು ನಾವು ಮಹಾ ಶ್ರೇಷ್ಠರು ಎಂಬಂತೆ ತಿಳಿದುಕೊಂಡು 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಎಂಬಂಥ ಬದು... ಬದುಕುವುದರಲ್ಲಿ ಅರ್ಥವೇನಿದೆ? ನನ್ನ ಪ್ರಕಾರ ನ... ಕೆಲಸಗಳನ್ನು ನಿಷ್ಠೆಯಿಂದ ಮತ್ತು ಲವಲವಿಕೆಯ... ಮಾಡುವುದಕ್ಕಿಂತ ಮಿಗಿಲಾದ ಯೋಗಸಾಧನೆ ಇಲ್ಲ...

- ಶ್ರೀನಿವಾಸ ಕಾ...

ಸತ್ತ ಮನುಷ್ಯನೇ ಬಲಶಾಲಿ

ಕೆಲವು ಸಂದರ್ಭಗಳಲ್ಲಿ ಜೀವಂತ ಮನುಷ್ಯನಿ... ಸತ್ತ ಮನುಷ್ಯ ಹೆಚ್ಚು ಬಲಶಾಲಿಯಾಗಿರುತ್ತಾನೆ ... ನಾಣ್ಣುಡಿ ಇಂಗ್ಲಿಷಿನಲ್ಲಿದೆ. ಇದರ ಅರ್ಥ ಕೆಲವೊ... ಒಬ್ಬ ಮನುಷ್ಯ ಜೀವಂತವಾಗಿರುವಾಗ ಅವನು ... ಮೇಲೆ ಬೀರುವ ಪ್ರಭಾವಕ್ಕಿಂತ ಅವನು ಸತ್ತ ... ಅವನ ಹೆಸರು, ನೆನಪು ಮತ್ತು ವಿಚಾರಧಾರೆ ... ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ... ಮನೋವೈಜ್ಞಾನಿಕ ಸತ್ಯ ಎಂದು ಸಾಬೀತಾಗಿದೆ. ... ಜೊತೆ ಸಹಾನು ಭೂತಿಯೂ ಸೇರಿ ಮಾನಸಿಕ ಪರಿಣಾ... ಹೆಚ್ಚಿಸುತ್ತದೆ. ಇದೇ ಕಾರಣಕ್ಕೆ ಒಸಾಮಾ ಬಿನ್ ಲಾಡೆನ್... ಅಮೆರಿಕದವರು ಕೊಂದ ಮೇಲೆ ಅವನ ಶವ... ಅಮೆರಿಕದ ಸೈನಿಕರೇ ಕೊಂಡು ಹೋಗಿ ಆಳ ಸಮುದ್ರ... ಕಲ್ಲು ಕಟ್ಟಿ ಮುಳುಗಿಸಿದರು. ಎಷ್ಟು ಹುಡುಕಿದ... ಯಾರಿಗೂ ಆ ಶವದ ಅಸ್ಥಿಪಂಜರ ಸಹ ಸಿಗಬಾರದ... ಉದ್ದೇಶ ಇದರ ಹಿಂದಿತ್ತು. ಯಾಕೆಂದರೆ ಅವನ ಶವ... ಅವನ ಸಂಬಂಧಿಕರಿಗೆ ಬಿಟ್ಟು ಕೊಟ್ಟಿದ್ದರೆ ಆ ಶವ... ಸಮಾಧಿ ಮಾಡಿದ ಸ್ಥಳ ಮುಂದೊಮ್ಮೆ ದೊಡ್ಡ ಯ... ಸ್ಥಳವಾಗುತ್ತಿತ್ತು, ಅಲ್ಲೊಂದು ದರ್ಗಾವೂ ಸ್ಥಾಪನೆ... ಆದೊಂದು ಪವಿತ್ರ ಸ್ಥಳವಾಗುತ್ತಿತ್ತು. ಸತ್ತ ಒಸಾಮಾ ಜೀ... ಒಸಾಮಾನಿಗಿಂತ ಹೆಚ್ಚು ಅಪಾಯಕಾರಿ ಎಂದು ... ಸನ್ನಿವೇಶದಲ್ಲಿ ಸತ್ಯವಾಗುತ್ತಿತ್ತು ಹಾಗೂ ಅದರಿಂದ ಇ... ಪ್ರೇರಣೆ ಮತ್ತು ಪ್ರಚೋದನೆ ಪಡೆದು ಒಬ್ಬ ಒಸಾ... ಸಮಾಧಿಯ ನೆರಳಲ್ಲಿ ಇನ್ನೂ ಸಾವಿರಾರು ಹೆಚ್ಚು ... ಒಸಾಮಾ ಲಾಡೆನ್‌ಗಳು ಹುಟ್ಟಿಕೊಳ್ಳುವ ಮನೋವೈ... ಸಾಧ್ಯತೆಯನ್ನು ಅಮೆರಿಕದವರು ಮನಗಂಡಿದ್ದರು.

ಇದೇ ಕಾರಣಕ್ಕೆ ಕಸಬ್ ಮತ್ತು ಅಫಜಲ್ ... ಇವರ ಶವಗಳನ್ನೂ ಜೈಲಿನಲ್ಲಿಯೇ ದಫನ್ ಮಾಡಲಾಯ...

ಆದರೆ ಈಗ ಯಾಕೂಬ್ ಮೆಮನ್‌ನ ಶವ... ಅವನ ಸಂಬಂಧಿಕರಿಗೆ ಕೊಟ್ಟು ಅವನೊಬ್ಬ ಹು... ಹಾಗೂ ದೊಡ್ಡ ಮಹಾತ್ಮ ಎಂಬ ರೀತಿ... ಮುಂಬೈಯಲ್ಲಿ ಅವನ ಅಂತ್ಯಕ್ರಿಯೆ ನಡೆದಿದ್ದು ... ಅದಕ್ಕೆ ಒಂದು ಲಕ್ಷದಷ್ಟು ಜನರು ಸೇರಿದ್ದು ಮು... ದಿನಗಳಲ್ಲಿ ಆ ಸ್ಥಳವು ಇನ್ನೂ ಕೆಲವು ದಾರಿ ... ಯುವಕರು ತಲೆತಿರುಕ ಉಗ್ರವಾದಿಗಳಾಗಿ ಪರಿವ... ಯಾಗಲು ಪ್ರೇರಣೆ ಕೊಡುವ ಸ್ಥಳವಾಗುವ ಸ... ಉಂಟಾಗಬಹುದೇನೋ.

- ಅಭಿಷೇಕ್ ಎ ಪಡಿವಾಲ್, ...

ಸ್ಪಷ್ಟೀಕರಣ


ಪತ್ರಿಕೆಯ ಆಗಸ್ಟ್ 5, 2015ರ ಸಂಚಿಕೆಯಲ್ಲಿ ... ಮತ್ತು ನನ್ನ ಮಗ ಅಬ್ದುಲ್ ಖುದ್ದೂಸ್ ... ನಿರಾಧಾರವಾಗಿ, ಸುಳ್ಳು ಸುದ್ದಿ ಪ್ರಕಟಗೊಂಡಿರುವ... ಹಲವು ಸ್ಪಷ್ಟೀಕರಣಗಳು.

ನಿಮ್ಮ ಪತ್ರಿಕೆಯಲ್ಲಿ ಬರೆದಿರುವಂತೆ ನಾವು ... ಮೂಲದವರಲ್ಲ, ನಾನು ಹುಟ್ಟಿದ್ದು ಶಿವಮೊಗ್ಗ ಜ... ರಿಪ್ಪನ್‌ಪೇಟೆಯಲ್ಲಿ, ನನಗೆ ನಾಲ್ಕು ಹೆಣ್ಣು ಹಾಗು ... ಗಂಡು ಮಕ್ಕಳಿದ್ದು ಎಲ್ಲರೂ ಶಿವಮೊಗ್ಗ ಜಿ... ಸೊರಬದಲ್ಲಿ ಜನಿಸಿರುವುದು.

ನನ್ನ ಆರು ಮಕ್ಕಳೂ 10ನೇ ತರಗತಿಯವರೆಗೆ ಸ... ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ್ದು ... ಕನ್ನಡಿಗರಾಗಿದ್ದು, ಕನ್ನಡ ಚರ್ಚಾಸ್ಪರ್ಧೆ, ವಚನ ... ಮೊದಲಾದವುಗಳಲ್ಲಿ ರಾಜ್ಯಕ್ಕೆ ಪ್ರಥಮ- ದ್ವಿ... ಸ್ಥಾನಗಳನ್ನು ಗಳಿಸಿರುತ್ತಾರೆ. ನನ್ನ ಮಕ್ಕಳು ಕ... ಪ್ರತಿಭೆಯಿಂದ ಮಾತ್ರ ನೌಕರಿಗಳನ್ನು ಪಡೆದಿದ್ದು ಯಾ... ರೀತಿಯ ಒಳ ನುಸುಳುವಿಕೆ, ಪ್ರಭಾವ, ಲಂಚ ಮೊದ... ಮೂಲಗಳಿಂದ ನೌಕರಿ ಪಡೆದಿರುವುದಿಲ್ಲ.

ನನ್ನ ಎಲ್ಲ ಮಕ್ಕಳಲ್ಲೂ ಕಾಯಕ ಗುಣ, ಪರ... ಸಹಿಷ್ಣುತೆ, ದೇಶಭಕ್ತಿ, ದೇಶಾಭಿಮಾನ, ಪರೋಪ... ನಿಷ್ಠೆ-ನಿಷ್ಪಕ್ಷಪಾತ ಸೇವೆ, ಜಾತ್ಯತೀತ ಮನೋಭಾವ ... ಮಾನವೀಯ ಗುಣಗಳನ್ನು ಬಾಲ್ಯದಿಂದಲೇ ... ಸುಸಂಸ್ಕೃತರನ್ನಾಗಿ ಬೆಳೆಸಿದ್ದೇನೆ.

1990ರಲ್ಲಿ ಅಡ್ವಾಣಿಯವರ ರಥಯಾತ್ರೆ ನ... ದಾವಣಗೆರೆಯಲ್ಲಿ ಕೋಮು ಹಿಂಸಾಚಾರದ ದಳ್ಳುರಿ ...




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ...

ವರು ಅಮಾಯಕರು ಬಲಿಯಾಗಿದ್ದರು. ಇದೀ ಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶ ಹೊತ್ತಿ ಯುತ್ತಿದ್ದಾಗ ಬಸಾಪುರ ಎಂಬ ಗ್ರಾಮದಲ್ಲಿ ಂದೇ ಮುಸ್ಲಿಂ ಕುಟುಂಬವಿದ್ದು, ಅಲ್ಲಿಗೆ ನೂರಾರು ಭಕ್ತರು' ಬಂದು ನಮ್ಮನ್ನು ಹುಡುಕುವ ಮೊದಲೇ ಪುರದ ಹಿಂದೂ ಬಂಧುಗಳು ನಮ್ಮನ್ನು ಕಬ್ಬಿನ ಂಲ್ಲಿ ನಾಲ್ಕು ದಿನದವರೆಗೆ ಬಚ್ಚಿಟ್ಟು ಕಾಪಾಡಿದ್ದು ಗೊತ್ತೆ? ನನ್ನ ಹಾಗೂ ನನ್ನ ಸಂಸಾರದ ಒಳ್ಳೆಯ ಕಳಿಂದಾಗಿ.

ಹೀಗಿರುವಾಗ ನನ್ನ ಮಗ ಬಿ. ಅಬ್ದುಲ್ ದ್ದೂಸ್‌ನನ್ನು 'ಖದೀಮ ಖುದ್ದೂಸ್', 'ರಕ್ತಹೀರಿ ಾಡುವ ಸರ್ವಾಧಿಕಾರಿ', 'ದರ್ಪಿಷ್ಟ', 'ಬೇಜವಾಬ್ದಾರಿ ಂಕಾರಿ', 'ಕೇಂದ್ರ ಕಚೇರಿಯಲ್ಲಿ ಕುಳಿತು ಆಟ ಡಿಸುವವ' ಎಂದೆಲ್ಲ ಬರೆದಿರುವುದು ಸತ್ಯಕ್ಕೆ ದೂರವಾದ ು.

ಬಡ್ತಿ, ಟ್ರಾನ್ಸ್‌ಫರ್ ದಂಧೆಯಲ್ಲಿ ಕೈಯಾಡಿಸಿ, ತನ್ನಿಂದ ರುವ ನಾಲ್ಕು ಜನ ಅಧಿಕಾರಿಗಳಿಗೆ, ಅರ್ಹತೆಯಿದ್ದೂ ಗೆ ಅವಕಾಶ ತಪ್ಪಿಸುವಂತೆ ಮಾಡಿದ್ದಾನೆ" ಎಂದು ರುವುದರ ಅರ್ಥವೇನು? ಕ.ರಾ.ರ.ಸಾ ಸಂಸ್ಥೆಯಲ್ಲಿ ಕಾರಿ ಆಗಿರುವ ನನ್ನ ಮಗ ಕರ್ನಾಟಕ ರಾಜ್ಯ ದ ರಸ್ತೆ ಸಾರಿಗೆ ಸಂಸ್ಥೆಗೆ ಎಂಡಿಯೇ? ಕಮೀಷನರೇ? ಸಚಿವನೆ? ವಾಸ್ತವವಾಗಿ ಎಂಡಿ, ಕಮೀಷನರ್ ವಾದ ಉನ್ನತ ಸಮಿತಿಯು ಅಧಿಕಾರಿಗಳ ಪೂರ್ವಾಪರ ಲಿಸಿ, ಜೇಷ್ಠತೆ, ಅರ್ಹತೆ, ನಿಷ್ಠುರತೆ ಮತ್ತು ಾಣಿಕತೆ ಮೊದಲಾದ ಮಾನದಂಡದ ಮೇಲೆ ಬಡ್ತಿ ರಿಸುತ್ತಾರೆ. ಹೀಗಿರುವಾಗ ನನ್ನ ಮಗ ಹೇಗೆ ರುವರ ಹಕ್ಕನ್ನು ಕಬಳಿಸಬಲ್ಲ?

ನನ್ನ ಮಗ 1999 ರ ನವೆಂಬರ್‌ನಲ್ಲಿ ಕ.ರಾ.ರ.ಸಾ. ್ಥೆಯಲ್ಲಿ ಸಹಾಯಕ ಲೆಕ್ಕಾಧಿಕಾರಿಯಾಗಿ ಕಗೊಂಡಿದ್ದು ಅಲ್ಲಿಂದ ಈವರೆಗೆ ಕ.ರಾ.ರ.ಸಾ. ಸಂಸ್ಥೆಯ



ಕಚೇರಿ, ಕೆಂಗೇರಿ, ದಾವಣಗೆರೆ ಹಾಗೂ ಹಾಲಿ ಚಿಕ್ಕಮಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾನೆ. ವಿರುದ್ಧ 16 ವರ್ಷದ ವೃತ್ತಿಜೀವನದಲ್ಲಿ ಒಂದೇ ಕಪ್ಪು-ಚುಕ್ಕೆಯಿರುವುದಿಲ್ಲ.

ಪ್ರಾಮಾಣಿಕ, ನಿಷ್ಠುರ-ನಿಷ್ಪಕ್ಷಪಾತ-ಶುದ್ಧಹಸ್ತನಾಗಿ ಕೆಲಸ ಂದು ಆತನನ್ನು ಹರಿಸಿ ಕಳಿಸಿ, ಇಂದಿನವರೆಗೆ ಅದೇ ್ಗದಲ್ಲಿ ನನ್ನ ಮಗ ನಡೆಯುತ್ತಿರುವುದು ತಪ್ಪೇ?

ದಾವಣಗೆರೆಯಲ್ಲಿ ಒಂದು ವಾಸದ ಮನೆಯನ್ನು ಾರಣವಾದದ್ದು) ನಾನು-ನನ್ನ ಮಕ್ಕಳು ಸೇರಿ ಿಕೊಂಡಿದ್ದು, ಅದನ್ನು ಹೊರತುಪಡಿಸಿ ನಮ್ಮಗಳ ಲ್ಲಿ ಹಣ-ಸೈಟು-ಮನೆಗಳಿದ್ದರೆ ಅದನ್ನು ಸರ್ಕಾರ ಟ್ಟುಗೋಲು ಹಾಕಿಕೊಳ್ಳಲು ನಮ್ಮ ಸಂಪೂರ್ಣ ಗೆಯಿದೆ.

"ಭಾರತೀಯರು ನಾವೆಲ್ಲ ಒಂದು, ದೇಶ ಅಳಿಸೋಣ- ಉಳಿಸೋಣ" ಎಂಬ ಮನೋಭಾವದೊಂದಿಗೆ, ಿ, ನಿಷ್ಠೆ, ಪ್ರಾಮಾಣಿಕತೆ, ಸಹೋದರತ್ವ, ಸಹಬಾಳ್ವೆ ಮೊದಲಾದ ಮಾನವೀಯ ಮೌಲ್ಯಗಳನ್ನು ನನ್ನ ಬಿ. ಅಬ್ದುಲ್ ಖುದ್ದೂಸ್ ಹಾಗೂ ಉಳಿದ ಮಕ್ಕಳ ದಲ್ಲಿ ಬಿತ್ತಿ-ಬೆಳೆಸಿದ್ದಕ್ಕೆ ಸಿಕ್ಕ ಉಡುಗೊರೆ "ಅಪ್ಪನ ಗುಣಗಳನ್ನು ಬಟ್ಟೆ ಇಳಿಸಿಕೊಂಡಿರುವ ಖುದ್ದೂಸ್ ್ನೇ ಮೀರಿಸಿದ" ಎಂಬ ಮಾತು.

ಕೋಮು ಸೌಹಾರ್ದ ಮತ್ತು ಭಾರತದ ಬಹುಸಂಸ್ಕೃತಿಗೆ ರಾಡುವ, ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ದ್ಧ ದನಿ ಎತ್ತುವ, ನಾವೆಲ್ಲ ತುಂಬ ಅಭಿಮಾನದಿಂದ ವ ನಿಮ್ಮ ಪತ್ರಿಕೆಯಲ್ಲಿ ನಮ್ಮ ವಿರುದ್ಧ ನಿರಾಧಾರವಾದ ರದಿ ಪ್ರಕಟಗೊಂಡಿದ್ದು ನಮ್ಮ ದೌರ್ಭಾಗ್ಯವೆನ್ನದೇ ು. ಆದರೂ ನಿಮ್ಮ ಒಳಿತಿಗಾಗಿ ಸದಾ ಹಂಬಲಿಸಿ ್ಗಿಸುತ್ತಿರುತ್ತೇವೆ.

- ಕೆ. ಮೊಹಮುದ್ ಬಾಷಾ, ದಾವಣಗೆರೆ

(ಕೆ. ಮೊಹಮುದ್ ಬಾಷಾ ಮತ್ತು ಅವರ ಪುತ್ರ ಬಿ. ್ದುಲ್ ಖುದ್ದೂಸ್ ಅವರಿಗೆ ನೋವುಂಟುಮಾಡುವ ್ದೇಶ ನಮ್ಮದಾಗಿರಲಿಲ್ಲ, ಕೆಲವರು ಕೊಟ್ಟ ತಪ್ಪು ಮಾಹಿತಿಯನ್ನಾಧರಿಸಿ ವರದಿಯನ್ನು ತಯಾರಿಸಲಾಗಿತ್ತು. ಮೂಲಕ ಬಾಷಾ ಕುಟುಂಬಕ್ಕೆ ಆದ ನೋವಿಗೆ ವಿಷಾದ ವ್ಯಕ್ತಪಡಿಸುತ್ತೇವೆ. - ಸಂ)

ಮಳೆ ಹುಡುಗನ ಪ್ರೇಮ್ ಕಹಾನಿ


ಆತ್ಮಹತ್ಯೆ ಮಾಡಿಕೊಂಡ ರೈತರ ಪರ ಹೋರಾಟ ಮಾಡುತ್ತಿರುವ ಪ್ರೇಮ್ ಬರಗಾಲದಲ್ಲೂ ಮಳೆ ಸುರಿಸುತ್ತಿದ್ದಾರೆ. ಇವರ ನಟನೆಯ 'ಮಳೆ' ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ.

** ರೈತರ ಆತ್ಮಹತ್ಯೆಗೂ ತಮಗೂ ಸಂಬಂಧವೇ ಇಲ್ಲ ಅನ್ನುವಂತೆ ಸ್ಯಾಂಡಲ್‌ವುಡ್ ನಾಯಕರು ವರ್ತಿಸುತ್ತಿದ್ದಾರೆ. ಇಂತಹ ವೇಳೆಯಲ್ಲಿ ತಾವು ಆತ್ಮಹತ್ಯೆ ಮಾಡಿಕೊಂಡ ಮಂಡ್ಯದ ರೈತರ ಮನೆಗಳಿಗೆ ಭೇಟಿ ನೀಡಿದ್ದೀರಿ. ಯಾಕೆ ನಾಯಕರದ್ದು ಈ ರೀತಿಯ ವರ್ತನೆ?*

ಬೇರೆಯವರ ಬಗ್ಗೆ ನಾನು ಯಾವತ್ತೂ ಮಾತಾಡುವುದಿಲ್ಲ. ನನ್ನ ಕೆಲಸವನ್ನು ನಾನು ಮಾಡುತ್ತೇನೆ. ರೈತರ ಆತ್ಮಹತ್ಯೆಯ ಸುದ್ದಿ ಆದಾಗೆಲ್ಲ ನಾನು ನೊಂದುಕೊಂಡಿದ್ದೇನೆ. ರೈತರ ಪರ ಹೋರಾಟಗಳಲ್ಲಿ ಭಾಗವಹಿಸಿದ್ದೇನೆ. ಇದರ ಭಾಗವಾಗಿ ನಾನು ರೈತರ ಮನೆಗಳಿಗೆ ಭೇಟಿ ಮಾಡಿದೆ. ಕೂಡಲೇ ರೈತರ ಆತ್ಮಹತ್ಯೆ ನಿಲ್ಲಿಸುವಲ್ಲಿ ಕ್ರಮ ತೆಗೆದುಕೊಳ್ಳಿ ಅಂತ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಿದ್ದೇನೆ. ಯಾವ ರೈತರೂ ಇಂತಹ ಆಲೋಚನೆ ಮಾಡಬಾರದು. ರೈತರ ಪರವಾಗಿ ಯಾವತ್ತಿಗೂ ನಾವು ಇದ್ದೇವೆ.

** ನೀವು ಮಂಡ್ಯ ರೈತರನ್ನು ಭೇಟಿ ಮಾಡಿದ್ದಕ್ಕೂ ಈ ವಾರ ತಮ್ಮ 'ಮಳೆ' ಸಿನಿಮಾ ಬಿಡುಗಡೆ ಆಗುತ್ತಿರುವುದಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆಯಲ್ಲ?*

ನನ್ನ ಹಿನ್ನೆಲೆ ಗೊತ್ತಿಲ್ಲದವರು ಹೀಗೆ ಮಾತನಾಡಬಹುದು. ನಾನು ಹೋರಾಟದ ಹಾದಿಯಲ್ಲೇ ನಡೆದು ಬಂದವನು. ಇಫ್ಟಾ, ಸಮುದಾಯದಂಥ ತಂಡಗಳಲ್ಲಿ ಕೆಲಸ ಮಾಡಿದವನು. ವಿದ್ಯಾರ್ಥಿ ಹೋರಾಟದ ಸಂಘಟನೆಯ ಜತೆಗೆ ಸಕ್ರಿಯನಾಗಿದ್ದೆ. ರೈತರ ಆತ್ಮಹತ್ಯೆಗೂ ನನ್ನ ಸಿನಿಮಾ ಪ್ರಚಾರಕ್ಕೂ ಯಾವುದೇ ಸಂಬಂಧವಿಲ್ಲ. ಹಾಗೆ ಕಲ್ಪಿಸಿಕೊಂಡರೆ, ಅದಕ್ಕಿಂತ ನೋವಿನ ಸಂಗತಿ ಮತ್ತೊಂದಿಲ್ಲ. ಇನ್ನೂ ಸತ್ಯ ಹೇಳಬೇಕೆಂದರೆ 'ಮಳೆ' ಚಿತ್ರಕ್ಕಾಗಿ ನಾನು ನಯಾಪೈಸೆ ಪಡೆದಿಲ್ಲ. ಗೆಳೆಯನಿಗಾಗಿ ನಾನು ಉಚಿತವಾಗಿ ನಟಿಸಿದ್ದೇನೆ.



** ರಾಜ್ಯಾದ್ಯಂತ ಬರಗಾಲ ಆವರಿಸಿಕೊಳ್ಳುತ್ತಿದೆ. ಇಂತಹ ವೇಳೆಯಲ್ಲಿ 'ಮಳೆ' ಬಿಡುಗಡೆ ಆಗುತ್ತಿದೆ. ಇದು ನಿಮ್ಮ ಆಶಯ ಕೂಡನಾ?*

'ಮಳೆ' ಸಿನಿಮಾದ ಮೂಲಕ ಇಡೀ ರಾಜ್ಯಾದ್ಯಂತ ಮಳೆ ಆಗಲಿ ಎಂದು ಪ್ರಾರ್ಥಿಸೋಣ. 'ಮಳೆ' ಕೇವಲ ಸಿನಿಮಾ ಇಂಡಸ್ಟ್ರಿಗೆ, ನಿರ್ಮಾಪಕರಿಗೆ ಮಾತ್ರ ಒಳ್ಳೆಯದು ಮಾಡುವುದು ಬೇಡ. ರೈತರಿಗೂ ಅದು ಚೈತನ್ಯದ ಚಿಲುಮೆ ಆಗಲಿ. ಹಾಗಂತ ಸಿನಿಮಾದಲ್ಲಿ ರೈತರ ವಿಚಾರಗಳು ಇಲ್ಲ. ಇದೊಂದು ಪಕ್ಕಾ ಲವ್‌ಸ್ಟೋರಿ. ಇಬ್ಬರ ಪ್ರೇಮಿಗಳ ಜತೆ ಮಳೆ ಕೂಡ ಪಾತ್ರ ಮಾಡಿದೆ. ಹೀಗಾಗಿಯೇ ಚಿತ್ರಕ್ಕೆ ಮಳೆ ಅಂತ ಹೆಸರಿಟ್ಟಿದ್ದೇವೆ.

** ನಿರ್ಮಾಪಕ ಆರ್.ಚಂದ್ರುಗೆ ಉಚಿತ ಕಾಲ್‌ಶೀಟ್ ಕೊಟ್ಟಿದ್ದು ನಿಜವಾ?*

ಏನೇ ಉತ್ತರ ಕೊಟ್ಟರೂ, ಅದು ಪ್ರಚಾರ ಅನಿಸಿಬಿಡುತ್ತದೆ. ನನ್ನ ಮತ್ತು ಚಂದ್ರು ನಡುವಿನ ಬಾಂಧವ್ಯಕ್ಕಾಗಿ ಸಿನಿಮಾ ಮಾಡಿದ್ದೇನೆ ಅನ್ನುವುದು ಸೂಕ್ತ. 'ಚಾರ್‌ಮಿನಾರ್' ನಂತರ ಮತ್ತೊಂದು ಅಪರೂಪದ ಕತೆ ಹೇಳಿದರು ಚಂದ್ರು. ಹೀಗಾಗಿ 'ಮಳೆ' ಸಿನಿಮಾದಲ್ಲಿ ನಾನು ನಟಿಸಿದೆ. ಇದೇ ಮೊದಲ ಬಾರಿಗೆ ಅಮೂಲ್ಯ ಮತ್ತು ನಾನು ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದೇವೆ. ಈಗಾಗಲೇ ಚಿತ್ರದ ಕುರಿತು ಸಾಕಷ್ಟು ನಿರೀಕ್ಷೆ ಮೂಡಿದೆ.

** 'ಮಳೆ' ಸಿನಿಮಾದಲ್ಲಿ ನಿಮ್ಮದು ಯಾವ ರೀತಿಯ ಪಾತ್ರ?*

ಪಕ್ಕಾ ಲವರ್‌ಬಾಯ್. 'ಚಾರ್‌ಮಿನಾರ್' ರೀತಿಯಲ್ಲೇ ಇಲ್ಲಿಯೂ ಹಲವು ತಿರುವುಗಳು ಇವೆ. ಪಾತ್ರಕ್ಕಾಗಿ ಸಾಕಷ್ಟು ಕಸರತ್ತೂ ಮಾಡಿದ್ದೇನೆ. ತೇಜಸ್ ಅವರ ಚೊಚ್ಚಲು ಸಿನಿಮಾ ಇದು. ಅವರೂ ಕೂಡ ಸ್ಟೈಲಿಶ್ ಆಗಿ ನನ್ನನ್ನು ತೋರಿಸಿದ್ದಾರೆ. ಪ್ರೇಕ್ಷಕರು ಖಂಡಿತಾ ಈ ಸಿನಿಮಾವನ್ನು ಒಪ್ಪಿಕೊಳ್ಳುತ್ತಾರೆ.


** 'ಮಳೆ' ತಂಡದೊಂದಿಗೆ ನೀವು ಮುನಿಸಿಕೊಂಡಿದ್ದೀರಿ. ಪ್ರಚಾರಕ್ಕಾಗಿ ಹೋಗುತ್ತಿಲ್ಲ ಅನ್ನುವ ಮಾತಿತ್ತು?*

ಅದೆಲ್ಲ ಸುಳ್ಳು. ನಾನು ಬೇರೆ ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾಗ ಪ್ರೆಸ್‌ಮೀಟ್‌ಗೆ ಹೋಗೋಕೆ ಆಗಿರಲಿಲ್ಲ. ಆನಂತರ ಪ್ರತಿಯೊಂದು ಕೆಲಸದಲ್ಲೂ ಭಾಗವಹಿಸಿದ್ದೇನೆ. ಗಾಸಿಪ್‌ಗಳು ಯಾಕೆ ಹುಟ್ಟಿಕೊಳ್ಳುತ್ತವೋ ಗೊತ್ತಿಲ್ಲ.

** ಮತ್ತೆ ಚಂದ್ರು ಸಿನಿಮಾದಲ್ಲಿ ನಟಿಸುತ್ತೀರಿ ಎಂಬ ಸುದ್ದಿ ಇದೆ?*

ಸದ್ಯ ಚಂದ್ರು ಹೊಸ ಸಿನಿಮಾದಲ್ಲಿ ಬಿಜಿ ಆಗಿದ್ದಾರೆ. ಅನೂಪ್ ಅವರನ್ನು ಸಿನಿಮಾ ಇಂಡಸ್ಟ್ರಿಗೆ ಪರಿಚಯಿಸುತ್ತಿದ್ದಾರೆ. ನಾನೂ ಕೂಡ ಬೇರೆ ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಇಬ್ಬರ ಕಮಿಟ್‌ಮೆಂಟ್‌ಗಳು ಮುಗಿದ ಮೇಲೆ ನೋಡೋಣ.' ■

ಭೂಸ್ವಾಧೀನ ಮಸೂದೆ: ತೆರೆಮರೆಯ ಕಸರತ್ತುಗಳು



ಮೋದಿ ಸರ್ಕಾರದ ಮುಖವಾಡಗಳು ಒಂದೊಂದಾಗಿ ಕಳಚಿಬೀಳುತ್ತಿವೆ. ಜನರಿಗೆ ಇದೊಂದು ರೈತ, ಬಡಜನ, ಅಲ್ಪಸಂಖ್ಯಾತ ವಿರೋಧಿಯೂ ಮತ್ತು ದೊಡ್ಡ ಭೂಮಾಲಿಕರು, ಬಂಡವಾಳಶಾಹಿಗಳು ಹಾಗೂ ಹಿಂದೂ ರಾಷ್ಟ್ರೀಯವಾದಿಗಳ ಪರವೂ ಆಗಿರುವ ಸರ್ಕಾರ ಎನ್ನುವುದು ತಡವಾಗಿಯಾದರೂ ಅರ್ಥವಾಗತೊಡಗಿದೆ. ಭೂಕಬಳಿಕೆಯ ಮಸೂದೆ, ಸಮಾಜ ಕಲ್ಯಾಣ ಯೋಜನೆಗಳಿಗೆ ಕತ್ತರಿಪ್ರಯೋಗ, ಅಲ್ಪಸಂಖ್ಯಾತರ ಮೇಲೆ ಹೆಚ್ಚಿರುವ ದೈಹಿಕ ಹಾಗೂ ಶಾಬ್ದಿಕ ದಾಳಿ ಇತ್ಯಾದಿಗಳು ಮೋದಿ ಸರ್ಕಾರದ ನಿಜರೂಪವನ್ನು ಬಯಲುಗೊಳಿಸುತ್ತಿವೆ. ಅದೀಗ ತನ್ನ ಕರಾಳ, ರೈತವಿರೋಧಿ ಭೂಸ್ವಾಧೀನ ಮಸೂದೆಯನ್ನು ಕಾಯ್ದೆಯಾಗಿಸಲು ಶತಾಯಗತಾಯ ಪ್ರಯತ್ನಿಸುತ್ತಿರುವುದು ಕಾರ್ಪೋರೇಟು ಕುಳಗಳ ಋಣಸಂದಾಯಕ್ಕಾಗಿಯೇ ಹೊರತು ಇನ್ನಾವ ಕಾರಣಕ್ಕೂ ಅಲ್ಲವೆನ್ನುವುದೂ ಜನರಿಗೆ ಅರ್ಥವಾಗಿದೆ. ಮಸೂದೆಗೆ ಸಂಸತ್ತಿನ ಅನುಮೋದನೆ ಸಿಗದಿರುವುದರಿಂದ ಹತಾಶೆಗೊಳಗಾದ ಸರ್ಕಾರ ಸುಗ್ರೀವಾಜ್ಞೆ ಮೇಲೆ ಸುಗ್ರೀವಾಜ್ಞೆ ಹೊರಡಿಸುತ್ತಲೇ ಇದೆ. ಒಂದೇ ಮಸೂದೆಗೆ ಇಷ್ಟೊಂದು ಸುಗ್ರೀವಾಜ್ಞೆಗಳನ್ನು ಹೊರಡಿಸಿರುವುದು ಬಹುಶಃ ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿ. ದೇಶಾದ್ಯಂತ ವ್ಯಕ್ತವಾಗಿರುವ ವ್ಯಾಪಕ ವಿರೋಧ ಮತ್ತು ಪ್ರತಿಪಕ್ಷಗಳ ಒತ್ತಡಗಳ ಹಿನ್ನೆಲೆಯಲ್ಲಿ ಮಸೂದೆಯನ್ನು ಪರಿಶೀಲನೆಗಾಗಿ ಬಿಜೆಪಿ ಮುಖಂಡ ಎಸ್.ಎಸ್.ಅಹ್ಲುವಾಲಿಯ ನೇತೃತ್ವದ ಸಂಸತ್ತಿನ ಜಂಟಿ ಸಮಿತಿಗೆ ಒಪ್ಪಿಸಲಾಗಿದೆ ನಿಜ. ಆದರೆ ಇತ್ತೀಚಿನ ಮಾಹಿತಿಗಳು ಹೇಳುವಂತೆ ಸಮಿತಿಯಿಂದ ರೈತಪರ ತೀರ್ಮಾನಕ್ಕಾಗಿ ಚಾತಕಪಕ್ಷಿಯಂತೆ ಕಾಯುತ್ತಿರುವವರ ನಿರೀಕ್ಷೆಗಳು ಹುಸಿಯಾಗುವ ಸಾಧ್ಯತೆಗಳೇ ಹೆಚ್ಚೆಂದು ತೋರುತ್ತದೆ. ಮೋದಿ ಸರ್ಕಾರ ತನ್ನ ಗುಪ್ತ ಉದ್ದಿಶ್ಯಗಳನ್ನು ಈಡೇರಿಸುವುದಕ್ಕೋಸ್ಕರ ವಾಮಮಾರ್ಗಗಳನ್ನೂ ಅನುಸರಿಸಲು ಹೇಸುವುದಿಲ್ಲ ಎಂಬುದಕ್ಕೆ ಒಳ್ಳೆಯ ನಿದರ್ಶನವಿದು.


ಹಲವಾರು ರೈತ ಸಂಘಟನೆಗಳು, ಗ್ರಾಮೀಣ ಜನ ಚಳವಳಿಗಳು ಮತ್ತು ವಿಷಯತಜ್ಞರು ಸಮಿತಿಯ ಮುಂದೆ ಹಾಜರಾಗಿ ಮಸೂದೆಯ ಕುರಿತು ತಮಗಿರುವ ಭಿನ್ನಾಭಿಪ್ರಾಯಗಳನ್ನು ಮತ್ತು ಮಸೂದೆಯ ಸುಧಾರಣೆಗಾಗಿರುವ ಸಲಹೆ, ಸೂಚನೆಗಳನ್ನು ಲಿಖಿತವಾಗಿ ಸಲ್ಲಿಸಿದ್ದಾರೆ. ಅವರ ಹೇಳಿಕೆಗಳಲ್ಲಿ ಹಿಂದೆಂದೂ ಕಂಡಿರದ ಕ್ರೋಧ ತುಂಬಿರುವುದನ್ನು ಸಮಿತಿಯ ಹಲವಾರು ಸದಸ್ಯರು ಗಮನಿಸಿದ್ದಾರೆ. ಆದರೆ ಈಗ ಲಭ್ಯವಾಗಿರುವ ರಹಸ್ಯ ದಾಖಲೆಗಳು ಬಯಲುಗೊಳಿಸುವಂತೆ ಇವರೆಲ್ಲರ ಹೇಳಿಕೆಗಳ ಸಾಮಾನ್ಯ ಇಂಗಿತವನ್ನು ತಿರುಚುವ ಚತುರ ಪ್ರಯತ್ನವೊಂದು ನಡೆಯುತ್ತಿದೆ. ಸಮಿತಿಗೆ ಸಲ್ಲಿಸಲಾದ ಸಲಹೆಗಳನ್ನೆಲ್ಲ ವಿಶ್ಲೇಷಣೆಗೊಳಪಡಿಸಿದ ಸರ್ಕಾರದ ಭೂಸ್ವಾಧೀನ ವಿಭಾಗದ ಉಪಕಾರ್ಯದರ್ಶಿ ತೀರ್ಥಂಕರ ದಾಸ್ ಎಂಬಾತ ಬಳಿಕ ಒಂದು ದಸ್ತಾವೇಜನ್ನು ತಯಾರಿಸಿ ಅದನ್ನು ಸಮಿತಿಯ ಎಲ್ಲಾ ಸದಸ್ಯರಿಗೂ ಕಳುಹಿಸಿದ್ದಾರೆ.

ಆ ದಸ್ತಾವೇಜಿನಲ್ಲಿರುವ ಹೇಳಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾಗ ಕೆಲವು ವಿಷಯಗಳನ್ನಷ್ಟೆ ಆಯ್ಕೆ ಮಾಡಿ ಕೆಲವು ವಿಷಯಗಳನ್ನು ಬಿಟ್ಟಿರುವುದನ್ನು ಕಾಣಬಹುದಾಗಿದೆ. ಗ್ರಾಮೀಣ ಮತ್ತು ನಗರಪ್ರದೇಶಗಳ ಬಡವರ ಅತಿದೊಡ್ಡ ಸಂಘಟನೆಯಾದ ಭೂಮಿ ಅಧಿಕಾರ್ ಆಂದೋಲನ್ (ಬಿಎಎ) ಸಲ್ಲಿಸಿದಂಥ ಸವಿವರವಾದ ಮತ್ತು ಕರಾರುವಾಕ್ಕಾದ ವಾದಗಳು ನಾಪತ್ತೆಯಾಗಿವೆ. ಮೇಧಾ ಪಾಟ್ಕರ್ ನೇತೃತ್ವದ ರಾಷ್ಟ್ರೀಯ ಜನಾಂದೋಲನ ಒಕ್ಕೂಟ (ಎನ್‌ಎಪಿಎಂ) ಮತ್ತು ಅಖಿಲ ಭಾರತ ಕಿಸಾನ್ ಸಭಾ (2 ಕೋಟಿಗೂ ಅಧಿಕ ಸದಸ್ಯರನ್ನು ಹೊಂದಿರುವ ಅತ್ಯಂತ ದೊಡ್ಡ ರೈತ ಸಂಘಟನೆ) ಮಸೂದೆಯನ್ನು ವಿರೋಧಿಸಿ ಕೊಟ್ಟಿದ್ದ ಹೇಳಿಕೆಗಳ ವಿಚಾರದಲ್ಲೂ ಇದೇ ಮೋಸದಾಟ ನಡೆದಿದೆ. ಈ ಸಂಘಟನೆಗಳು "ಸಮಿತಿಯ ಮುಂದೆ ಹೇಳಿಕೆ ಸಲ್ಲಿಸಿದ್ದಾರೆ" ಎಂದಷ್ಟೆ ಬರೆಯಲಾಗಿದೆ. "ಭೂಕಬಳಿಕೆ"ಗೆ ವಿರುದ್ಧವಾಗಿರುವ, ಸಂಘಪರಿವಾರದವರೇ ಆದ ಗೋವಿಂದಾಚಾರ್ಯರ ಹೇಳಿಕೆಯನ್ನು ಉಲ್ಲೇಖಿಸದೆ ಕೇವಲ 'ಸಲಹೆ ನೀಡಿದ್ದಾರೆ' ಎಂದು ನಮೂದಿಸಲಾಗಿದೆ. ಆದರೆ ಮಸೂದೆಯ ಪರವಾಗಿರುವವರ ಹೇಳಿಕೆಗಳಿಗೆ ತುಂಬಾ ಮಹತ್ವ ನೀಡಲಾಗಿದೆ. ಉದಾಹರಣೆಗೆ ಬಿಲ್ಡರುಗಳ ಸಂಘಟನೆಗಳು ಮಸೂದೆಯನ್ನು ಬೆಂಬಲಿಸಿ ನೀಡಿದ ಹೇಳಿಕೆಯಲ್ಲಿರುವ ಎಲ್ಲಾ ಸಲಹೆ ಸೂಚನೆಗಳನ್ನು ದಸ್ತಾವೇಜಿನಲ್ಲಿ ಕಾಣಬಹುದು. ಅದೇ ರೀತಿ ಲೋಕಸತ್ತಾ ಪಕ್ಷದ ಜಯಪ್ರಕಾಶ ನಾರಾಯಣ್ ಎಂಬಾತ ಸರ್ಕಾರದ ನಿಲುವನ್ನು ಬೆಂಬಲಿಸಿ ನೀಡಿದ ಹೇಳಿಕೆಗಳಿಗೆ ಸಾಕಷ್ಟು ಸ್ಥಳಾವಕಾಶ ನೀಡಲಾಗಿದೆ. ದಸ್ತಾವೇಜನ್ನು ತಯಾರಿಸುವಾಗ ಮತ್ತೊಂದು ಚತುರೋಪಾಯವನ್ನು ಬಳಸಲಾಗಿದೆ. ಹೆಚ್ಚುಕಡಿಮೆ ಯಾರಿಗೂ ಗೊತ್ತಿರದ, ಬೇಸಾಯದೊಂದಿಗೆ ನೇರ ಸಂಬಂಧವಿರದ ಮಂದಿಯ ಮೂಲಕ ಹೇಳಿಕೆಗಳನ್ನು ಕೊಡಿಸಿರುವುದಷ್ಟೆ ಅಲ್ಲದೆ ಇಂಥವರ ಹೇಳಿಕೆಗಳಿಗೆ ಹೆಚ್ಚು ಸ್ಥಳಾವಕಾಶವನ್ನೂ ಒದಗಿಸಲಾಗಿದೆ! ಉಗ್ರ ರಾಷ್ಟ್ರೀಯವಾದದ ಭಾಷೆಯಲ್ಲಿರುವ ಈ ಹೇಳಿಕೆಗಳಲ್ಲಿ ನೂತನ ಭೂಸ್ವಾಧೀನ ಮಸೂದೆ ದೇಶದ ಅಭಿವೃದ್ಧಿಗೆ ಅತ್ಯಗತ್ಯ ಎನ್ನಲಾಗಿದೆ. ಉಗ್ರ ರಾಷ್ಟ್ರೀಯವಾದದ ಭಾಷೆಯನ್ನು ಬಳಸುವವರಾರೆಂದು ವಿವರಿಸುವ ಅಗತ್ಯವಿಲ್ಲ!

ಆದುದರಿಂದ ಸಮಿತಿಯ ಅಂತಿಮ ವರದಿ ಬರೀ ಸುಂದರ ಹೊರರೂಪವನ್ನಷ್ಟೆ ಪಡೆಯಲಿದ್ದು ಒಳಗಡೆ ಯಾವುದೆ ನಿರ್ಣಾಯಕ ಬದಲಾವಣೆಗಳು ಇರುವುದಿಲ್ಲವೆಂದೆ ತೋರುತ್ತದೆ. ಏಕೆಂದರೆ ಜಂಟಿ ಸಮಿತಿಯ ಸದಸ್ಯರೊಬ್ಬರು ಹೇಳುವಂತೆ ಸಮಿತಿಯ ಸಭೆಗಳಿಗೆ ಹಾಜರಾಗದ ಸದಸ್ಯರು ಈ ಉಪಕಾರ್ಯದರ್ಶಿಯ ವರದಿಯನ್ನು ನೋಡಿ ತಪ್ಪು ಅಭಿಪ್ರಾಯಕ್ಕೆ ಬರುವ ಸಾಧ್ಯತೆಗಳೇ ಹೆಚ್ಚು. ವಿವಿಧ ಸಂಘಟನೆಗಳು ಮತ್ತು ತಜ್ಞರ ಹೇಳಿಕೆಗಳನ್ನು ಸೋಸಿ ಮಸೂದೆಯ ವಿರುದ್ಧವಿರುವ ವಾಕ್ಯಗಳನ್ನು ಕಿತ್ತುಹಾಕಿರುವುದು ಒಂದು ಅಪಾಯಕಾರಿ ಉಪಕ್ರಮವಾಗಿದ್ದು ಇದು ಪ್ರಜಾಸತ್ತೆಯ ಬುನಾದಿಗೇ ಏಟುನೀಡಲಿದೆ. ಮುಂದಿನ ದಿನಗಳಲ್ಲಿ ಈ ತಿರುಚಿದ ವರದಿಯನ್ನು ಅಂಗೀಕರಿಸುವ ಪ್ರಹಸನವೊಂದು ನಡೆಯಬಹುದು. ಆ ಸಂದರ್ಭದಲ್ಲಿ ಅಂತರಂಗದಲ್ಲಿ ಮುಸಿಮುಸಿ ನಗು ಇದ್ದರೆ, ಬಹಿರಂಗದಲ್ಲಿ ಜಂಟಿ ಸಮಿತಿಯ ವರದಿಗೆ ಮನ್ನಣೆ ನೀಡಲಾಗಿದೆಯೆಂಬ ಘೋಷಣೆ ಕಾಣಿಸಿಕೊಳ್ಳಬಹುದು. ಆದುದರಿಂದ ರೈತರು ಮತ್ತು ಗ್ರಾಮೀಣ ಬಡಜನತೆ ಈಗಿಂದೀಗಲೆ ಎಚ್ಚೆತ್ತುಕೊಂಡು ಈ ತೆರೆಮರೆಯ ಹುನ್ನಾರದ ವಿರುದ್ಧ ಉಗ್ರ ಹೋರಾಟ ನಡೆಸದೆ ಹೋದರೆ ಕಾರ್ಪೋರೇಟ್ ಭೂಕಬಳಿಕೆಗೆ ವಿಪುಲ ಅವಕಾಶ ನೀಡುವ ಹೊಸ ಭೂಸ್ವಾಧೀನ ಕಾಯ್ದೆ ಜಾರಿಗೊಳ್ಳಲಿರುವುದು ಗ್ಯಾರಂಟಿ.

(ಕೃಪೆ: ಜುಲೈ 18, 2015ರ ತೆಹಲ್ಕಾದಲ್ಲಿ ನಿದೀಶ್ ವಿಲ್ಲಟ್ಟಾರ ಲೇಖನ)





ನೀರ್‌ದೋಸೆ ಇಲ್ಲ

ಅಂದುಕೊಂಡಂತೆ ನಡೆದಿದ್ದರೆ ರಮ್ಯಾ ನಟನೆಯ 'ನೀರ್‌ದೋಸೆ'ಗೆ ಮರುಜನ್ಮ ಸಿಗಬೇಕಿತ್ತು, ಅದಕ್ಕಾಗಿ ನಿರ್ದೇಶಕ ವಿಜಯಪ್ರಸಾದ್ ಎರಡು ವರ್ಷದಿಂದ ಕಾದದ್ದೇ ಬಂತು. ಸದ್ಯ ಸಿಕ್ಕಿರುವ ಮಾಹಿತಿ ಪ್ರಕಾರ 'ನೀರ್‌ದೋಸೆ'ಯನ್ನು ಮಗುಚಿ ಹಾಕಿ, ಹೊಸ ಪ್ರಾಜೆಕ್ಟ್‌ನತ್ತ ಮುಂದಾಗಿದ್ದಾರೆ ನಿರ್ದೇಶಕರು.

ವಿಜಯಪ್ರಸಾದ್ ಹೊಸ ಸಿನಿಮಾದತ್ತ ವಾಲಲು ಕೇವಲ ರಮ್ಯಾ ಕಾರಣವಲ್ಲ, ಹಣಕಾಸಿನ ಸಮಸ್ಯೆಯೂ ಎದುರಾಗಿದೆ. ಈಗಾಗಲೇ ಟಿವಿ ರೈಟ್ಸ್ ಪಡೆದಿರುವ ಚಿತ್ರದ ನಿರ್ಮಾಪಕರು, ನಿರ್ದೇಶಕರಿಗೆ ಕೈ ಎತ್ತಿದ್ದಾರೆ. ಅಲ್ಲದೇ ಟಿವಿ ರೈಟ್ಸ್ ಪಡೆದಿದ್ದ ವಾಹಿನಿಯೂ ಈಗ ಸಿನಿಮಾ ತೆಗೆದುಕೊಳ್ಳಲು ಮುಂದಾಗುತ್ತಿಲ್ಲ. ಕೊಟ್ಟಿರುವ ಅಡ್ವಾನ್ಸ್‌ನ್ನೂ ವಾಪಸ್ಸು ಕೇಳುತ್ತಿದ್ದಾರೆ ಎಂಬ ಮಾಹಿತಿ ಇದೆ. ಇದೆಲ್ಲವನ್ನೂ ನಿಭಾಯಿಸಲಾಗದೇ ನಿರ್ದೇಶಕರು ಹೊಸ ಸಿನಿಮಾ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಹೊಸ ಚಿತ್ರಕ್ಕೆ ಈಗಾಗಲೇ ನಾಯಕರು ಆಯ್ಕೆ ಆಗಿದ್ದಾರೆ. ರಕ್ಷಿತ್ ಶೆಟ್ಟಿ ಮತ್ತು ನೀನಾಸಂ ಸತೀಶ್ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ನಾಯಕಿಗಾಗಿ ನಿರ್ದೇಶಕರು ತೀವ್ರ ಶೋಧ ನಡೆಸಿದ್ದಾರೆ.

ಸದ್ದಿಲ್ಲದೇ ಮುಗಿದ ಶೂಟಿಂಗ್

'ಸಿಂಪಲ್ಲಾಗೊಂದ್ ಲವ್ ಸ್ಟೋರಿ' ಖ್ಯಾತಿಯ ಸುನಿ ಸದ್ದಿಲ್ಲದೇ ಹೊಸ ಸಿನಿಮಾದ ಶೂಟಿಂಗ್ ಮುಗಿಸಿದ್ದಾರೆ. 'ಸಿಂಪಲ್ಲಾಗ್...' ನಂತರ ಸುನಿ 'ಬಹುಪರಾಕ್' ಚಿತ್ರವನ್ನು ನಿರ್ದೇಶಿಸಿದ್ದರು. ಅದು ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲಲಿಲ್ಲ, ಇವರ ನಿರ್ಮಾಣದಲ್ಲೇ ತಯಾರಾದ 'ಉಳಿದವರು ಕಂಡಂತೆ' ಚಿತ್ರವೂ ನಷ್ಟವನ್ನುಂಟುಮಾಡಿತು. ಹೀಗಾಗಿ ಸುನಿ ಸದ್ದಿಲ್ಲದೇ ಕಡಿಮೆ ಬಜೆಟ್‌ನ ಚಿತ್ರವನ್ನು ನಿರ್ದೇಶಿಸಿದ್ದಾರೆ. ಚಿತ್ರಕ್ಕೆ 'ಸಿಂಪಲ್ಲಾಗಿ ಮತ್ತೊಂದ್ ಲವ್‌ಸ್ಟೋರಿ' ಎಂದು ಹೆಸರಿಟ್ಟಿದ್ದಾರೆ.


ಸುನಿ

ಸಿಂಪಲ್ ಹುಡುಗಿ ಶ್ವೇತಾ ಶ್ರೀವಾತ್ಸವ್ ಜಾಗಕ್ಕೆ ಮೇಘನಾ ಗಾಂವ್ಕರ್‌ರನ್ನು ಕರೆತಂದಿರುವ ಸುನಿ, ಹೊಸ ಹುಡುಗನಿಗೆ ನಾಯಕನ ಪಟ್ಟ ಕಟ್ಟಿದ್ದಾರೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಗಿದಿದೆ. ಸೆಪ್ಟೆಂಬರ್‌ನಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ.

'ಸಿಂಪಲ್ಲಾಗೊಂದ್ ಲವ್ ಸ್ಟೋರಿ' ಸಿನಿಮಾದ ಮೂಲಕ ಕೋಟಿ ಕೋಟಿ ಬಾಚಿದ್ದ ಸುನಿಗೆ, ಈ ಸಿನಿಮಾದ ಮೇಲೆ ಸಾಕಷ್ಟು ಭರವಸೆ ಇದೆ. ಹೀಗಾಗಿಯೇ ಪ್ರಚಾರ ಮಾಡದೇ ಶೂಟಿಂಗ್ ಮುಗಿಸಿದ್ದಾರೆ.



ಮುತ್ತಪ್ಪ ರೈ ಆಗ್ತಾರಾ ಸುದೀಪ್

ರಿಯಲ್ ಸ್ಟೋರಿಗೆ ಹೆಸರಾದ ರಾಮ್‌ಗೋಪಾಲ್ ವರ್ಮಾ ಸದ್ಯ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾದಲ್ಲಿ ಬಿಜಿ ಆಗಿದ್ದಾರೆ. ಈ ಸಿನಿಮಾ ಮುಗಿಯುತ್ತಿದ್ದಂತೆಯೇ ಅವರು ಮತ್ತೊಂದು ಕನ್ನಡ ಸಿನಿಮಾ ಮಾಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಅದು ಮುತ್ತಪ್ಪ ರೈ ಜೀವನದಲ್ಲಿ ನಡೆದ ಘಟನೆಗಳನ್ನು ಆಧರಿಸಿದ ಚಿತ್ರವಂತೆ. ಈಗಾಗಲೇ ಮುತ್ತಪ್ಪ ರೈಯನ್ನು ಭೇಟಿ ಮಾಡಿರುವ ಆರ್‌ಜಿವಿ, ಹಲವು ಮಾಹಿತಿಗಳನ್ನು ಪಡೆದಿದ್ದಾರೆ. ಅಲ್ಲದೇ ಚಿತ್ರಕ್ಕೆ 'ಅಪ್ಪ' ಅಂತಲೂ ಹೆಸರಿಟ್ಟಿದ್ದಾರೆ. ಮುತ್ತಪ್ಪ ರೈ ಪಾತ್ರಕ್ಕೆ ಸುದೀಪ್‌ರನ್ನೂ ಕೇಳಿದ್ದಾರೆ ಎನ್ನಲಾಗುತ್ತಿದೆ.



ಸುದೀಪ್ ಏನೂ ಹೇಳದೇ ಇದ್ದರೂ, ಆರ್‌ಜಿವಿ ಈ ಕುರಿತು ಸುಳಿವು ಕೊಟ್ಟಿದ್ದಾರೆ. "ನನ್ನೊಂದಿಗೆ ಕೆಲಸ ಮಾಡಿರುವ ಕನ್ನಡದ ನಟನೇ ಈ ಸಿನಿಮಾದ ನಾಯಕ" ಎನ್ನುವ ಅರ್ಥದಲ್ಲಿ ಟ್ವಿಟ್ ಮಾಡಿದ್ದಾರೆ.


ಪ್ರಚಾರ ಬೇಡವೆಂದ ಯ...

ಪತ್ರಕರ್ತರಿಗೂ ಯಶ್‌ಗೂ ಹಾವುಮುಂಗ... ಎನ್ನುವಂತಾಗಿದೆ. ಅವರ ಮನೆ ಬಾಡಿಗೆ ... ಮಾಧ್ಯಮಗಳಲ್ಲಿ ಜೋರಾಗಿಯೇ ಸದ್ದು ... ಹೀಗಾಗಿ ಪತ್ರಕರ್ತರ ಮೇಲೆ ... ಕೋಪಿಸಿಕೊಂಡಿದ್ದಾರೆ. ತಾವು ನಟಿಸ... 'ಮಾಸ್ಟರ್‌ಪೀಸ್' ಚಿತ್ರದ ಒಂದೇ ಒಂದು ಫ... ಕೂಡ ಪತ್ರಿಕೆಗಳಿಗೆ ಕಳುಹಿಸದಂತೆ ನಿರ್ಮಾ... ತಾಕೀತು ಮಾಡಿದ್ದಾರೆ.

'ಮಾಸ್ಟರ್‌ಪೀಸ್' ಸಿನಿಮಾದ ಬಹುತೇಕ ಚಿ... ಮುಗಿದಿದೆ. ಸದ್ಯ ಹಾಡುಗಳ ಶೂಟಿಂಗ್ ನಡೆ... ಆದರೂ ಈವರೆಗೆ ಚಿತ್ರೀಕರಣದ ಒಂದೇ ಒಂದು ಫ... ಕೂಡ ಯಾರಿಗೂ ಲಭ್ಯವಾಗಿಲ್ಲ, ಇದು ಹೀಗೇ ಮುಂದು... ತಮ್ಮ ಸಿನಿಮಾದ ಪ್ರಚಾರ ಹೇಗೆ ಎಂಬ ಆತಂಕ ನಿರ್ಮಾಪಕರದ್ದು.

ಇದೇ ಸಿನಿಮಾದ ಫೋಟೋ ಶೂಟ್ ಆದಾಗ ಪತ್ರಕರ್ತರಿಗೆ ಸ್ವತಃ ಯಶ್... ಮಾಡಿದ್ದರು. ಫೋಟೋ ಪ್ರಕಟಿಸುವಂತೆ ವಿನಂತಿಸಿಕೊಂಡಿದ್ದರು. ಈಗ ಮಾಧ್ಯ... ದೂರ ಉಳಿಯುವ ನಿರ್ಧಾರ ಕೈಗೊಂಡಿದ್ದಾರೆ. ತಮಗೆ ಯ... ರೀತಿಯ ಪ್ರಚಾರ ಬೇಡವೆಂದೂ ಹೇಳಿಕೊಂಡಿದ್ದಾರೆ. ಈ ಸ... ನಾಯಕನಿಗೆ ತೊಂದರೆ ಆಗದೇ ಇರಬಹುದು, ದುಡ್ಡು... ನಿರ್ಮಾಪಕರ ಗತಿ ಏನು ಎಂಬ ಪ್ರಶ್ನೆ ಮೂಡದೇ ...

ದಿಗಂತ್‌ಗೆ ಪ್ರೀತಿ... ಸಿಗೋದು ಡೌ...



ಐದು ವರ್ಷದಿಂದ ಡಬ್ಬಾದಲ್ಲೇ ಕೊಳೆಯ... 'ಈ ಪ್ರೀತಿ' ಸಿನಿಮಾ ಸದ್ಯದಲ್ಲೇ ಬಿಡುಗಡೆ ... ಎಂಬ ಮಾತು ಗಾಂಧಿನಗರದಲ್ಲಿ ಕೇಳಿ... ಇದು ಬಹುಕೋಟಿ ವೆಚ್ಚದಲ್ಲಿ ನಿರ್ಮಾಣ... ಚಿತ್ರ. ಅಲ್ಲದೇ ಬಹುತೇಕ ಚಿತ್ರೀಕರಣ ವಿ... ನಡೆದಿದೆ. ಹೀಗಾಗಿ ದಿಗಂತ್‌ಗೂ ಸಿನಿಮಾದ ಮೇಲೆ ನಿರೀಕ್ಷೆ ಇದೆ. ಆದರೆ ಐದಾರು ವರ್ಷಗಳಿಂದ ಈ ಚಿತ್ರವನ್ನು ತೆರೆಗೆ ತರಲು ನಿರ್ಮಾಪಕರು ಹರಸಾಹಸ ಮಾಡುತ್ತಿದ್ದಾರೆ. ಹಲವು ಕಾರಣಗಳಿಂದಾಗಿ ಸಿನಿಮಾ ಬಿಡುಗಡೆ ಆಗುತ್ತಿಲ್ಲ.



ದಿಗಂತ್ ಮತ್ತು ತೇಜಸ್ವಿನಿ ಮಧ್ಯೆ ಶೂಟಿಂಗ್ ವೇಳೆಯಲ್ಲಿ ಗಲಾಟೆ ಆಗಿತ್ತು, ಅಲ್ಲದೇ ಕಲಾವಿದರ ಮತ್ತು ನಿರ್ದೇಶಕಿಯ ನಡುವೆಯೂ ಮನಸ್ತಾಪವಿತ್ತು, ಈವರೆಗೂ ಅದು ಸರಿಹೋಗಿಲ್ಲ ಎನ್ನಲಾಗುತ್ತಿದೆ. ಅಲ್ಲದೇ ಅವರು ಪ್ರಚಾರಕ್ಕೆ ಬರದೇ ಸಿನಿಮಾ ರಿಲೀಸ್ ಮಾಡುವುದು ಹೇಗೆ? ಎಂಬುದು ವಿತರಕರ ವಾದ. ಜೊತೆಗೆ ಥಿಯೇಟರ್ ಸಮಸ್ಯೆ ಪ್ರತಿ ತಿಂಗಳೂ ವಿತರಕನನ್ನು ಕಾಡುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ, ಚಿತ್ರಮಂದಿರದಿಂದ ಪ್ರೀತಿ ದೂರವೇ ಉಳಿಯುವಂತಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com